ದುಡಿಯುವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ



Blog :janashakthi.wordpress.com e-mail : js_weekly@yahoo.com

ಸಂಪುಟ 8 ಸಂಚಿಕೆ 48

ನವಂಬರ್ 30, 2014


ಪುಟ 16 ರೂ. 10/-

'ಪ್ರತಿನಿಧಿಗೆ ಒಂದು ಮತ–ಪಕ್ಷಕ್ಕೆ ಒಂದು ಮತ– ವ್ಯವಸ್ಥೆ ಬರಲಿ'

'ಪಕ್ಷಗಳ ಮತ ಗಳಿಕೆ ಪ್ರಮಾಣ ಆಧರಿಸಿ ಶಾಸನ ಸಭೆಯ ಸ್ಥಾನಗಳ ನಿಗದಿಯಾಗಲಿ'– ಯೆಚೂರಿ



ಪಂಡಿತ್ ನೆಹರು – ಸರ್ದಾರ್ ಪಟೇಲ್ ಪರಂಪರೆಯ ವಾರಸುದಾರಿಕೆಗಾಗಿ ಕಾಂಗ್ರೆಸ್ – ಬಿಜೆಪಿ ನಡುವೆ ಕದನ...!





ಮೋದಿ ಸರ್ಕಾರ: ನವ–ಉದಾರವಾದಿ..



ಮಡೆಸ್ನಾನ–ಪಂಕ್ತಿಬೇಧ, ಮೂಢನಂಬಿಕೆಗಳನ್ನು ನಿಷೇದಕ್ಕಾಗಿ ಪ್ರಗತಿಪರ ಮಠಾಧೀಶರ ಉಪವಾಸ ಸತ್ಯಾಗ್ರಹ

ದೇಹದಿಂದ ದೂರನಾದೆ ಏಕೆ ಆತ್ಮನೇ?

"ಅಲ್ಲಿ ಸೂರ್ಯ ಹೊಳೆಯುವುದಿಲ್ಲ, ಚಂದ್ರನೂ ಇಲ್ಲ, ನಕ್ಷತ್ರಗಳೂ ಇಲ್ಲ, ಈ ಮಿಂಚುಗಳೂ ಸಹ ಇಲ್ಲ, ಮತ್ತೆ ಈ ಅಗ್ನಿ ಎಲ್ಲಿದ್ದೀತು? ಜ್ಯೋತಿರ್ಮಯವಾದ ಆತ್ಮನನ್ನನುಸರಿಸಿಯೇ ಎಲ್ಲವೂ ಹೊಳೆಯುತ್ತವೆ. ಅದರ ಬೆಳಕಿನಿಂದಲೇ ಇವೆಲ್ಲ ಹೊಳೆಯುತ್ತವೆ."
–ಕಠೋಪನಿಷತ್ತು

ಆತ್ಮ ಎಂಬ ಕಲ್ಪನೆ, ಜೊತೆಯಲ್ಲಿ ಬ್ರಹ್ಮ ಎಂಬ ಕಲ್ಪನೆ ಭಾರತೀಯ ತತ್ವಶಾಸ್ತ್ರದ, ಭಾರತೀಯ ಸಂಸ್ಕೃತಿಯ ಬಹು ದೊಡ್ಡ ಸಾಧನೆ ಎಂದು ವರ್ಣಿಸಲ್ಪಡುತ್ತಿದೆ. ಆತ್ಮ, ಬ್ರಹ್ಮ ತತ್ವಗಳ ಬಗ್ಗೆ, ಮೋಕ್ಷದ ದಾರಿಯ ಬಗ್ಗೆ ಇಂದಿಗೂ ಪ್ರತಿದಿನವೂ ಹತ್ತಾರು ಸಾವಿರ ಉಪನ್ಯಾಸಗಳು ವಿವಿಧ ರೀತಿಯ ಧಾರ್ಮಿಕ ಸಂಸ್ಥೆಗಳು, ದೇವಾಲಯಗಳು, ಮಠಗಳು, ಭಕ್ತರ ಸಂಘಗಳು, ಭಕ್ತರ ಮನೆಗಳಲ್ಲಿ, ಆಧುನಿಕ ಸಂತರ ಆಶ್ರಮಗಳಲ್ಲಿ, ಪ್ರವಾಸಗಳಲ್ಲಿ ನಡೆಯುತ್ತಲೇ ಇರುತ್ತವೆ. ಈ ಸಭೆಗಳಲ್ಲಿ ಸಾಮಾನ್ಯವಾಗಿ ಮಧ್ಯಮ ವರ್ಗದ ವೃದ್ಧ ಬ್ರಾಹ್ಮಣ ಪುರುಷರು, ಮಹಿಳೆಯರೇ ದೊಡ್ಡ ಸಂಖ್ಯೆ. ಆದರೂ ಕೆಲವು ಶೂದ್ರರೂ, ಕೆಲವು ಯುವಕ, ಯುವತಿಯರೂ ಕಾಣಸಿಗುತ್ತಾರೆ. ಇದ್ದಕ್ಕಿದ್ದಂತೆ ಪ್ರಸಿದ್ಧಿ ಪಡೆಯುವ ಆಧುನಿಕ ಸಂತರ ಆಶ್ರಮಗಳಲ್ಲಿ ಅಥವಾ ಬೇರೆ 'ರಿಟ್ರೀಟ್'ಗಳಲ್ಲಿ ನಡೆಯುವ ಶಿಬಿರಗಳಲ್ಲಿ ಆಧುನಿಕ ಯುವಕ, ಯುವತಿಯರು, ಶ್ರೀಮಂತರು ಹೆಚ್ಚಾಗಿ ಕಾಣುತ್ತಾರೆ.



ವಿದೇಶಗಳ ಅನೇಕ ಆಸಕ್ತರು, ಭಕ್ತರು ಕೂಡ ಆತ್ಮ, ಬ್ರಹ್ಮನ್‌ಗಳ ಬಗ್ಗೆ ರಹಸ್ಯಗಳನ್ನು ತಿಳಿಯುವುದಕ್ಕೆಂದೇ ಭಾರತಕ್ಕೆ ಬರುತ್ತಾರೆ. ತಿಂಗಳುಗಟ್ಟಲೆ ಇಲ್ಲಿಯೇ ನೆಲಸುತ್ತಾರೆ. ಯೂರೋಪಿನಲ್ಲಿ, ಅಮೇರಿಕದಲ್ಲಿ ಭಾರತದ ಹಲವು ಸಂತರು, ಸನ್ಯಾಸಿಗಳು, ಮಠಾಧೀಶರು ಉಪನ್ಯಾಸ ಕೊಡಲೆಂದೇ ಭೇಟಿ ನೀಡುತ್ತಾರೆ. ಈ ಲೋಕ ನಶ್ವರ ಎಂದು ಬಹಳ ಆಸಕ್ತಿಕರವಾಗಿ ಉಪನ್ಯಾಸ ನೀಡುತ್ತಲೇ ತಮಗೆ ಅಥವಾ ತಮ್ಮ ಸಂಸ್ಥೆಗಳಿಗೆ ಗಣನೀಯ ನಿಧಿಗಳ ಕಾಣಿಕೆ ಪಡೆ–ಯುತ್ತಾರೆ. ಹಿಂದಿನ ಸಂಚಿಕೆಯಲ್ಲಿ ವಿವರಿಸಿದ ಯಾಜ್ಞವಲ್ಕ್ಯರ ಪರಂಪರೆ ಈ ವಿಷಯಕ್ಕೆ ಸಂಬಂಧಿಸಿಯಾದರೂ ಮುಂದುವರಿಯುತ್ತಲೇ ಇದೆ.

ಮೇಲೆ ಉಲ್ಲೇಖಿಸಿದ ಕಠೋಪನಿಷತ್ತಿನ ಶ್ಲೋಕದಲ್ಲಿ ಬಹಳ ಸ್ಪಷ್ಟವಾಗಿ ವ್ಯಕ್ತವಾಗಿರುವಂತೆ ವೇದಗಳಲ್ಲಿ ತುಂಬೆಲ್ಲಾ ವೈವಿಧ್ಯಮಯವಾಗಿ ಸ್ತುತಿಸಲ್ಪಟ್ಟ ಪ್ರಕೃತಿಯ ಅಂಗವಾದ ಸೂರ್ಯ, ಅಗ್ನಿಗಳಿಗಿಂತ ಆತ್ಮನೇ ಪ್ರಜ್ವಲಿಸುತ್ತಿದ್ದಾನೆ. ಅವನ ಬೆಳಕಿನಿಂದಲೇ ಸೂರ್ಯ, ಅಗ್ನಿ, ಚಂದ್ರ ನಕ್ಷತ್ರಗಳೂ ಹೊಳೆಯುವುದು. ಇದು ಉಪನಿಷತ್‌ಗಳ ಕಾಲದ ತಿರುವು. ನಾನು ಹಿಂದೆ ವಿವರಿಸಿದ ಎರಡನೆಯ ತಿರುವು. ಮೊದಲನೆಯ ತಿರುವು ವೇದಗಳಿಂದ ಬ್ರಾಹ್ಮಣಗಳ ಕಾಲಕ್ಕೆ ಆದ ಸ್ಥಿತ್ಯಂತರ. ವೇದಗಳಲ್ಲಿ ಕೇವಲ ಸರಳ ಆಚರಣೆಗಳಾಗಿದ್ದ, ದಿನನಿತ್ಯದ ಆಹಾರದ ಬಯಕೆ ಮತ್ತು ಹಂಚಿಕೆಯ ಸಾಧನವಾಗಿದ್ದ ಯಜ್ಞ, ಯಾಗಗಳು ರಾಜ ವೈಭವದ ಮೆರೆತದ ಹಾಗೂ ಬುಡುಕಟ್ಟುಗಳಲ್ಲಿ ರಕ್ತ ಸಂಬಂಧಿಗಳೇ ಆಗಿದ್ದ ಜನರ ಮೇಲೆ ರಾಜತ್ವವನ್ನು ಹೇರುವ ಸಾಧನವಾಗಿ ಪರಿಣಮಿಸಿದ ಮತ್ತು ದೀರ್ಘ ಕಾಲದ, ವಿವಿಧ ಆಚರಣೆಗಳ ಸಂಕೀರ್ಣವಾದದ್ದನ್ನು ಕೃಷ್ಣ ಯಜುರ್ವೇದ ಹಾಗೂ ಬ್ರಾಹ್ಮಣಗಳು ಚಿತ್ರಿಸುತ್ತವೆ. ಆಗಿನ್ನೂ ವೇದಗಳ ಆಚರಣೆಗಳಾದ ಯಜ್ಞಗಳ ಹೊರ ಕವಚವನ್ನು ತ್ಯಜಿಸಲು ಆಗಿನ ರಾಜರಿಗೆ ಆಗಿರಲಿಲ್ಲ ಮತ್ತು ರಾಜತ್ವವೂ ಅಷ್ಟು ಬಲಗೊಂಡಿರಲಿಲ್ಲ. ನಂತರದ ಕಾಲದಲ್ಲಿ ವಿಸ್ತರಿಸಿದ ರಾಜ್ಯಗಳು, ಹೆಚ್ಚು ಹೆಚ್ಚು ಆರ್ಯೇತರ ಜನರನ್ನು ಒಳಗೊಂಡ ನಂತರದಲ್ಲಿ ಯಜ್ಞ, ಯಾಗಗಳ ಆಚರಣೆಗಳನ್ನು ಮಾತ್ರವಲ್ಲ ವೇದಗಳ ದೇವಾನುದೇವತೆಗಳಿಗಿಂತ ಮಿಗಿಲಾದ ತತ್ವವನ್ನು ಜನರ ಮುಂದಿಡಲು ಸಾಧ್ಯವಾಯಿತು.

ಆತ್ಮ ಎಂಬ ತತ್ವ ಮತ್ತು ಅದರ ಜ್ಞಾನವೇ ಎಲ್ಲ ಜ್ಞಾನಕ್ಕಿಂತ ಮಿಗಿಲು ಎಂಬುದನ್ನು ಉಪನಿಷತ್ತುಗಳು ಪ್ರತಿಪಾದಿಸುತ್ತವೆ. ಮಂಡೂಕ ಉಪನಿಷತ್ತು ಇನ್ನೂ ಮುಂದಕ್ಕೆ ಹೋಗಿ ವೇದಗಳನ್ನು ಅಪರಾ ವಿದ್ಯೆ ಎಂದರೆ ಬೇರೆ ಉಪನಿಷತ್ತುಗಳ ಪರಿಭಾಷೆಯಲ್ಲಿ ಅವಿದ್ಯೆಯೆಂದು, ಲೌಕಿಕ ಜ್ಞಾನವೆಂದು ಕೂಡ ಅವುಗಳ ಸ್ಥಾನವನ್ನು ಕೆಳಗೆ ತಳ್ಳುತ್ತವೆ.

ತತ್ರಪರಾ ಋಗ್ವೇದೋ ಯಜುರ್ವೇದಃ ಸಾಮವೇದೋಥರ್ವೇದಃ
ಶಿಕ್ಷಾ ಕಲ್ಪೋ ವ್ಯಾಕರಣಂ ನಿರುಕ್ತಂ ಛಂದೋ ಜ್ಯೋತಿಷಮಿತಿ ಅಥ
ಅಥ ಪರಾ ಯಯಾ ತದಕ್ಷರಮಧಿಗಮ್ಯತೇ // 1–5
–ಮುಂಡಕೋಪನಿಷತ್ತು.

ಅಪರಾ ವಿದ್ಯೆ ಎಂಬುದು ಋಗ್ವೇದ, ಯಜುರ್ವೇದ, ಸಾಮವೇದ, ಶಿಕ್ಷ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷಗಳು ಯಾವುದರಿಂದ ನಾಶವಿಲ್ಲದ ಬ್ರಹ್ಮವನ್ನು ಪಡೆಯಬಹುದೋ ಅದು ಪರಾ ವಿದ್ಯೆ.


ಇಂದಿಗೂ ಬಹಳ ಪವಿತ್ರವೆಂದು ಮತ್ತು ಭಾರತದ ಸಂಸ್ಕೃತಿಯ ಉನ್ನತ ಜ್ಞಾನವೆಂದು ಪರಿಗಣಿಸಲಾಗಿದೆಯೋ, ಇಂದಿಗೂ ವೈದಿಕ ಎಂದು ಕರೆದುಕೊಳ್ಳಲಾಗುತ್ತಿದೆಯೊ ಅದನ್ನೇ ಉಪನಿಷತ್ತುಗಳು ಕಡೆಗಣಿಸಿದವು. ಅವು ಕೇವಲ ಲೌಕಿಕ ವಿದ್ಯೆ, ಉನ್ನತವಾದ ಆ ಧ್ಯಾತ್ಮ ವಿದ್ಯೆಯಲ್ಲ ಎಂದು ಕರೆದವು ಎಂಬುದು ಹೆಚ್ಚು ಪ್ರಚಲಿತವಾಗಿಲ್ಲ. ಅಥವಾ ಎಲ್ಲವೂ ವೇದ ಮೂಲದಿಂದಲೇ ಬಂದ ಜ್ಞಾನ ಎಂದು ಬಿಂಬಿಸಲು ಇದನ್ನು ಮರೆಮಾಚಲಾಗುತ್ತಿದೆ.

'ಆತ್ಮ' ಎಂಬ ಪರಿಕಲ್ಪನೆ

ಆತ್ಮ ಎಂಬ ಪರಿಕಲ್ಪನೆ ನಮ್ಮ ಜನ ಸಮುದಾಯಗಳ ನಡುವೆ ಹಲವಾರು ರೀತಿಯಲ್ಲಿ ದೈನಂದಿನದ ಭಾಷೆಯ ಭಾಗವಾಗಿ ಬಿಟ್ಟಿದೆ. ಆತ್ಮಾಭಿಮಾನ, ಆತ್ಮ ಹತ್ಯೆ, ಆತ್ಮ ವಿಮರ್ಶೆ, ಆತ್ಮ ನಂಬಿಕೆ ಹೀಗೆ ಮತ್ತು ಜಾನಪದದಲ್ಲಿ, ಭಜನೆಗಳಲ್ಲಿ, ಸಿನೆಮಾ ಗೀತೆ, ಮಾತುಗಳಲ್ಲಿಯೂ ಸೇರಿದೆ. ಇಂತಹ ಆತ್ಮದ ಪರಿಕಲ್ಪನೆ ಹೇಗೆ ಮೂಡಿತು ಎಂಬ ಬಗ್ಗೆ ತಿಳಿದುಕೊಳ್ಳೋಣ. ಇದು ಜಾತಿ ವ್ಯವಸ್ಥೆಯ ಉಗಮದ ಬಗೆಗಿನ ಅಧ್ಯಯನ ಮತ್ತು ಅದರ ನಿರ್ಮೂಲನಕ್ಕೆ ಅತ್ಯವಶ್ಯಕ.

ಭಾರತದ ರಾಷ್ಟ್ರಪತಿಗಳೂ ವಿಶ್ವ ಪ್ರಸಿದ್ಧ ತತ್ವಶಾಸ್ತ್ರಜ್ಞರೂ ಆಗಿದ್ದ ಸರ್ವೇಪಲ್ಲಿ ರಾಧಾಕೃಷ್ಣನ್‌ರವರ ನೇತೃತ್ವದಲ್ಲಿ 'ಯುಗಯಾತ್ರೀ ಭಾರತೀಯ ಸಂಸ್ಕೃತಿ' ಎಂಬ ಸಂಪುಟಗಳು ರಾಮಕೃಷ್ಣ ಪರಮಹಂಸರ ಶತಮಾನೋತ್ಸವದ ನೆನಪಾಗಿ ಪ್ರಕಟಿಸಲಾಗಿದೆ. ನೂರಕ್ಕೂ ಹೆಚ್ಚು ಭಾರತದ ಅತ್ಯಂತ ಪ್ರಸಿದ್ಧ ವಿದ್ವಾಂಸರುಗಳು ಸಿದ್ಧಪಡಿಸಿದ ಗ್ರಂಥ ಇದು. ಅದರ ಕನ್ನಡ ಅನುವಾದವನ್ನು ಮೈಸೂರು ವಿಶ್ವ ವಿದ್ಯಾನಿಲಯದ ಪ್ರಸಾರಾಂಗ ಪ್ರಕಟಿಸಿತು. ಈ ಗ್ರಂಥದ ಮೊದಲ ಸಂಪುಟದಲ್ಲಿ ಮಾಧವಾನಂದರು ಆತ್ಮದ ಬಗ್ಗೆ ಉಪನಿಷತ್ತುಗಳ ಅರಿವನ್ನು ಹೀಗೆ ಸಾರಾಂಶೀಕರಿಸಿದ್ದಾರೆ.

"ನಮ್ಮೆಲ್ಲರಿಗೂ ಗೋಚರವಾಗುತ್ತಿರುವ ಈ ಶರೀರವಲ್ಲದೆ ಆತ್ಮವೊಂದಿದೆ. ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು, ಮನಸ್ಸು, ಬುದ್ಧಿ, ಪ್ರಾಣ ಇವೆಲ್ಲವುಗಳಿಗಿಂತ ಈ ಆತ್ಮವು ಬೇರೆಯಾಗಿ ಮತ್ತು ಸ್ವತಂತ್ರವಾಗಿ ಇರುತ್ತದೆ. ಅಪ್ರಾಕೃತವೂ ಅಸ್ಪಷ್ಟವೂ ಆದ ಅದು ಅವಿನಾಶಿ. ಆದುದ–ರಿಂದ ಶರೀರ ನಾಶವಾದ ಮೇಲೂ ಜೀವಿಸಿರುತ್ತದೆ. ಇದ–ಕ್ಕೆ ಸಾಮಾನ್ಯವಾಗಿ ಜಾಗ್ರತ್, ಸ್ವಪ್ನ, ಸುಷುಪ್ತಿ ಎಂಬ ಮೂರು ಅವಸ್ಥೆಗಳಿರುತ್ತವೆ. ಮರಣಾನಂತರ ಇದು ತನ್ನ ಪೂರ್ವಕೃತ ಕರ್ಮ, ಪೂರ್ವಸಂಪಾದಿತ ವಿದ್ಯೆ (ಉಪಾಸನೆ) ಇವುಗಳಿಗನುಸಾರವಾಗಿ ಉಚ್ಚ ಅಥವಾ ನೀಚ ಲೋಕಗಳನ್ನು ಪಡೆಯುತ್ತದೆ. ಮತ್ತೆ ಈ ಲೋಕಕ್ಕೆ ಹಿಂದಿರುಗಲೂ ಬಹುದು."



ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿಧಿಧ್ಯಾಸಿತವ್ಯಃ
ಮೈತ್ರೇಯಿ ಆತ್ಮನೋ ವಾ ಅರೇ ದರ್ಶನೇನ ಶ್ರವ್ವಣೇನ, ಮತ್ಯಾ ವಿಜ್ಞಾನೇನ ಇದಂ ಸರ್ವ ವಿದಿತಂ // 2–4–5

ಓ ಮೈತ್ರೇಯಿ (ತನ್ನ ಹೆಂಡತಿಯನ್ನು ಉದ್ದೇಶಿಸಿ ಯಾಜ್ಞವಲ್ಕ್ಯರು ಬೃಹದಾರಣ್ಯಕೋಪನಿಷತ್ತಿನಲ್ಲಿ ಹೇಳಿದ ಮಾತು.), ತಿಳಿಯಿರಿ–ನಿಜವಾಗಿ ನೋಡಬೇಕಾದದ್ದು, ಕೇಳಬೇಕಾದ್ದು, ಚಿಂತಿಸಬೇಕಾದ್ದು, ಮಂಥನ ಮಾಡಬೇಕಾದ್ದು ಆತ್ಮವನ್ನೇ ಕುರಿತಾಗಿದೆ–ಆತ್ಮನನ್ನು ಈ ರೀತಿ ತಿಳಿದುಕೊಂಡರೆ ಇಡೀ ಜಗತ್ತನ್ನೇ ತಿಳಿದುಕೊಳ್ಳುತ್ತೇವೆ."

ಇದು ಬೃಹದಾರಣ್ಯಕೋಪನಿಷತ್ತಿನಲ್ಲಿ ಯಾಜ್ಞವಲ್ಕ್ಯರು ಹೇಳಿದ್ದಾದರೆ ಛಾಂದೋಗ್ಯ ಉಪನಿಷತ್ತಿನಲ್ಲಿ ಪ್ರಜಾಪತಿಯಿಂದಲೇ ಇಂತಹ ಹೇಳಿಕೆಯನ್ನು ಕೊಡಿಸಲಾಗಿದೆ –"ಆತ್ಮನ್ ದೋಷರಹಿತವಾದುದು, ಕಾಲಬಾಧೆಯಿಲ್ಲದ್ದು, ಅವಿನಾಶಿಯಾದುದು, ದುಃಖವಿಲ್ಲದ್ದು, ಹಸಿವಿಲ್ಲದ್ದು, ತೃಷೆಯಿಲ್ಲದ್ದು, ಸತ್ಯತೆಯೇ ಅದರ ಅಪೇಕ್ಷೆ. ಸತ್ಯವೊಂದೇ ಅದರ ಕಲ್ಪನೆ. ಇಂಥ ಆತ್ಮನನ್ನು ಹುಡುಕಿ ಕಂಡು ಹಿಡಿಯಬೇಕು. ಅದನ್ನು ಅರಿಯುವುದೇ ನಮ್ಮ ಬಯಕೆಯಾಗಬೇಕು. ಇಂಥ ಆತ್ಮನನ್ನು ಕಂಡುಕೊಂಡವನು ಜಗತ್ಸರ್ವವನ್ನೂ, ಸರ್ವ ಅಪೇಕ್ಷೆಗಳನ್ನೂ ಪಡೆಯುತ್ತಾನೆ."

ಸಾಮಾನ್ಯವಾಗಿ ಉಲ್ಲೇಖಿಸಲಾಗುವ ಕಠೋಪನಿಷತ್ತಿನ ಪ್ರಸಿದ್ಧ ವಾಕ್ಯಗಳು ಹೀಗಿವೆ:

"ಆತ್ಮನಾಂ ರಥಿನಂ ವಿದ್ಧಿ ಶರೀರಂ ರಥಮೇವ ತು
ಬುದ್ಧಿಂ ತು ಸಾರಥಿಂ ವಿದ್ಧಿ ಮನಃ ಪ್ರಗ್ರಹಮೇವಚ //

ಜೀವಾತ್ಮನನ್ನು ರಥದ ಮುಖ್ಯಸ್ಥ ಎಂದು ತಿಳಿ. ಶರೀರವೇ ಅವನ ರಥ. ಬುದ್ಧಿಯೇ ಸಾರಥಿ. ಅವನ ಮನಸ್ಸು ಕಡಿವಾಣ.

ಅಜೋ ನಿತ್ಯಃ ಶಾಶ್ವತೋಯಂ ಪುರಾಣೋ
ನ ಹನ್ಯತೇ ಹನ್ಯಮಾನೇ ಶರೀರೇ //

ಜನ್ಮ ರಹಿತನೂ ನಿತ್ಯನೂ ಶಾಶ್ವತನೂ ಆದ ಆತ್ಮನು ಶರೀರವು ನಾಶಗೊಂಡಾಗ ನಾಶವಾಗುವುದಿಲ್ಲ.

ಅಣೋರಣೀಯಾನ್ ಮಹತೋ ಮಹೀಯಾನ್
ಆತ್ಮಾಸ್ಯ ಜಂತೋಃ ನಿಹಿತೋ ಗುಹಾಯಯಾಂ //

ಆತ್ಮನು ಅಣುವಿಗಿಂತ ಅಣುವಾಗಿದ್ದಾನೆ. ಮಹತ್ತಾದುದಕ್ಕಿಂತ ಮಹತ್ತರನಾಗಿದ್ದಾನೆ. ಈ ಜೀವಿಯು ಹೃದಯ ಗುಹೆಯಲ್ಲಿ ಗೂಢನಾಗಿದ್ದಾನೆ."

ಆತ್ಮನ ಕಲ್ಪನೆ ಬಂದದ್ದು ಹೇಗೆ ?

ಮಾನವ ಶರೀರದಲ್ಲಿ ಎಲ್ಲೂ ಇಲ್ಲದ ಮತ್ತು ಮನಸ್ಸು, ಬುದ್ಧಿ ಮೊದಲಾದ ಮಾನವ ಶರೀರದ ಕ್ರಿಯೆಗಳಿಗಿಂತ ಭಿನ್ನವಾದ, ಯಾರಿಗೂ ಕಾಣದ ಈ ಆತ್ಮದ ಕಲ್ಪನೆಯನ್ನು ಉಪನಿಷತ್ತುಗಳಲ್ಲಿ ಮೊದಲ ಬಾರಿಗೆ ಮಾಡಲಾಯಿತು. ದೇಹದಿಂದ ದೂರವಾದ ಆತ್ಮನ ಕಲ್ಪನೆಯಂತಹದೇ ಸೋಲ್ ಎಂಬ ಕಲ್ಪನೆ ಯೂರೋಪಿನಲ್ಲಿಯೂ ಇದೆ. ಇದು ಜಗತ್ತಿನ ಬುಡಕಟ್ಟುಗಳಲ್ಲಿಯೂ ವಿವಿಧ ಆದಿಮ ರೂಪಗಳಲ್ಲಿದೆ.

ಈ ಆತ್ಮನ ಕಲ್ಪನೆ ಮನುಷ್ಯನಿಗೆ ಬಂದದ್ದು ಕನಸುಗಳಿಂದ. ಕನಸುಗಳಲ್ಲಿ ಮನುಷ್ಯ ಏನೇನೋ ಮಾಡಿದಂತೆ ಅಥವಾ ಅವನಿಗೆ ಏನೇನೋ ಆದಂತೆ ಕಂಡರೂ ಕನಸೊಡೆದು ಎದ್ದಾಗ ತಾನು ಮಲಗಿದ ಜಾಗದಲ್ಲಿಯೇ ಇರುವುದನ್ನು ನೋಡಿದಾಗ ತಾನು ತನ್ನ ಶರೀರವನ್ನು ಬಿಟ್ಟು ಬೇರೆಯಾಗಿದ್ದೆ. ಆ ಬೇರೆ ಏನೋ ಕನಸಿನಲ್ಲಿ ಕಂಡಿದ್ದೆಲ್ಲವನ್ನು ಅನುಭವಿಸಿತು ಅಥವಾ ಮಾಡಿತು ಎಂಬ ಭಾವನೆ ಮೂಡಿತು. ಅದರ ಜೊತೆಗೆ ಈ ಕನಸುಗಳಲ್ಲಿ, ಸತ್ತು ಹೋದ ತಾವೇ ಶರೀರವನ್ನು ಹುಗಿದಿದ್ದ ಅಥವಾ ದಹನ ಮಾಡಿದ್ದ ತಮ್ಮ ಅಮ್ಮ, ಅಪ್ಪ, ಗೆಳೆಯರು ಕೂಡ ಕನಸಿನಲ್ಲಿ ಆಗಾಗ್ಗೆ ಕಾಣುತ್ತಿದ್ದರು.

ಮನಸ್ಸಿನ ಈ ಕ್ರಿಯೆಯನ್ನು ಅರ್ಥೈಸಿಕೊಳ್ಳಲಾಗದ ಅಂದಿನ ಮಾನವ ಶರೀರದಿಂದ ಬೇರೆ–ಯೇ ಆದ ಏನೋ ಒಂದನ್ನು ಕಲ್ಪಿಸಿಕೊಂಡ. ಅದನ್ನು ಪೂಜಿಸಲಾರಂಭಿಸಿದ. ನಮ್ಮ ಪಿತೃ ಪಕ್ಷ ಅಥವಾ ಹಿರೇರ ಹಬ್ಬ, ಅವರಿಗೆ ಪ್ರಿಯವಾದ ತಿಂಡಿ, ತೀರ್ಥಗಳನ್ನು ಎಡೆ ಹಾಕುವುದು. ಅವರು ಸೇವಿಸುತ್ತಿದ್ದ ತಂಬಾಕು, ಬೀಡಿಗಳನ್ನೂ, ಕುಡಿಯುತ್ತಿದ್ದ ಕಳ್ಳು ಹೆಂಡ, ಸಾರಾಯಿಗಳನ್ನೂ ಇಡುವುದು, ಹೊಸ ಬಟ್ಟೆಗಳನ್ನು ಒಂದು ಕೊಡ–ಕ್ಕೋ ಮತ್ತಿತರ ವಸ್ತುಗಳಿಗೋ ಇಡುವುದು ಇವೆಲ್ಲಾ ಇಂದೂ ರೂಢಿಯಲ್ಲಿವೆ. ಹಲವು ಹಳ್ಳಿಗಳಲ್ಲಿ ಎಡೆಗಳನ್ನು ಬಡಿಸಿ ತಮ್ಮ ಹಿರಿಯರು ಬಂದು ಅದನ್ನು ಉಣ್ಣುವರೆಂದು ಭಾವಿಸಿ ಎಡೆಯಿಟ್ಟ ಜಾಗವನ್ನು ಬಾಗಿಲು ಹಾಕಿ ಮುಚ್ಚಿ ಕೊಂಚ ಹೊತ್ತು ಹೊರಗಿರುವುದು. ಅಥವಾ ಸತ್ತ ಮೇಲೆ ಸ್ಮಶಾನದಲ್ಲಿ ಕಾಗೆಯ ರೂಪದಲ್ಲಿ ಬಂದು ಸತ್ತವನ ಆತ್ಮ ಎಡೆಯನ್ನು ತಿನ್ನುವುದೆಂದು ಭಾವಿಸುವುದು. ಕಾಗೆ ಮುಟ್ಟುವ ತನಕ ಕಾಯುವುದು ಇವೆಲ್ಲಾ ಈ ನಂಬಿಕೆಗಳ ಕಾರಣಕ್ಕಾಗಿಯೇ ರೂಢಿಯಲ್ಲಿವೆ. ಇಂತಹ ನಂಬಿಕೆಗಳನ್ನು ಸಂಸ್ಕೃತೀಕರಿಸಿ ಅದ–ಕ್ಕೆ ಮತ್ತೇನೇನೋ ಕಲ್ಪನೆಗಳನ್ನು ಸೇರಿಸಿ ಈ ಆತ್ಮ ಎಂಬ ತತ್ವವನ್ನು ರೂಪಿಸಲಾಯಿತು. ●



▌ನಿತ್ಯಾನಂದಸ್ವಾಮಿ

ಸಂಪಾದಕೀಯ

ಭತ್ತ, ರಾಗಿ, ಜೋಳ ಬೆಳೆಯಲು ಪ್ರೋತ್ಸಾಹ ಅಗತ್ಯ

ರಾಜ್ಯದಲ್ಲಿ ರಾಗಿ ಹಾಗೂ ಬಿಳಿ ಜೋಳ ಬೆಳೆಯುವ ಪ್ರದೇಶ ಪ್ರತಿ ವರ್ಷ 20 ಸಾವಿರ ಹೆಕ್ಟೇರ್ ಕಡಿಮೆಯಾಗುತ್ತಿದೆ ಎಂಬ ಆತಂಕಕಾರಿ ಸಂಗತಿಯನ್ನು ಇತ್ತೀಚೆಗೆ ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಟಿ. ಎನ್. ಪ್ರಕಾಶ್ ಕಮ್ಮರಡಿ ತಿಳಿಸಿದ್ದಾರೆ. ರಾಗಿ ದಕ್ಷಿಣ ಕರ್ನಾಟಕದ ಜನರ ಮುಖ್ಯ ಆಹಾರ ಧಾನ್ಯವಾಗಿದ್ದರೆ ಬಿಳಿ ಜೋಳ ಉತ್ತರ ಕರ್ನಾಟಕದ ಜನರ ಮುಖ್ಯ ಆಹಾರ ಧಾನ್ಯವಾಗಿದೆ. ಇದರ ಜತೆಯಲ್ಲಿ ಮಲೆನಾಡು ಮತ್ತು ಕರಾವಳಿ ಜಿಲ್ಲೆಗಳಲ್ಲಿ ಭತ್ತ ಬೆಳೆಯುವ ಪ್ರದೇಶ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಪರಿಸ್ಥಿತಿ ಇದೇ ರೀತಿ ಮುಂದುವರೆದರೆ ಮುಂದೆ ಒಂದು ದಿನ ಆಹಾರಕ್ಕೆ ಹಾಹಾಕಾರ ಎದುರಾಗದೆ ಇರಲಾರದು.

ಒಂದು ಕಡೆ ಪ್ರತಿ ವರ್ಷವೆಂಬಂತೆ ಕೃಷಿ ಭೂಮಿ ಕಡಿಮೆಯಾಗುತ್ತಿದ್ದರೆ ಮತ್ತೊಂದೆಡೆ ರೈತರು ಆಹಾರ ಧಾನ್ಯ ಬೆಳೆಯುವುದರಿಂದಲೂ ವಿಮುಖರಾಗುತ್ತಿದ್ದಾರೆ. ಅವಿಭಾಜಿತ ದಕ್ಷಿಣ ಕನ್ನಡ ಜಿಲ್ಲೆಯ ರಸ್ತೆಗಳ ಇಕ್ಕೆಡೆಗಳಲ್ಲಿ ಅಂದು ಕಾಣಸಿಗುತ್ತಿದ್ದ ಹಸಿರು ಗದ್ದೆಗಳು, ನೇಜಿ ನೆಡುವ ಮಹಿಳೆಯರ ಹಾಗೂ ಹೊಲ ಉಳುವ ಪುರುಷರ ದೃಶ್ಯಗಳು ಈಗ ಬಹುತೇಕ ಕಣ್ಮರೆಯಾಗಿವೆ. ಗದ್ದೆಗಳು ಇದ್ದ ಕಡೆ ಈಗ ಬಹುಮಹಡಿ ಅಪಾರ್ಟ್‌ಮೆಂಟ್ಸ್, ವಾಣಿಜ್ಯ ಸಂಕೀರ್ಣಗಳು, ಕಾಂಕ್ರೀಟ್ ಮನೆಗಳು ಕಾಣಿಸುತ್ತವೆ, ಕೆಲವೆಡೆ ಹಿಂದಿನ ಭತ್ತದ ಗದ್ದೆಗಳು ಇಂದು ತೆಂಗು, ಅಡಿಕೆ, ರಬ್ಬರ್ ತೋಟಗಳಾಗಿ ಪರಿವರ್ತನೆಯಾಗಿವೆ. ಭತ್ತದ ಬೆಳೆಯಲ್ಲಿ ಸ್ವಾವಲಂಬಿಯಾಗಿದ್ದ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳು ಈಗ ಅಗತ್ಯವಿರುವ ಅಕ್ಕಿಯ ಬಹುಭಾಗವನ್ನು ಹೊರ ರಾಜ್ಯ, ಹೊರ ಜಿಲ್ಲೆಗಳಿಂದ ತರಿಸಿಕೊಳ್ಳುತ್ತಿವೆ.

ಉತ್ತರ ಕರ್ನಾಟಕದ ಜನರಿಗೆ ಅಕ್ಕಿಯ ಮೇಲೆ ಆಸೆ ಇಲ್ಲ. ಅವರಿಗೆ ಬೇಕು ಬಿಳಿ ಜೋಳದ ರೊಟ್ಟಿ ಮತ್ತು ಶೇಂಗಾ ಚಟ್ನಿ! ಆದರೆ ರೈತರು ಬಿಳಿ ಜೋಳ ಬೆಳೆಯುವುದನ್ನು ಗಣನೀಯವಾಗಿ ಕಡಿಮೆ ಮಾಡಿದ್ದಾರೆ. ಅವರು ತಮ್ಮ ಮನೆ ಬಳಕೆಗೆ ಬೇಕಾಗುವಷ್ಟು ಮಾತ್ರ ಬಿಳಿ ಜೋಳ ಬೆಳೆಯುತ್ತಿದ್ದಾರೆ. ಹೀಗಾಗಿ ಬಿಳಿ ಜೋಳದ ಬೆಲೆ ಗಗನಕ್ಕೇರುತ್ತಿದ್ದು ಉತ್ತರ ಕರ್ನಾಟಕದ ಜನರಿಗೆ ಅಕ್ಕಿ ಮತ್ತು ಜೋಳದ ನಡುವೆ ಆಯ್ಕೆ ಇಲ್ಲದಂತಾಗಿದೆ.

ರಾಗಿ ಒಂದು ಅತ್ಯುತ್ತಮ ಆಹಾರ ಧಾನ್ಯ ಎಂಬ ಗುಟ್ಟು ರಟ್ಟಾಗಿದೆ. ಅದರೊಂದಿಗೆ ಅದರ ಬೇಡಿಕೆ ರಾಜ್ಯದ ಇತರ ಭಾಗಗಳಿಗೆ ಮಾತ್ರವಲ್ಲ, ದೇಶದ ವಿವಿಧ ಭಾಗಗಳಿಗೂ ವಿಸ್ತರಿಸಿದೆ. ಆದರೆ ರೈತರು ರಾಗಿ ಬೆಳೆಯುವುದನ್ನು ಕಡಿಮೆ ಮಾಡಿರುವ ಪರಿಣಾಮವಾಗಿ ಮಾರುಕಟ್ಟೆಯಲ್ಲಿ ರಾಗಿಯೂ ಒಂದು ದುಬಾರಿ ಆಹಾರ ಧಾನ್ಯವಾಗಿದೆ.

ರೈತರು ಭತ್ತ, ರಾಗಿ, ಜೋಳ ಮುಂತಾದ ಆಹಾರ ಧಾನ್ಯಗಳನ್ನು ಬೆಳೆಯುವುದನ್ನು ಕಡಿಮೆ ಮಾಡಿದಾಗ ಬೆಲೆಗಳು ಏರುವುದಾದರೆ, ಹೆಚ್ಚಿಗೆ ಬೆಳೆದಾಗ ಬೆಲೆಗಳು ಇಳಿಯುವುದಾದರೆ ರೈತರು ಯಾವುದನ್ನು ಆಯ್ಕೆ ಮಾಡುತ್ತಾರೆ?

ಆಹಾರ ಧಾನ್ಯಗಳಿಗೆ ಉತ್ತಮ ಧಾರಣೆ ಸಿಗದಿರುವ ಕಾರಣದಿಂದ ರೈತರು ವಾಣಿಜ್ಯ ಬೆಳೆಗಳಿಗೆ ಮೊರೆ ಹೋಗುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆಯಲ್ಲ. ಭತ್ತ, ರಾಗಿ, ಜೋಳ, ದ್ವಿದಳ ಧಾನ್ಯಗಳು ಮುಂತಾದ ಆಹಾರ ಧಾನ್ಯಗಳನ್ನು ಬೆಳೆಯುವ ರೈತರಿಗೆ ಆದಾಯಕ್ಕಿಂತ ಖರ್ಚು ಹೆಚ್ಚಾಗುತ್ತದೆ. ಉತ್ಪಾದನಾ ವೆಚ್ಚಕ್ಕೆ ಅನುಗುಣವಾಗಿ ಆಹಾರ ಧಾನ್ಯಗಳಿಗೆ ಸರ್ಕಾರ ವೈಜ್ಞಾನಿಕ ದರ ನಿಗದಿಪಡಿಸಬೇಕು. ಮಧ್ಯವರ್ತಿಗಳ ಹಾವಳಿ ತಪ್ಪಿಸಲು ಸರ್ಕಾರವೇ ಮಾರುಕಟ್ಟೆಯಲ್ಲಿ ಮಧ್ಯಪ್ರವೇಶ ಮಾಡಿ, ಸರಕಾರವೇ ರೈತರಿಂದ ನೇರವಾಗಿ ಖರೀದಿಸಬೇಕು. ಆಹಾರ ಧಾನ್ಯ ಬೆಳೆಯುವ ರೈತರಿಗೆ ಕಡಿಮೆ ಬಡ್ಡಿದರದ ಸಾಂಸ್ಥಿಕ ಸಾಲವನ್ನು ಒದಗಿಸಬೇಕು. ಬೆಳೆ ವಿಮೆಯಂತಹ ಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿ ಮಾಡಬೇಕು. ಗ್ರಾಹಕರಿಗೂ ಹೊರೆಯಾಗದಂತೆ ಆಹಾರ ಧಾನ್ಯಗಳನ್ನು ಸಬ್ಸಿಡಿ ದರಗಳಲ್ಲಿ ಒದಗಿಸಬೇಕು. ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸಿ ಅಕ್ಕಿ, ಗೋದಿಯಲ್ಲದೆ ರಾಗಿ, ಬಿಳಿ ಜೋಳ, ದ್ವಿದಳ ಧಾನ್ಯಗಳನ್ನು ನಿರಂತರವಾಗಿ ಒದಗಿಸಲು ಸರ್ಕಾರ ಆದ್ಯತೆ ನೀಡಬೇಕು. ಇದು ಆಹಾರ ಹಕ್ಕಿನ ಕಾಯ್ದೆಯ ಒಂದು ಪ್ರಮುಖ ಭಾಗವಾಗಬೇಕು. ಆಹಾರ ಧಾನ್ಯಗಳನ್ನು ಸರ್ಕಾರ ರೈತರಿಗೆ ಬೆಂಬಲ ಬೆಲೆ ಕೊಟ್ಟು ಖರೀದಿಸುವ ಮತ್ತು ಗ್ರಾಹಕರಿಗೆ ಗರಿಷ್ಠ ಸಬ್ಸಿಡಿಯೊಂದಿಗೆ ಆಹಾರ ಧಾನ್ಯಗಳನ್ನು ವಿತರಿಸುವ ಮೂಲಕ ಆಹಾರ ಧಾನ್ಯ ಬೆಳೆಯುವ ರೈತರ ಮತ್ತು ಆಹಾರ ಧಾನ್ಯ ಬಳಕೆದಾರರ ಹಿತವನ್ನು ಏಕಕಾಲಕ್ಕೆ ಸಂರಕ್ಷಿಸಬಹುದು.

ಮಡೆಸ್ನಾನ–ಪಂಕ್ತಿಬೇಧ, ಮೂಢನಂಬಿಕೆಗಳನ್ನು ನಿಷೇಧಿಸುವ ಕಾನೂನಿಗಾಗಿ ಮತ್ತು ಸಾಮಾಜಿಕ ತಾರತಮ್ಯಗಳ ನಿವಾರಣೆಗೆ

ಪ್ರಗತಿಪರ ಮಠಾಧೀಶರ ಉಪವಾಸ ಸತ್ಯಾಗ್ರಹ

ಹಲವಾರು ಕೊಲೆ ಕೇಸ್‌ಗಳು, ಹತ್ತಾರು ಬಾರಿ ನ್ಯಾಯಾಲಯದ ಆದೇಶಕ್ಕೆ ತಿರಸ್ಕಾರ, ನೆಲದ ಕಾನೂನುಗಳನ್ನು ಪಾಲಿಸಲು–ಬಂಧನಕ್ಕೆ ನಕಾರ, ಮೇಲಾಗಿ ಹತ್ತಾರು ಸಾವಿರ ಭಕ್ತರನ್ನು ಸುತ್ತ ನೆರೆಸಿಕೊಂಡು ರಕ್ಷಣಾ ಕೋಟೆಯ ನಿರ್ಮಾಣ, ಸಾಲದೆಂದು ಸ್ವಂತ ಕಮಾಂಡೋ ಪಡೆಯಿಂದ ಭದ್ರತಾ ಪಡೆಗಳ ಮೇಲೆ ಆಸಿಡ್ ಎರಚಾಟ ಹಾಗೂ ಗುಂಡುಗಳ ಧಾಳಿ.. ಇದು ಹರ್ಯಾಣದ 'ದೇವ ಮಾನವ' ರಾಮ್‌ಪಾಲ್‌ನ ಕುಕೃತ್ಯಗಳ ಅನಾವರಣ, ಅಕ್ರಮ ಲೈಂಗಿಕ ಸಂಬಂಧಗಳು ಮತ್ತು ಕ್ರಿಮಿನಲ್ ಹಗರಣಗಳ ಆರೋಪಿ ನಿತ್ಯಾನಂದನ ಆರಾಧನೆಗೆ ದೇವಸ್ಥಾನದ ನಿರ್ಮಾಣದ ಪ್ರಯತ್ನಗಳು, ಗೋವುಗಳ ಸ್ವಾಮಿ ಎಂದೇ ಬಿಂಬಿಸಿಕೊಳ್ಳುವ ರಾಮಚಂದ್ರಾಪುರ ಮಠದ ರಾಘವೇಶ್ವರ ಸ್ವಾಮಿಯ ಅಕ್ರಮ ಲೈಂಗಿಕ ಸಂಬಂಧ ಮತ್ತು ದೌರ್ಜನ್ಯಗಳ ಕುರಿತ ಪ್ರಕರಣದಲ್ಲಿ ನ್ಯಾಯಾಲಯದಿಂದ ಅನಗತ್ಯ ವಿಳಂಬಕ್ಕೆ ಛೀಮಾರಿ, ಇವು ಈ ವಾರ ಧಾರ್ಮಿಕ ಕ್ಷೇತ್ರದ ಪ್ರಮುಖರು ಎನ್ನಿಸಿಕೊಂಡವರ ಕೆಲವು ಕರಾಳ ವೃತ್ತಾಂತಗಳ ದರ್ಶನ!

ಆದರೆ. . . .

ಇವೆಲ್ಲಕ್ಕಿಂತ ಭಿನ್ನವಾಗಿ ಧಾರ್ಮಿಕ, ಸಾಮಾಜಿಕವಾದ ಅತ್ಯಂತ ಜ್ವಲಂತ ಪ್ರಶ್ನೆಗಳನ್ನೆತ್ತಿಕೊಂಡು ಅವುಗಳಿಗೆ ಪರಿಹಾರವನ್ನು ಬಯಸಿ ನಾಡಿನ 208 ಪ್ರಗತಿಪರ ಮಠಾಧೀಶರು ರಾಜ್ಯದ ರಾಜಧಾನಿಯಲ್ಲಿ ಮೂರು ದಿನಗಳ ಕಾಲ ಧರಣಿಯನ್ನು ನಡೆಸಿದ್ದು ಒಂದು ವಿಶಿಷ್ಠ ಚಾರಿತ್ರಿಕ ಘಟನೆ.

ಕರ್ನಾಟಕದಲ್ಲಿ ಸಿದ್ಧರಾಮಯ್ಯನವರ ಕಾಂಗ್ರೆಸ್ ಸರಕಾರ 2013ರಲ್ಲಿ ಅಧಿಕಾರಕ್ಕೆ ಬಂದ ಹೊಸತರಲ್ಲಿ ಪಂಕ್ತಿಬೇಧ, ಮಡೆ, ಮಡೆಸ್ನಾನದಂತಹ ಪದ್ಧತಿಯ ನಿಷೇಧ ನಿರ್ಬಂಧಿಸುವ 'ಮೂಢ ನಂಬಿಕೆ ಪ್ರತಿಬಂಧಕ ಕಾಯ್ದೆ'ಯನ್ನು ತರುವ ನಿಟ್ಟಿನಲ್ಲಿ ಮಸೂದೆ ರೂಪಿಸಲು ಮುಂದಾಗಿ ಎರಡು ಕರಡುಗಳನ್ನು ತರಿಸಿಕೊಂಡಿತ್ತು. ಆದ–ರೆ ಪಟ್ಟಭದ್ರ ಹಿತಾಸಕ್ತಿಗಳು ಅದರ ವಿರುದ್ಧ ವಿಪರಿತವಾಗಿ ಅಪಪ್ರಚಾರವನ್ನು ನಡೆಸಿ ಅದರ ವಿರುದ್ಧ ಜನಾಭಿಪ್ರಾಯವನ್ನು ಉದ್ರೇಕಿಸಿದ್ದವು. ಕರಡುಗಳಲ್ಲಿದ್ದ ಕೆಲವು ಅಸ್ಪಷ್ಟತೆಗಳು, ಸರಕಾರದ ತರಾತುರಿಯಲ್ಲಿದ್ದ ಅರೆ ಬರೆ ಪ್ರಯತ್ನಗಳು ಸೇರಿ ಹುಟ್ಟಿದ್ದ ಗೊಂದಲದ ಕಾರಣಗಳಿಂದ ಪರಿಶೀಲನೆಗೆ ಮುಂದಕ್ಕೆ ಹಾಕಲಾಗಿತ್ತು. ಲೋಕಸಭಾ ಚುನಾವಣೆಯ ನಂತರ ಇದನ್ನು ಕೈಗೆತ್ತಿಕೊಳ್ಳುವುದಾಗಿ ಸರಕಾರ ಹೇಳಿತ್ತಾದರೂ ಆ ಬಳಿಕ ಮಾತನ್ನೇ ಆಡಿರಲಿಲ್ಲ.

ಆದರೆ, ಪ್ರಗತಿಪರರ ಆಗ್ರಹ ನಿಂತಿರಲಿಲ್ಲ. ಹಲವಾರು ವರುಷಗಳ ಹಿಂದೆಯೇ ಪಂಕ್ತಿಬೇಧ–ಮಡೆಸ್ನಾನ, ಜಾತಿ ತಾರತಮ್ಯದ ಪದ್ಧತಿಗಳ ಅಮಾನವೀಯ ಆಚರಣೆಗಳ ವಿರುದ್ಧ ಸಿಪಿಐ(ಎಂ) ಪಕ್ಷವು ತನ್ನ ಹೋರಾಟವನ್ನು ಮುಂದುವರಿಸಿತು. 2012ರಲ್ಲಿ ಉಡುಪಿಯಲ್ಲಿ ಸಂಘರ್ಷಾತ್ಮಕ ಹೋರಾಟದ ನಂತರ 2013 ಮತ್ತು 2014ರಲ್ಲಿ ಸಮಾವೇಶ, ಧರಣಿಗಳು, ಪ್ರತಿಭಟನೆಗಳಂತಹ ಹಲವು ಸ್ವರೂಪದ ಕಾರ್ಯಕ್ರಮಗಳು ನಡೆದವು. ಇವುಗಳಲ್ಲಿ ಧಾರ್ಮಿಕ ಕ್ಷೇತ್ರದ ಮಠಾಧೀಶರು, ಪ್ರಗತಿಪರ ಚಿಂತಕರು–ಚಳುವಳಿಗಳೂ ಭಾಗಿಯಾಗಿ ಹೋರಾಟದ ವಿಶಾಲತೆ ಮತ್ತು ಅದರ ಸ್ಫೂರ್ತಿಯ ಪಂಜನ್ನು ಸದಾ ಉರಿಯುವಂತೆ ಮಾಡಿದರು.

ಇಂತಹ ಪ್ರಯತ್ನಗಳು, ಹೋರಾಟಗಳಲ್ಲಿ ಸದಾ ತಮ್ಮನ್ನು ತೊಡಗಿಸಿಕೊಳ್ಳುತ್ತಲೇ ಸಹಮತ ಮತ್ತು ಸೌಹಾರ್ದತೆಯನ್ನು ಸಾರುತ್ತಾ ಬಂದ ನಿಡುಮಾಮಿಡಿ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ವೀರಭದ್ರ ಚನ್ನಮಲ್ಲ ಮಹಾಸ್ವಾಮಿಗಳು ಧಾರ್ಮಿಕ ಕ್ಷೇತ್ರದ ಪ್ರಮುಖರನ್ನು ತೊಡಗಿಸಲು ಮುತುವರ್ಜಿ ವಹಿಸಿದ್ದು ಅತ್ಯಂತ ಗಮನಾರ್ಹ ಸಂಗತಿಯಾಗಿದೆ. ಸದಾನಂದಗೌಡರ ಸರಕಾರವಿರುವಾಗ ನೂರಾರು ಸ್ವಾಮೀಜಿಗಳ ಧರಣಿ ಸತ್ಯಾಗ್ರಹ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ, ನಂತರ ಪ್ರಸ್ತಾಪಿತ ಮಸೂದೆಗಳ ಬಗ್ಗೆ ವಿಶ್ಲೇಷಣೆ ಮತ್ತು ನಿರ್ದಿಷ್ಟ ತಿದ್ದುಪಡಿಗಳ ಕುರಿತು ನಿಡುಮಾಮಿಡಿ ಮಠದಲ್ಲಿ ಮಠಾಧೀಶರ ಸಮಾವೇಶ, ಆ ಬಳಿಕ ಅಸ್ಪೃಶ್ಯತೆ, ಜಾತಿ ತಾರತಮ್ಯ ವಿರೋಧಿಸಿ ಬಸವಕಲ್ಯಾಣದಲ್ಲಿ ಮೂರು ದಿನಗಳ ಕಾರ್ಯಕ್ರಮ ನಡೆದವು. ಪ್ರಗತಿಪರ ಮಠಾಧೀಶರ ವೇದಿಕೆಯ ನೇತೃತ್ವದಲ್ಲಿ ಇದೇ 2014ರ ನವೆಂಬರ್ 17 ರಿಂದ 19ರವರೆಗೆ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ನಡೆದ ಧರಣಿ ಕಾರ್ಯಕ್ರಮ ಆ ಸರಣಿಯಲ್ಲಿ ನಾಲ್ಕನೆಯದು ಎನ್ನಬಹುದು. ಇದರಲ್ಲಿ 208 ಮಠಾಧೀಶರು, ಆಶ್ರಮಗಳ ಮಾತಾಜಿಗಳು ಅಲ್ಲದೇ ವಿವಿಧ ಪ್ರಗತಿಪರ ಸಂಘಟನೆಗಳು, ಸಾಹಿತಿ, ಚಿಂತಕರು, ರಾಜಕೀಯ

ಪುಟ 4 ಕ್ಕೆ



'ವಿದೇಶಿ ಕಂಪೆನಿಗಳ ಪ್ರಾಬಲ್ಯದಿಂದ ಕಾರ್ಮಿಕರಿಗೆ ಸಂಕಷ್ಟ'

ಸಿಪಿಐ(ಎಂ) ದಾವಣಗೆರೆ-ಚಿತ್ರದುರ್ಗ ಜಿಲ್ಲಾ 3ನೇ ಸಮ್ಮೇಳನದಲ್ಲಿ ಕಾಂ.ವಿಜೆಕೆ ನಾಯರ್

'ಸಾರ್ವಜನಿಕ ವಲಯದ ಜವಳಿ ಕಾರ್ಖಾನೆಗೆ ಬೀಗ ಹಾಕುವ ಮೂಲಕ ಬೃಹತ್ ಬಹುರಾಷ್ಟ್ರೀಯ ಕಂಪೆನಿಗಳ ಕೈಗಾರಿಕೆಗಳ ಸ್ಥಾಪನೆಗೆ ಸರ್ಕಾರ ಆಸಕ್ತಿ ತೋರುತ್ತಿದೆ. ಇದರ ಪರಿಣಾಮ, ಕಾರ್ಮಿಕರು ಬೀದಿ ಪಾಲಾಗಿದ್ದಾರೆ.' ಎಂದು ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ವಿ.ಜೆ.ಕೆ. ನಾಯರ್ ಆಕ್ರೋಶ ವ್ಯಕ್ತಪಡಿಸಿದರು.

ಹರಪನಹಳ್ಳಿಯಲ್ಲಿ ನವೆಂಬರ್ 10, 2014 ರಂದು ಆರಂಭಗೊಂಡ ಸಿಪಿಐ(ಎಂ) ದಾವಣಗೆರೆ-ಚಿತ್ರದುರ್ಗ ಜಿಲ್ಲೆಗಳ 3ನೇ ಜಿಲ್ಲಾ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

70 ರ ದಶಕದಲ್ಲಿ ದಾವಣಗೆರೆ ನಗರದಲ್ಲಿ 10-15 ಜವಳಿ ಗಿರಣಿಗಳು ಸೇರಿದಂತೆ ರಾಜ್ಯದಲ್ಲಿ 33 ಕ್ಕೂ ಅಧಿಕ ಜವಳಿ ಉದ್ಯಮಗಳಿದ್ದವು. 1.50 ಲಕ್ಷಕ್ಕೂ ಅಧಿಕ ಕಾರ್ಮಿಕರು ಅದರಲ್ಲಿ ದುಡಿಯುತ್ತಿದ್ದರು. ಆದರೆ, ಬಹುರಾಷ್ಟ್ರೀಯ ಕಂಪೆನಿಗಳಿಗೆ ಸರ್ಕಾರ ರತ್ನಗಂಬಳಿ ಹಾಸಿದ ಪರಿಣಾಮ ಬಹುತೇಕ ಕಾರ್ಖಾನೆಗಳು ಬಾಗಿಲು ಮುಚ್ಚಿದವು. ರೈತರ ಬದುಕು ಅಸಹನೀಯವಾಯಿತು ಎಂದು ಹೇಳಿದರು.

ಸ್ವಾತಂತ್ರ್ಯಪೂರ್ವದಲ್ಲಿಯೇ ಹರಿಹರ ಕಿರ್ಲೋಸ್ಕರ್ ಕಾರ್ಖಾನೆ, ಭದ್ರಾವತಿ ಪೇಪರ್ ಮಿಲ್ ಮತ್ತು ಉಕ್ಕಿನ ಕಾರ್ಖಾನೆಗಳು ಉತ್ತುಂಗದಲ್ಲಿದ್ದವು. ಆದರೆ, ಸ್ವಾತಂತ್ರ್ಯಾನಂತರ ಸರಕಾರಗಳ ಇಚ್ಛಾಶಕ್ತಿ ಕೊರತೆಯಿಂದಾಗಿ ಕೈಗಾರಿಕೆಗಳಿಗೆ ಪ್ರೋತ್ಸಾಹ ದೊರಕಲಿಲ್ಲ. ಗುಡಿ ಕೈಗಾರಿಕೆ ಹಾಗೂ ಸಣ್ಣ ಕೈಗಾರಿಕೆಗಳನ್ನು ಹಾಗೂ ಕಾರ್ಮಿಕರ ಹಿತವನ್ನು ರಕ್ಷಿಸಬೇಕು. ಅಂತಹ ನೀತಿಗಳಿಂದ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ಎಂದು ಅವರು ಅಭಿಪ್ರಾಯಪಟ್ಟರು.



ಬರಪೀಡಿತ ಚಿತ್ರದುರ್ಗ-ಹರಪನಹಳ್ಳಿ ಜಗಳೂರುಗಳಿಗೆ ನೀರಾವರಿಗಾಗಿ ಹೋರಾಟ ಅಗತ್ಯ- ಆರ್. ಎಸ್. ಬಸವರಾಜ್

ಹರಪನಹಳ್ಳಿ-ಜಗಳೂರು, ಚಿತ್ರದುರ್ಗಗಳು ಬರದ ಬವಣೆಯಿಂದ ಮುಕ್ತಿ ಪಡೆಯಲು ಮತ್ತು ಅಭಿವೃದ್ಧಿ ಹೊಂದಲು ಡಾ. ಪರಮಶಿವಯ್ಯ ವರದಿಯಂತೆ ಶಾಶ್ವತ ನೀರಾವರಿ ಯೋಜನೆ ಜಾರಿಗಾಗಿ ಪ್ರಬಲ ಚಳುವಳಿ ಸಂಘಟಿಸಬೇಕೆಂದು ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಆರ್. ಎಸ್. ಬಸವರಾಜ್ ರವರು ಹೇಳಿದರು.

ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ.ಎಲ್.ಭಟ್ ಅಧ್ಯಕ್ಷತೆ ವಹಿಸಿದ್ದರು. ಎಚ್. ವೆಂಕಟೇಶ್, ಮಲಿಯಪ್ಪ, ವೆಂಕಟೇಶ ಬೇವಿನಹಳ್ಳಿ, ಎಲ್.ಬಿ. ಹಾಲೇಶನಾಯ್ಕ ಇದ್ದರು. ಪ್ರೊ.ಡಿ.ಬಿ.ಬಡಿಗೇರ ಅವರು ಪ್ರಾಸ್ತಾವಿಕ ಮಾತನಾಡಿದರು. ಟಿ.ವಿ.ರೇಣುಕಮ್ಮ ಸ್ವಾಗತಿಸಿದರು. ವೆಂಕಟೇಶ್ ಕಾರ್ಯಕ್ರಮ ನಿರೂಪಿಸಿದರು. ಈಶ್ವರನಾಯ್ಕ ಸಂಗಡಿಗರು ಕ್ರಾಂತಿಗೀತೆ ಹಾಡಿದರು. ಇದಕ್ಕೂ ಮೊದಲು ಹರಪನಹಳ್ಳಿಯ ಪ್ರವಾಸಿಮಂದಿರದ ಆವರಣದಿಂದ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಯಿತು. ನೂರಾರು ಸಂಖ್ಯೆಯಲ್ಲಿ ಸಿಪಿಐ(ಎಂ) ಕಾರ್ಯಕರ್ತರು, ಕಾರ್ಮಿಕರು, ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ಕಾರ್ಯಕರ್ತೆಯರು, ಕೃಷಿ ಕೂಲಿ ಕಾರ್ಮಿಕರು ಹಾಗೂ ವಿದ್ಯಾರ್ಥಿಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ನಂತರ ಕ್ಯಾ. ಲಕ್ಷ್ಮಿ ಸೆಹಗಲ್ ವೇದಿಕೆಯಲ್ಲಿ ನಡೆದ ಪ್ರತಿನಿಧಿ ಅಧಿವೇಶನಕ್ಕೆ ಮುಂಚೆ ಕೆ.ಎಲ್. ಭಟ್ ಅವರು ಪಕ್ಷದ ಧ್ವಜಾರೋಹಣ ಮಾಡಿದರು. ಅಗಲಿದ ಸಂಗಾತಿಗಳಿಗೆ ಪುಷ್ಪನಮನ ಸಲ್ಲಿಸಲಾಯಿತು.

ಪ್ರೊ. ಬಡಿಗೇರ, ರೇಣುಕಮ್ಮ ಅವರನ್ನೊಳಗೊಂಡ ಅಧ್ಯಕ್ಷೀಯ ಮಂಡಳಿಯು ಪ್ರತಿನಿಧಿ ಅಧಿವೇಶನವನ್ನು ನಡೆಸಿಕೊಟ್ಟಿತು. ಜಿಲ್ಲಾ ಕಾರ್ಯದರ್ಶಿಗಳು ರಾಜಕೀಯ ಸಂಘಟನಾ ಕರಡು ವರದಿ ಮಂಡಿಸಿದರು. ಪ್ರತಿನಿಧಿ ಚರ್ಚೆಯ ಮೂಲಕ ವರದಿ ಅಂಗೀಕರಿಸಲಾಯಿತು. ನವೆಂಬರ್ 11 ರಂದು ಮುಂದುವರಿದ ಸಮ್ಮೇಳನವು ಕೊನೆಯಲ್ಲಿ 9 ಜನರ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಿತು. ಸಮಿತಿಯ ಕಾರ್ಯದರ್ಶಿಯಾಗಿ ಕೆ. ಎಲ್. ಭಟ್ ಪುನರಾಯ್ಕೆಯಾದರು. ವಿಜೆಕೆ ನಾಯರ್ ಅವರು ಸಮಾರೋಪ ಭಾಷಣ ಮಾಡಿ ಚಿತ್ರದುರ್ಗ-ದಾವಣಗೆರೆ ಜಿಲ್ಲೆಗಳಲ್ಲಿ ಬಲಿಷ್ಠ ಜನಾಂದೋಲನ ಬೆಳೆದು ಬರಲಿ ಎಂದು ಆಶಿಸಿದರು.

ಈ ವಾರ......

ಪುಟ 3 ರಿಂದ

ಪಕ್ಷಗಳ ಮುಖಂಡರು ಈ ಮೂರು ದಿನಗಳ ಕಾಲ ಭಾಗಿಯಾಗಿ ಸೌಹಾರ್ದತೆ ಸಾರಿದರು.

ಈ ಸಂದರ್ಭದಲ್ಲಿ ಅನಿವಾರ್ಯವಾಗಿ ಕೆಲವು ಪ್ರಶ್ನೆಗಳನ್ನು ಕೇಳಲಾಯಿತು. ಮೌಢ್ಯತೆ ನಿರ್ಬಂಧಿಸುವ ಕಾಯ್ದೆಯನ್ನು ತರದಂತೆ ವಿರೋಧಿಸುವವರು ಯಾರು? ಯಾಕೆ? ಇವುಗಳನ್ನು ಎದುರಿಸಿ ಕ್ರಮ ವಹಿಸುವ ಬದ್ಧತೆ, ನೈತಿಕಸ್ಥೈರ್ಯ ಸರಕಾರಕ್ಕೆ ಯಾಕಿಲ್ಲ? 'ಅವರು' ಈ ಫಲ ಜೋತಿಷ್ಯ, ವಾಸ್ತು, ಮಡೆಸ್ನಾನ ಮುಂತಾದ ಅನಿಷ್ಟಗಳಿಂದ ಲಾಭ ಪಡೆದು ಸಮೃದ್ಧವಾಗಿ ನಿರಾತಂಕ ಜೀವನ ನಡೆಸುವವರೇ ಆಗಿದ್ದಾರೆ. ಸರಕಾರ ಕಾಲ ಮಿಂಚುವ ಮೊದಲೇ ಎಚ್ಚೆತ್ತು-ಕೊಂಡು ದೃಢ ನಿರ್ಧಾರಕ್ಕೆ ಬರಬೇಕು ಎಂದು ವೇದಿಕೆಯು ಆಗ್ರಹಿಸಿತು.

ನವೆಂಬರ್ 17ರಂದು 'ಮೂಢನಂಬಿಕೆ ನಿಷೇಧ ಕಾನೂನು ಮತ್ತು ಸಾಮಾಜಿಕ ತಾರತಮ್ಯಗಳ ನಿವಾರಣೆಗೆ ಒತ್ತಾಯಿಸಿ ಆರಂಭಗೊಂಡ ಸತ್ಯಾಗ್ರಹಕ್ಕೆ ಚಾಲನೆ ನೀಡಿ ಮಾತನಾಡಿದ ನಿಡುಮಾಮಿಡಿ ಸ್ವಾಮೀಜಿಯವರು " ಮಡೆ, ಮಡೆ ಸ್ನಾನ ವಿರೋಧಕ್ಕೆ ಸುಪ್ರಿಂ ಕೋರ್ಟ್ ಆದೇಶ ನೀಡಿದ ನಂತರ ಎಡೆಸ್ನಾನ ಪ್ರಾರಂಭವಾಗಿದೆ. ದೇವರ ಮುಂದಿಟ್ಟ ಎಡೆ ಮೇಲೆ ಜನರು ಉರುಳುವುದು ಸರಿಯಲ್ಲ. ಅದು ಧಾರ್ಮಿಕವೂ ಅಲ್ಲ. ಇದರಿಂದ ಬದುಕಲು ಸೇವಿಸಬೇಕಾದ ಆಹಾರ ವ್ಯರ್ಥವಾಗುವುದೇ ವಿನಃ ಪಾಪ, ರೋಗ ಪರಿಹಾರವಾಗುವುದಿಲ್ಲ.' ಎಂದರು.

"ಧರ್ಮ, ದೇವರ ಹೆಸರಿನಲ್ಲಿ ಅನಾಚಾರ, ವ್ಯಭಿಚಾರ, ಹೆಣ್ಣು ಮಕ್ಕಳ ಮಾರಾಟ ನಡೆ-ಯುತ್ತದೆ. ಕಾನೂನಿನಿಂದಲೇ ಎಲ್ಲವನ್ನೂ ಸರಿಪಡಿಸಲು ಸಾಧ್ಯವಿಲ್ಲ ಎಂಬುದು ಗೊತ್ತಿದೆ. ಮನಸ್ಸುಗಳೂ ಬದಲಾಗಬೇಕು". " ನಮ್ಮ ಪ್ರಮುಖ 11 ಬೇಡಿಕೆಗಳಲ್ಲಿ ಶೇ.95 ಸಾಮಾಜಿಕ ನೆಲೆಯವಾಗಿವೆ. ಶೇ.5 ಮಾತ್ರ ಧಾರ್ಮಿಕ ನೆಲೆಯಲ್ಲಿವೆ. ವರ್ಷದ ಹಿಂದೆಯೇ ಮೂಢನಂಬಿಕೆ ನಿಷೇಧ ಕಾಯ್ದೆಯನ್ನು ಜಾರಿಗೆ ತರಬೇಕಿತ್ತು. ಆದರೆ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಈ ಕಾಯ್ದೆ ಬಗ್ಗೆ ಅಪಪ್ರಚಾರ ಮಾಡಿದ್ದರಿಂದ ಅದು ಮೂಲೆ ಗುಂಪಾಯಿತು. ಆದರೆ ಸರಕಾರ ಈಗಲಾದರೂ ಅಂತಹ ಮಸೂದೆಯನ್ನು ಕಾಯ್ದೆಯಾಗಿಸಲು ದೃಢ ಕ್ರಮ ವಹಿಸಲೇಬೇಕು. ನಮ್ಮ ಬೇಡಿಕೆಗಳನ್ನು ಈಡೇರಿಸುವವರೆಗೂ ಈ ಹೋರಾಟ ನಿರಂತರ." ಎಂದರು. ಅವರು ಪಟ್ಟಭದ್ರ ಹಿತಾಸಕ್ತಿಗಳು ವಹಿಸಿದ ಪ್ರತಿಗಾಮಿ ಪಾತ್ರವನ್ನು ಐತಿಹಾಸಿಕವಾಗಿ ವಿಶ್ಲೇಷಿಸಿದರು. ಚಳುವಳಿಯ ಬೇಡಿಕೆಗಳಾಗಿ ಮಡೆಸ್ನಾನ-ಪಂಕ್ತಿಭೇದದ ನಿಷೇಧ, ಮೂಢನಂಬಿಕೆ ನಿಷೇಧ ಕಾಯ್ದೆ ತರುವುದು, ಬಾಲ್ಯ ವಿವಾಹ-ಬೆತ್ತಲೆ ಸೇವೆ-ಜೀತ ಪದ್ಧತಿಗಳ ನಿಷೇಧ, ದೇವದಾಸಿ ಪದ್ಧತಿಗೆ ತಡೆ, ಪೌರ ಕಾರ್ಮಿಕರು, ಅಲೆಮಾರಿ ಸಮುದಾಯಗಳ ಬೇಡಿಕೆಗಳ ಈಡೇರಿಕೆ ಮುಂತಾದ ಪ್ರಶ್ನೆಗಳಿವೆ.

ಧರಣಿಯಲ್ಲಿ ಭಾಗವಹಿಸಿದ್ದ ಸಾಣೆಹಳ್ಳಿ ಮಠದ ಡಾ.ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಬೇಲಿಮಠದ ಶ್ರೀ ಶಿವರುದ್ರ ಸ್ವಾಮೀಜಿ, ವಿಶ್ವ ಒಕ್ಕಲಿಗರ ಪೀಠದ ಶ್ರೀ ಚಂದ್ರಶೇಖರನಾಥ ಸ್ವಾಮೀಜಿ, ಹಿರಿಯ ಸಾಹಿತಿ ಡಾ.ಮರುಳಸಿದ್ದಪ್ಪ ಮುಂತಾದವರು ಮಾತನಾಡಿದರು.

ಈ ಧರಣಿ ಮೂರು ದಿನಗಳ ಕಾಲ ನಡೆದಿದೆ. ಈ ನಡುವೆ ಎರಡನೆಯ ದಿನ ಸರಕಾರದ ಕಾನೂನು ಸಚಿವರಾದ ಜಯಚಂದ್ರರವರು ಭೇಟಿ ನೀಡಿ ಚರ್ಚಿಸಿದ್ದಾರೆ. ಸರಕಾರದಿಂದ ಖಚಿತ ಭರವಸೆ ದೊರೆತ ಬಳಿಕವೇ ಈ ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸುವುದಾಗಿ ತಿಳಿಸಲಾಗಿದೆ. ಮೂರನೆಯ ದಿನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಸ್ವಾಮೀಜಿಗಳ ನಿಯೋಗ ಭೇಟಿ ಮಾಡಿ ಚರ್ಚಿಸಿದೆ. ಆ ಬಳಿಕ ಸರಕಾರ ಕಾನೂನು ಸಚಿವರಾದ ಜಯಚಂದ್ರ, ಲೋಕೋಪಯೋಗಿ ಸಚಿವರಾದ ಹೆಚ್.ಸಿ. ಮಹಾದೇವಪ್ಪನವರು ಸತ್ಯಾಗ್ರಹದ ಸ್ಥಳಕ್ಕೆ ಭೇಟಿ ನೀಡಿ ಖಚಿತ ಭರವಸೆ ನೀಡಿದ ನಂತರ ಹಣ್ಣಿನ ರಸವನ್ನು ನಿಡುಮಾಮಿಡಿ ಸ್ವಾಮೀಜಿಯವರಿಗೆ ಕುಡಿಸುವುದರೊಂದಿಗೆ ಉಪವಾಸ ಮುಕ್ತಾಯಗೊಳಿಸಲಾಯಿತು. ಸಮಾರೋಪದ ಮಾತುಗಳನ್ನಾಡಿದ ನಿಡುಮಾಮಿಡಿ ಸ್ವಾಮಿಯವರು ಸರಕಾರದ ಮಾತಿನ ಮೇಲೆ ನಂಬಿಕೆ ಇರಿಸಲಾಗಿದ್ದು, ಕ್ರಮಗಳನ್ನು ಕೈಗೊಳ್ಳುವುದನ್ನು ನೋಡುವುದಾಗಿ ತಿಳಿಸಿದರು. ಒಗ್ಗಟ್ಟು ತೋರಿದ್ದಕ್ಕೆ, ಸೌಹಾರ್ದತೆ ವ್ಯಕ್ತಪಡಿಸಿದ್ದಕ್ಕೆ ಕೃತಜ್ಞತೆ ತಿಳಿದರು. ಮತ್ತು ಈ ಅಮಾನವೀಯ ಪದ್ಧತಿಗಳ ವಿರುದ್ಧದ ಹೋರಾಟ ನಿಲ್ಲದು, ಈ ವರ್ಷ ಮಡೆಸ್ನಾನ ನಡೆಸಬಹುದು ಎಂಬ ಹೈಕೋರ್ಟ್ ನಿರ್ದೇಶನದ ಬಳಿಕವೂ ಬೇಡಿಕೆಗಳಿಗಾಗಿ ಹೋರಾಟ ಮುಂದುವರಿಯಲಿದೆ. ಇದು ತಾತ್ಕಾಲಿಕ ತೀರ್ಪು, ಸರಕಾರ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಬೇಕು ಎಂದು ಸ್ಪಷ್ಟಪಡಿಸಿದರು.

ಒಟ್ಟಾರೆ ಈ ಹೋರಾಟ ಶ್ಲಾಘನೀಯವಾದ, ಮಹತ್ವದ ಒಂದು ಹೆಜ್ಜೆಯಾಗಿದೆ.

ಪ್ರಗತಿಪರ ಮಠಾಧೀಶರ ವೇದಿಕೆ ನೇತೃತ್ವದಲ್ಲಿ ನಡೆದ ಉಪವಾಸ ಸತ್ಯಾಗ್ರಹವನ್ನು ಬೆಂಬಲಿಸಿ ನವೆಂಬರ್, 19ರಂದು ಸಿಪಿಐ(ಎಂ)ನ ರಾಜ್ಯ ಮುಖಂಡತ್ವವು ಭಾಗವಹಿಸಿತು. ಈ ಕುರಿತು ಮಾತನಾಡಿದ ಪಕ್ಷದ ರಾಜ್ಯ ಕಾರ್ಯದರ್ಶಿ ಕಾಂ.ಜಿ.ವಿ.ಶ್ರೀರಾಮರೆಡ್ಡಿಯವರು " ರಾಜ್ಯದಲ್ಲಿ ಮೌಢ್ಯಾಚಾರದ ವಿರುದ್ಧ ಬೀದಿಗಿಳಿದು ಪ್ರತಿಭಟನೆ ಮಾಡಿದ್ದು ಸಿಪಿಐ(ಎಂ) ಪಕ್ಷ. ಉಡುಪಿಯ ಶ್ರೀಕೃಷ್ಣ ಮಠದಲ್ಲಿ ನಡೆಯುತ್ತಿರುವ ಪಂಕ್ತಿಭೇದದ ವಿರುದ್ಧ ಪ್ರತಿಭಟನೆ ಮಾಡಿದ್ದರಿಂದ ಸುಳ್ಳು ದೂರುಗಳನ್ನು ನಮ್ಮ ಮೇಲೆ ಹಾಕಲಾಗಿದೆ. ಕುಕ್ಕೆ ಸುಬ್ರಮಣ್ಯದಲ್ಲಿ ನಡೆಸುತ್ತಿರುವ ಅನಿಷ್ಟ ಮಡೆ ಮಡೆ ಸ್ನಾನದ ವಿರುದ್ಧ ರಾಜ್ಯದಾದ್ಯಂತ ಬೃಹತ್ ಚಳುವಳಿಯನ್ನು ಸಿಪಿಐ(ಎಂ) ಸಂಘಟಿಸಿದೆ. ತಾವೂ ಸಹ ಹೋರಾಟ ನಡೆಸುತ್ತಿರುವುದು ಸ್ವಾಗತಾರ್ಹ. ನಿಮ್ಮ ಹೋರಾಟಕ್ಕೆ ನಮ್ಮ ಪಕ್ಷದ ಬೆಂಬಲವಿದೆ." ಎಂದರು.

ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು, ಜನಶಕ್ತಿ ವಾರಪತ್ರಿಕೆಯ ಸಂಪಾದಕರಾದ ಕಾಂ.ನಿತ್ಯಾನಂದಸ್ವಾಮಿಯವರು "ನಮ್ಮ ಸಮಾಜದಲ್ಲಿನ ಪಟ್ಟಭದ್ರ ಹಿತಾಸಕ್ತಿಗಳು ನಮ್ಮ ಸಮಾಜವೂ ಬದಲಾವಣೆಯಾಗಲಾರದೆಂಬ ಭ್ರಮೆಯನ್ನು ಜನರಲ್ಲಿ ತುಂಬಿ ಜನರು ಬದಲಾವಣೆಯನ್ನು ಬಯಸದಂತೆ ಅವರ ಆಲೋಚನೆಗಳನ್ನು ಬೆಳೆಸುತ್ತಿದ್ದಾರೆ. ಆದರೆ ಜಗತ್ತಿನ ಶ್ರೇಷ್ಠ ಸಮಾಜ ವಿಜ್ಞಾನಿ ಕಾರ್ಲ್‌ಮಾರ್ಕ್ಸ್ ಹೇಳಿರುವಂತೆ ಸಮಾಜದಲ್ಲಿ ಬದಲಾವಣೆ ಎಂಬ ಪದ ಬಿಟ್ಟು ಮತ್ತೆಲ್ಲಾ ಅಂಶಗಳು ಬದಲಾಗುತ್ತಾ ಸಾಗುತ್ತಿದೆ. ಆದ್ದರಿಂದ ಸಮಾಜವನ್ನು ಬದಲಾಯಿಸುವ ಕಾಯಕದಲ್ಲಿ ನಾವು ಮತ್ತು ನೀವು ಒಟ್ಟಾರೆ-ಯಾಗಿ ದುಡಿಯೋಣ." ಎಂದು ತಮ್ಮ ಬೆಂಬಲವನ್ನು ಸೂಚಿಸಿದರು.

ಮತ್ತೊಬ್ಬ ಕಾ.ಮಂ. ಸದಸ್ಯರಾದ ಕಾಂ. ಎಸ್.ವರಲಕ್ಷ್ಮಿಯವರು ಮಾತನಾಡಿ ಸಮಾಜದಲ್ಲಿನ ಮೌಢ್ಯಾಚಾರಗಳಿಗೆ ಹೆಚ್ಚಾಗಿ ಬಲಿಯಾಗುತ್ತಿರುವವರು ಮಹಿಳೆಯರು. 21ನೇಯ ಶತಮಾನದಲ್ಲೂ ಮುಟ್ಟಾದ ಮಹಿಳೆಯರನ್ನು ತಮ್ಮ ಮನೆಯಿಂದ ದೂರವಿಡುವಂತಹ ಹೇಯ ಕೃತ್ಯಗಳು ನಮ್ಮ ಸಮಾಜದಲ್ಲಿ ನಡೆಯುತ್ತಿರುವುದು ನಾಗರೀಕ ಸಮಾಜವೇ ತಲೆ ತಗ್ಗಿಸುವಂತಹ ವಿಷಯ. ಇಂತಹ ಸಮಯದಲ್ಲಿ ಮಹಿಳೆಯರಿಗೆ ರಕ್ಷಣೆ ನೀಡಬೇಕಾಗಿರುವುದು ಸರ್ಕಾರದ ಮತ್ತು ಸಮಾಜದ ಕೆಲಸವಾಗಿರುತ್ತದೆ ಎಂದರು.

ದೇವದಾಸಿ ವಿಮೋಚನಾ ಸಂಘಟನೆಯ ವತಿಯಿಂದ ಬೆಂಬಲಿಸಿ ಸತ್ಯಾಗ್ರಹ ಬೆಂಬಲಿಸಿ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ.ಯು.ಬಸವರಾಜ್ ಮಾತನಾಡಿದರು.

ಈ ಸತ್ಯಾಗ್ರಹದಲ್ಲಿ ಸಮುದಾಯ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಟಿ.ಸುರೇಂದ್ರರಾವ್, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷೆ ಕಾಂ.ಕೆ.ಎಸ್.ವಿಮಲಾ, ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಕಾಂ. ಮಾರುತಿ ಮಾನ್ಪಡೆ, ಭಾರತ ಜ್ಞಾನ ವಿಜ್ಞಾನ ಸಮಿತಿಯ ಕಾರ್ಯದರ್ಶಿ ಎನ್.ಪ್ರಭಾ, ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಕಾಂ.ಎಸ್.ವೈ.ಗುರುಶಾಂತ್ ಮುಂತಾದವರು ಭಾಗವಹಿಸಿದ್ದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಹುಬ್ಬಳ್ಳಿ: ಸಿಪಿಐ(ಎಂ) 10ನೇ ಧಾರವಾಡ ಜಿಲ್ಲಾ ಸಮ್ಮೇಳನ

"ರಾಜ್ಯ ವಿಭಜನೆ ಸಲ್ಲ, ಮೋದಿ ನೀತಿ ಸರಿಯಿಲ್ಲ"


-ಎಸ್. ಪ್ರಸನ್ನ ಕುಮಾರ.

"ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಮಹತ್ತರವಾದ ಪಾತ್ರವನ್ನು ವಹಿಸಿದ ಈ ನೆಲದಲ್ಲಿ, ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯಕ್ಕೆ ಬಿಜೆಪಿಯ ಮಾಜಿ ಸಚಿವ ಉಮೇಶ ಕತ್ತಿ ಕೂಗೆಬ್ಬಿಸುತ್ತಿದ್ದಾರೆ. ಇದು ಅಖಂಡ ಕರ್ನಾಟಕದ ಆಶಯಕ್ಕೆ ಧಕ್ಕೆ ತರುವ ಅಪಾಯಕಾರಿ ಹೇಳಿಕೆಯಾಗಿದ್ದು ಇದನ್ನು ಒಕ್ಕೊರಲಿನಿಂದ ವಿರೋಧಿಸಿ ಅಖಂಡ ಕರ್ನಾಟಕವನ್ನುಳಿಸಬೇಕಿದೆ. ಉತ್ತರ ಕರ್ನಾಟಕದಿಂದಲೇ ಆಯ್ಕೆಯಾಗಿ ಅಧಿಕಾರ ನಡೆಸಿದ ಇವರು ಅಧಿಕಾರಾವಧಿಯಲ್ಲಿ ಏನು ಮಾಡಿದರು ಹೇಳಬೇಕು. ಉತ್ತರ ಕರ್ನಾಟಕ ಭಾಗದವರು ಮುಖ್ಯಮಂತ್ರಿ ಸೇರಿದಂತೆ ಪ್ರಮುಖ ಹುದ್ದೆಗಳನ್ನು ಅನುಭವಿಸಿದ್ದರೂ ಈ ಭಾಗದ ಜನರ ಪ್ರಮುಖ ಸಮಸ್ಯೆಗಳನ್ನು ಬಗೆಹರಿಸಲು ಏಕೆ ಸಾಧ್ಯವಾಗಲಿಲ್ಲ. ಇವರು ಅಧಿಕಾರದ ಹಪಾಹಪಿಯಿಂದ ಜನರ ದಿಕ್ಕು ತಪ್ಪಿಸುತ್ತಿದ್ದಾರೆ." ಎಂದು ಎಂದು ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್. ಪ್ರಸನ್ನಕುಮಾರ ಹೇಳಿದರು.

ಹುಬ್ಬಳ್ಳಿಯ ಜೆ.ಸಿ. ನಗರದ ಕ್ಯಾಪ್ಟನ್ ಲಕ್ಷ್ಮೀ ಸೆಹಗಲ್ ಸಭಾಂಗಣದ ಕಾ॥ ಆರ್. ಉಮಾನಾಥ್ ವೇದಿಕೆಯಲ್ಲಿ (ಅಕ್ಕನ ಬಳಗದಲ್ಲಿ) ನಡೆದ ಸಿಪಿಐ(ಎಂ) 10ನೇ ಧಾರವಾಡ ಜಿಲ್ಲಾ ಸಮ್ಮೇಳನದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದ ಅವರು "ಭಾರತದ ಅಭಿವೃದ್ಧಿಯ ಹೆಸರಿನಲ್ಲಿ ವಿದೇಶಿ ಬಂಡವಾಳವನ್ನು ರಕ್ಷಣಾ ವಲಯ, ವಿಮಾ ವಲಯ, ಕೃಷಿ ವಲಯ ಸೇರಿದಂತೆ ಎಲ್ಲ ಕ್ಷೇತ್ರದಲ್ಲಿ ತರುವ ಮೂಲಕ ಕೇಂದ್ರ ಸರಕಾರವು ಇಡೀ ದೇಶವನ್ನು ಕಾರ್ಪೋರೇಟ್ ಕಂಪೆನಿಗಳಿಗೆ ಒತ್ತೆ ಇಡಲು ಹೊರಟಿದೆ. ಸಾಮ್ರಾಜ್ಯಶಾಹಿ ವಿರುದ್ಧ ನಮ್ಮ ದೇಶದಲ್ಲಿ ಐತಿಹಾಸಿಕ ಸ್ವಾತಂತ್ರ್ಯ ಹೋರಾಟ ನಡೆದು ಅದನ್ನು ಹಿಮ್ಮೆಟ್ಟಿಸಲಾಗಿತ್ತು. ಆದರೆ ಹಿಂದಿನ ಯುಪಿಎ ಸರಕಾರಕ್ಕಿಂತ ಆಕರ್ಷಕವಾಗಿ ನವಸಾಮ್ರಾಜ್ಯಶಾಹಿ ಶಕ್ತಿಗಳಿಗೆ ದೇಶವನ್ನು ಲೂಟಿಮಾಡಲು ಮೋದಿ ಸರಕಾರ ತೆರೆದಿಡಲಾಗುತ್ತಿರುವುದು ಆತಂಕದ ವಿಷಯ. ನವಸಾಮ್ರಾಜ್ಯಶಾಹಿ ಶಕ್ತಿಗಳಿಂದ ದೇಶವನ್ನು ರಕ್ಷಿಸುವಲ್ಲಿ ಸಿಪಿಐ(ಎಂ) ಹೊಣೆ ಹೆಚ್ಚಿದೆ." ಎಂದರು.



ನಿತ್ಯಾನಂದಸ್ವಾಮಿ



ಬಿ.ಎಸ್. ಸೊಪ್ಪಿನ್

ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಬಿ.ಎಸ್.ಸೊಪ್ಪಿನ ಮಾತನಾಡಿ, ಈ ಪ್ರದೇಶದಲ್ಲಿ ಮೂರನೆಯ ಪರ್ಯಾಯ ರಾಜಕೀಯ ಶಕ್ತಿಯಾಗಿ ಸಿಪಿಐ(ಎಂ) ಪಕ್ಷವನ್ನು ಕಟ್ಟಿ ಬೆಳೆಸಲು ಕಾರ್ಯಕರ್ತರು ಮುಂದಾಗಬೇಕೆಂದು ಹೇಳಿದರು. ಮುಂದಿನ ದಿನಗಳಲ್ಲಿ ಜನಪರ ಚಳುವಳಿಯನ್ನು ರೂಪಿಸುವ ನಿಟ್ಟಿನಲ್ಲಿ ಹಾಗೂ ಧಾರವಾಡ, ಹಾವೇರಿ ಹಾಗೂ ಗದಗ ಜಿಲ್ಲೆಗಳ ಸರ್ವಾಂಗೀಣ ಅಭಿವೃದ್ಧಿಯ ನಿಟ್ಟಿನಲ್ಲಿ ಈ ಸಮ್ಮೇಳನ ನಡೆಯುತ್ತಿದ್ದು, ಈ ಭಾಗದ ಜನರ ಬವಣೆಗಳನ್ನು ನೀಗಿಸಲು ಸಿಪಿಐ(ಎಂ) ಪಕ್ಷವನ್ನು ಬಲಗೊಳಿಸಬೇಕಿದೆ ಎಂದರು. ಜಿಲ್ಲಾ ಸಂಘಟನಾ ಸಮಿತಿಯ ಸದಸ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ರಸ್ತೆಗಳು ಅಭಿವೃದ್ಧಿ ನಿರ್ಣಯ: ರಸ್ತೆಗಳು ಸಂಪೂರ್ಣ ಹದಗೆಟ್ಟಿದ್ದು ಕೂಡಲೇ ಅವುಗಳ ಅಭಿವೃದ್ಧಿಮಾಡಬೇಕು. ರಸ್ತೆಗಳಲ್ಲಿ ಗುಂಡಿಗಳು ತೆರೆದುಕೊಂಡಿದ್ದು ಜನರು ಧೂಳಿನ ಸಮಸ್ಯೆ ಅನುಭವಿಸುತ್ತಿದ್ದಾರೆ. ಅಪಘಾತಗಳು ಹೆಚ್ಚುತ್ತಿವೆ. ಹುಬ್ಬಳ್ಳಿ-ಧಾರವಾಡ ಮಧ್ಯ ಚತುಷ್ಪಥ ರಸ್ತೆ ಕಾಮಗಾರಿ ಆಮೆಗತಿಯಲ್ಲಿ ಸಾಗುತ್ತಿದೆ. ಬಿಆರ್‌ಟಿಎಸ್ ಯೋಜನೆ ಕೂಡಾ ನೆನಗುದಿಗೆ ಬಿದ್ದಿದ್ದರಿಂದ ಜನ ನರಕಯಾತನೆ ಅನುಭವಿಸುವಂತಾಗಿದೆ. ಕಾರಣ ಸರಕಾರ ಮತ್ತು ಮಹಾನಗರ ಪಾಲಿಕೆ ಶೀಘ್ರ ಕ್ರಮಕೈಗೊಳ್ಳಬೇಕೆಂದು ಒತ್ತಾಯಿಸುವ ನಿರ್ಣಯವನ್ನು ಸಮ್ಮೇಳನ ಬಹಿರಂಗ ಉದ್ಘಾಟನಾ ಸಮಾರಂಭದಲ್ಲಿ ಅಂಗೀಕರಿಸಲಾಯಿತು. ಉದ್ಘಾಟನಾ ಸಭೆಯ ಮುನ್ನ ಪಕ್ಷದ ಕಾರ್ಯಕರ್ತರು ಇಂದಿರಾ ಗಾಜಿನ ಮನೆಯಿಂದ ಅಕ್ಕನ ಬಳಗದವರೆಗೆ ಆಕರ್ಷಕ ಮೆರವಣಿಗೆಯನ್ನು ನಡೆಸಿದರು.

ಉದಾರೀಕರಣ ಮತ್ತು ಕೋಮುವಾದದ ದಾಳಿಗಳ ವಿರುದ್ಧ ಹೋರಾಡಲು ಎಡ ಪ್ರಗತಿಪರ ಶಕ್ತಿಗಳು ಮುಂದಾಗಲಿ:
– ನಿತ್ಯಾನಂದಸ್ವಾಮಿ

ಕೇಂದ್ರದ ಬಿಜೆಪಿ ಸರಕಾರ ಹಾಗೂ ರಾಜ್ಯ ಕಾಂಗ್ರೆಸ್ ಸರಕಾರಗಳು ಜಾರಿಗೊಳಿಸುತ್ತಿರುವ ಉದಾರೀಕರಣದ ನೀತಿಗಳ ಧೋರಣೆಗಳಿಂದಾಗಿ ಮುಂದಿನ ದಿನಗಳಲ್ಲಿ ದುಡಿಯುವ ಜನರ ಸಂಕಷ್ಟಗಳು ಹೆಚ್ಚಾಗಲಿವೆ. ನಿರುದ್ಯೋಗ ಉಲ್ಬಣಗೊಳ್ಳಲಿದೆ. ಭ್ರಷ್ಟಾಚಾರವನ್ನು ತಡೆಗಟ್ಟಲು ಈ ಎರಡೂ ಸರಕಾರಗಳಿಗೆ ಸಾಧ್ಯವಿಲ್ಲ. ವಿದೇಶಿ ಬಂಡವಾಳಕ್ಕೆ ಹೆಚ್ಚೆಚ್ಚು ಅವಕಾಶ ನೀಡುವ ಈ ಪ್ರವೃತ್ತಿಯಿಂದಾಗಿ ಭ್ರಷ್ಟಾಚಾರ ಇನ್ನೂ ಹೆಚ್ಚಾಗಲಿದೆ ಎಂದು ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ನಿತ್ಯಾನಂದಸ್ವಾಮಿ ಹೇಳಿದರು.



ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, "ಇದೇ ಸಮಯದಲ್ಲಿ ಜನತೆಯ ಐಕ್ಯತೆಯನ್ನು ಒಡೆಯಲು ಕೋಮುವಾದಿ ಶಕ್ತಿಗಳು ಹೆಚ್ಚೆಚ್ಚು ಆಕ್ರಮಣ ಮಾಡಲಿವೆ. ಈ ಹಿನ್ನೆಲೆಯಲ್ಲಿ ಉದಾರೀಕರಣ ಮತ್ತು ಕೋಮುವಾದದ ವಿರುದ್ಧ ಹೋರಾಡುವ ಎಲ್ಲ ಎಡ ಪ್ರಗತಿಪರ ಶಕ್ತಿಗಳು ಮುಂದಾಗಬೇಕೆಂದು ಅವರು ಕರೆ ನೀಡಿದರು. ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳ ಆರ್ಥಿಕ ಧೋರಣೆಗಳಲ್ಲಿ ಏನೂ ವ್ಯತ್ಯಾಸಗಳಿಲ್ಲ. ಹಿಂದೆ ಮನಮೋಹನಸಿಂಗ್ ಸರಕಾರ ಅನುಸರಿಸುತ್ತಿದ್ದ ನೀತಿಗಳನ್ನೇ ಮೋದಿ ನೇತೃತ್ವದ ಸರಕಾರ ಇನ್ನು ಹೆಚ್ಚು ರಭಸದಿಂದ ಜಾರಿ ಮಾಡುತ್ತಿದೆ. ಈ ಎರಡೂ ಪಕ್ಷಗಳಿಗೆ ಪರ್ಯಾಯವಾಗಿ ಎಡ ಶಕ್ತಿಗಳನ್ನು ಬೆಂಬಲಿಸಬೇಕು" ಅವರು ಜನತೆಯಲ್ಲಿ ಮನವಿ ಮಾಡಿದರು.

ನೂತನ ಸಮಿತಿ

ಕಾರ್ಯದರ್ಶಿಯಾಗಿ ಬಿ.ಎಸ್.ಸೊಪ್ಪಿನ ಆಯ್ಕೆ. ಸಮ್ಮೇಳನದ ಪ್ರತಿನಿಧಿ ಅಧಿವೇಶನವು ನೂತನ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಿತು. ಜಿಲ್ಲಾ ಸಮಿತಿಯು ಸಭೆ ಸೇರಿ ಕಾರ್ಯದರ್ಶಿಯಾಗಿ ಬಿ.ಎಸ್.ಸೊಪ್ಪಿನ ಅವರನ್ನು ಮರುಆಯ್ಕೆ ಮಾಡಿತು. ನೂತನ ಜಿಲ್ಲಾ ಸಮಿತಿ ಸದಸ್ಯರಾಗಿ ಆರ್.ಎಚ್.ಆಯಿ, ಮಹೇಶ ಪತ್ತಾರ, ಬಿ.ಎನ್.ಪೂಜಾರಿ, ಬಿ.ಐ.ಈಳಿಗೇರ, ಎಂ.ಎಸ್.ಹಡಪದ, ಮಹಾಗುಂಡಪ್ಪ ಅಂಗಡಿ, ಬಸವರಾಜ ಮಂತೂರ, ಬಸವರಾಜ ಪೂಜಾರ, ಮಹೇಶ ಹಿರೇಮಠ, ನಾರಾಯಣ ಕಾಳೆ, ಮಾರುತಿ ಚಿಟಗಿ, ಪೀರು ರಾಠೋಡ, ರೇಣುಕಾ ಕಹಾರ ಆಯ್ಕೆಯಾದರು.

ಸಮ್ಮೇಳನ ಅಂಗೀಕರಿಸಿದ ನಿರ್ಣಯಗಳು:
ಉದ್ಯೋಗ ಖಾತ್ರಿ ಯೋಜನೆ

ದೇಶದ ಗ್ರಾಮೀಣ ಪ್ರದೇಶದಲ್ಲಿ ವ್ಯಾಪಕ ಉದ್ಯೋಗ ಕಲ್ಪಿಸುತ್ತಿರುವ, ಗ್ರಾಮಾಭಿವೃದ್ಧಿಗೆ ಪೂರ್ವಕವಾದ ಮಹಾತ್ಮಾಗಾಂಧಿ ಉದ್ಯೋಗ ಖಾತ್ರಿ ಯೋಜನೆಯನ್ನು ಮೊಟಕುಗೊಳಿಸುವ ಕೇಂದ್ರ ಸರಕಾರದ ಪ್ರಯತ್ನಗಳನ್ನು ಸಮ್ಮೇಳನವು ಉಗ್ರವಾಗಿ ಖಂಡಿಸಿತು. ಇದರ ವಿರುದ್ಧ ಸಿಪಿಐ(ಎಂ) ಇದೇ ನವೆಂಬರ್ 26 ರಂದು ದೇಶದಾದ್ಯಂತ ಹೋರಾಟ ನಡೆಸಲು ಕರೆ ನೀಡಲಾಗಿದ್ದು ಈ ಪ್ರದೇಶದಲ್ಲಿ ಹೋರಾಟವನ್ನು ಯಶಸ್ವಿಗೊಳಿಸಲು ಸರ್ವಾನುಮತದಿಂದ ನಿರ್ಣಯವನ್ನು ಅಂಗೀಕರಿಸಲಾಯಿತು.

ಕಳಸಾ ಬಂಡೂರಿನಾಲಾ ಜೋಡನೆ ಯೋಜನೆ ಶೀಘ್ರ ಜಾರಿಗೆ ಆಗ್ರಹ

ಹುಬ್ಬಳ್ಳಿ-ಧಾರವಾಡ ಮಹಾನಗರ ಸೇರಿದಂತೆ ಮಲಪ್ರಭಾ ಅಚ್ಚುಕಟ್ಟು ಪ್ರದೇಶದ ನಗರ, ಪಟ್ಟಣ ಹಾಗೂ ಗ್ರಾಮೀಣ ಪ್ರದೇಶಗಳಿಗೆ ಕುಡಿಯುವ ನೀರಿನ ಪ್ರಮುಖ ಯೋಜನೆ "ಕಳಸಾ-ಬಂಡೂರಿ ನಾಲಾ ಜೋಡನೆ ಯೋಜನೆ" ಶೀಘ್ರ ಜಾರಿಮಾಡುವ ನಿಟ್ಟಿನಲ್ಲಿ ನ್ಯಾಯಾಧೀಕರಣದಲ್ಲಿ ರಾಜ್ಯ ಸರಕಾರ ಸಮರ್ಥವಾಗಿ ವಾದ ಮಂಡಿಸಬೇಕು ಮತ್ತು ಮಧ್ಯಂತರ ಆದೇಶವನ್ನು ಕೇಳಬೇಕೆಂಬ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ರೈಲು ಮಾರ್ಗಗಳು

ಹುಬ್ಬಳ್ಳಿ ನಗರದಿಂದ ದೇಶದ ವಿವಿಧ ಪ್ರಮುಖ ನಗರಗಳಿಗೆ ರೈಲ್ವೇ ಸಂಪರ್ಕ ಕಲ್ಪಿಸಲು ಹೊಸ ರೈಲುಗಳನ್ನು ಬಿಡಬೇಕು. ಹುಬ್ಬಳ್ಳಿ-ಬೆಂಗಳೂರು ಮಧ್ಯ ಜೋಡಿ ರೈಲ್ವೆ ಹಳಿ ಮಾರ್ಗಗಳನ್ನು ಮಾಡಿ ಪ್ರಯಾಣ ವೇಳೆಯನ್ನು ಕಡಿತ ಮಾಡಬೇಕು. ಕೊಂಕಣ ರೈಲ್ವೆಗೆ ಸಂಪರ್ಕ ಕಲ್ಪಿಸಲು ಬಹಳ ದಿನಗಳಿಂದ ನೆನಗುದಿಗೆ ಬಿದ್ದಿರುವ ಅಂಕೋಲ ರೈಲು ಮಾರ್ಗ ಯೋಜನೆಯನ್ನು ಶೀಘ್ರವಾಗಿ ಕೈಗೆತ್ತಿಕೊಳ್ಳಲು ನೈರುತ್ಯ ರೈಲ್ವೆ ಇಲಾಖೆ, ಕೇಂದ್ರ ಸರಕಾರ ಮುಂದಾಗಬೇಕೆಂಬ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಇದಲ್ಲದೇ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ, ಹುಬ್ಬಳ್ಳಿ-ಧಾರವಾಡದಲ್ಲಿ ಆಡಳಿತಾತ್ಮಕ ನ್ಯಾಯಾಧೀಕರಣ ಮಂಡಳಿ (ಕೆಎಟಿ)ಯನ್ನು ಸ್ಥಾಪನೆ, ಕಾರ್ಮಿಕ ಕಾನೂನುಗಳನ್ನು ಮಾಲೀಕರ ಹಾಗೂ ವಿದೇಶಿ ಬಂಡವಾಳಿಗರ ಪರವಾಗಿ ತಿದ್ದುಪಡಿಗೆ ಖಂಡಿಸಿ ಡಿಸೆಂಬರ್-5 ರಂದು ದೇಶದಾದ್ಯಂತ ಕೇಂದ್ರ ಕಾರ್ಮಿಕ ಸಂಘಟನೆಗಳು ನಡೆಸುತ್ತಿರುವ ಹೋರಾಟವನ್ನು ಬೆಂಬಲಿಸುವ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

– ಮಹೇಶ ಪತ್ತಾರ.



ಜಿಲ್ಲೆಯ ಸಾಮಾಜಿಕ – ರಾಜಕೀಯ ವರದಿ ಪುಟ 15 ರಲ್ಲಿ

ಮಂಗಳೂರಿನಲ್ಲಿ ಬಿಇಎಫ್ಐ ರಾಜ್ಯ ಸಮ್ಮೇಳನ

'ಬ್ಯಾಂಕ್ ಎಂಪ್ಲೋಯಿಸ್ ಫೆಡರೇಶನ್ ಆಫ್ ಇಂಡಿಯಾ'ದ-ಕರ್ನಾಟಕ 4ನೇ ರಾಜ್ಯ ಸಮ್ಮೇಳನವು ನವಂಬರ್ 15-16, 2014 ರಂದು ಮಂಗಳೂರಿನ ಕೊಡಿಯಾಲ್‌ಬೈಲಿನಲ್ಲಿರುವ ಸಿ.ಬಿ.ಒ.ಎ. ಸಭಾಂಗಣದಲ್ಲಿ ನಡೆಯಿತು. ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯ ಸೀತಾರಾಮ್ ಯೆಚೂರಿಯವರು ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು.

ಬಿಇಎಫ್ಐ ರಾಜ್ಯಾಧ್ಯಕ್ಷರಾದ ಶ್ರೀನಿವಾಸ ಬಾಬು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಉದ್ಘಾಟನಾ ಸಮಾರಂಭದಲ್ಲಿ ಅಖಿಲ ಭಾರತ ವಿಮಾ ನೌಕರರ ಸಂಘದ ರಾಜ್ಯ ಮುಂದಾಳುಗಳಾದ ಕೆ.ಎಸ್. ಗೀತಾ, ಸಿಐಟಿಯು ದ.ಕ.ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ ಅತಿಥಿಗಳಾಗಿ ಮಾತನಾಡಿದರು. ಸಮ್ಮೇಳನ ಸ್ವಾಗತ ಸಮಿತಿಯ ಗೌರವಾಧ್ಯಕ್ಷ ನಿವೃತ್ತ ಎಸಿಪಿಯವರಾದ ಬಿ.ಜೆ.ಭಂಡಾರಿ, ಬ್ಯಾಂಕ್ ನೌಕರರ ಮುಂದಾಳುಗಳಾದ ಎಂ.ರತ್ನಾಕರ ಶೆಣೈ, ಬಿ.ಎಂ.ಮಾಧವ ವೇದಿಕೆ ಮೇಲಿದ್ದರು.

ಉದ್ಘಾಟನೆಗೂ ಮೊದಲು ಬಿಇಎಫ್ಐಗೆ ಸೇರಿದ ಬ್ಯಾಂಕ್ ನೌಕರರು ಸ್ವಾಗತ ಸಮಿತಿಯನ್ನೊಳಗೊಂಡು ಮಂಗಳೂರು ನಗರ ಕೇಂದ್ರದಿಂದ ಸಮ್ಮೇಳನ ನಡೆದ ಕೊಡಿಯಾಲ್‌ಬೈಲ್‌ವರೆಗೆ ಸ್ಫೂರ್ತಿಯುತ ಘೋಷಣೆಗಳನ್ನೊಳಗೊಂಡ ಆಕರ್ಷಕ ಮೆರವಣಿಗೆ ನಡೆಸಿದರು. ನಗರ ಮಧ್ಯದಲ್ಲಿ ಸಿಐಟಿಯು ಸಂಗಾತಿಗಳ ಗುಂಪು, ಎಲ್ಐಸಿ ಕಚೇರಿ ಬಳಿ ವಿಮಾ ನೌಕರರ ಸಂಗಾತಿ ಗುಂಪು ಮೆರವಣಿಗೆಗೆ ಪುಷ್ಪದಳ ಚೆಲ್ಲಿ ಘೋಷಣೆಗಳೊಂದಿಗೆ ಸ್ವಾಗತಿಸಿದರು. ಬ್ಯಾಂಕ್ ನೌಕರರು ಕೆಂಬಾವುಟ ಹಿಡಿದು ಮುನ್ನೂರಕ್ಕೂ ಮೀರಿದ ಸಂಖ್ಯೆಯಲ್ಲಿ ನಗರದಲ್ಲಿ ಮೆರವಣಿಗೆಗೆ ತೆಗೆದುದು ಒಂದು ಇತಿಹಾಸವೇ ಆಗಿದೆ.


ಉದ್ಘಾಟನಾ ಅಧಿವೇಶನದಲ್ಲಿ ಉಡುಪಿ ವಿಮಾ ನೌಕರರ ಸಂಘದ ಗುರುದಾಸ್, ಪಾಬೋಕ್‌ನಿಂದ ಪ್ರಕಾಶ್, ಬಿಎಸ್ಎನ್ಎಲ್ ನಿವೃತ್ತ ಮುಖಂಡ ಪಿ.ಹರಿಶ್ಚಂದ್ರ ರಾವ್, ಜನವಾದಿ ಮಹಿಳಾ ಸಂಘಟನೆಯ ಹೇಮಲತಾ, ಡಿವೈಎಫ್ಐ ನಿಂದ ದಯಾನಂದ ಶೆಟ್ಟಿ, ಎಸ್ಎಫ್ಐನಿಂದ ನಿತಿನ್



ಕುತ್ತಾರ್ ಶುಭ ಹಾರೈಸಿ, ಮರುದಿನ ನಡೆದ ಪ್ರತಿನಿಧಿ ಅಧಿವೇಶನದಲ್ಲಿ ಬಿಇಎಫ್ಐ ರಾಷ್ಟ್ರಾಧ್ಯಕ್ಷರಾದ ಎ.ಕೆ.ರಮೇಶ್ ಬಾಬು ಭಾಗವಹಿಸಿ ಮಾರ್ಗದರ್ಶನ ನೀಡಿದರು. ಬೇರೆ ಬೇರೆ ಬ್ಯಾಂಕುಗಳಿಗೆ ಸೇರಿದ್ದ ಇನ್ನೂರರಷ್ಟು ಬ್ಯಾಂಕ್ ನೌಕರರು ಪ್ರತಿನಿಧಿಗಳಾಗಿ ಭಾಗವಹಿಸಿದ್ದರು.

ಮಂಗಳೂರು ಪಾಲಿಕೆ ಕಚೇರಿ ಬಳಿ ಬೀದಿ ಬದಿ ವ್ಯಾಪಾರಿಗಳ ಪ್ರತಿಭಟನೆ :

ಬೀದಿ ಬದಿ ವ್ಯಾಪಾರಿಗಳನ್ನು ಏಕಾಏಕಿ ತೆರವುಗೊಳಿಸುವುದನ್ನು ವಿರೋಧಿಸಿ ಬೀದಿ ಬದಿ ವ್ಯಾಪಾರಿಗಳ ಸಂಘ (ಸಿಐಟಿಯು) ಆಶ್ರಯದಲ್ಲಿ ನವಂಬರ್ 18 ರಂದು ಮಂಗಳೂರು ನಗರ ಪಾಲಿಕೆ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.



ಕಡಲತಡಿ

ವರದಿ : ವಾ. ಉಚ್ಚಿಲ್

ಬೀದಿ ಬದಿ ವ್ಯಾಪಾರಕ್ಕೆ ಸಂಬಂಧಿಸಿ ಕೇಂದ್ರ ಸರಕಾರ ಕಾಯಿದೆಯೊಂದನ್ನು ಜಾರಿಗೊಳಿಸಿದ್ದು, ಅದರಂತೆ ಮಂಗಳೂರಿನಲ್ಲಿ ನಗರ ಪಾಲಿಕೆಯು ರಚಿಸಿರುವ ಸಮಿತಿಯಲ್ಲಿ ಬೀದಿ ಬದಿ ವ್ಯಾಪಾರಿಗಳ ಸಂಘಕ್ಕೂ ಪ್ರಾತಿನಿಧ್ಯ ಕೊಡಲಾಗಿದೆ. ಬೀದಿ ಬದಿ ವ್ಯಾಪಾರಿಗಳು ಕಳೆದ 3 ವರ್ಷಗಳಿಗೂ ಮೀರಿ ನಡೆಸಿರುವ ಹೋರಾಟದ ಫಲವಾಗಿ ಈ ಸಮಿತಿ ಪ್ರಾತಿನಿಧ್ಯ ಅವರಿಗೆ ದೊರಕಿದೆ. ಆದಾಗ್ಯೂ ಅವರಲ್ಲಿ ಚರ್ಚಿಸದೆ, ಬೀದಿ ಬದಿಯಲ್ಲಿ ಆಹಾರೋತ್ಪನ್ನಗಳನ್ನು ಮಾಡುವುದರಿಂದ ರೋಗರುಜಿನ ಹರಡುತ್ತದೆ ಎಂಬ ದೂರು ಬಂದಿದೆ ಎಂದು ಹೇಳಿಕೊಂಡು, ಪಾಲಿಕೆಯ ಅಧಿಕಾರಿಗಳು ದಿಢೀರನೆ ಗೂಡಂಗಡಿಗಳನ್ನು ತೆರವುಗೊಳಿಸಲು ಆರಂಭಿಸಿದ್ದಾರೆ.

ನಿರ್ದಿಷ್ಟ ಗೂಡಂಗಡಿ ವಿರುದ್ಧ ದೂರು ಬಂದರೆ ಸ್ಥಳ ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳುವ ಬದಲು ಸಾರಾಸಗಟಾಗಿ ಗೂಡಂಗಡಿ ಕಿತ್ತೆಸೆದುದು ಸರಿಯಲ್ಲ. ಬೀದಿ ಬದಿ ವ್ಯಾಪಾರಿಗಳ ಬದುಕುವ ಹಕ್ಕನ್ನು ಕಸಿದುಕೊಳ್ಳಲು ಬಿಡುವುದಿಲ್ಲ ಎಂಬುದಾಗಿ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಮುಖಂಡ ಸುನಿಲ್‌ಕುಮಾರ್ ಬಜಾಲ್ ಎಚ್ಚರಿಸಿದರು.

ಪಾಲಿಕೆ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಬೀದಿ ಬದಿ ವ್ಯಾಪಾರಿಗಳ ಅಧ್ಯಕ್ಷ ಮೊಹಮ್ಮದ್ ಮುಸ್ತಾಫ, ಪ್ರಧಾನ ಕಾರ್ಯದರ್ಶಿ ಸಂತೋಷ್ ಕುಮಾರ್, ಸಿಐಟಿಯು ಮುಖಂಡರುಗಳಾದ ಲಿಂಗಪ್ಪ ನಂತೂರು, ಯೋಗೀಶ್ ಜಪ್ಪಿನಮೊಗರು ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಉಪ್ಪಿನಂಗಡಿಯಲ್ಲಿ ಡಿವೈಎಫ್ಐ ನೇತೃತ್ವದಲ್ಲಿ ಅರಣ್ಯಾಧಿಕಾರಿ ಕಚೇರಿಗೆ ಮುತ್ತಿಗೆ:

ಉಪ್ಪಿನಂಗಡಿ ಅರಣ್ಯಾಧಿಕಾರಿ ವ್ಯಾಪ್ತಿಯಲ್ಲಿ ಪಟ್ರಮೆ ಗ್ರಾಮದಲ್ಲಿ ಶ್ರೀಮಂತನೊಬ್ಬ ಎಕ್ರೆಗಟ್ಟಲೆ ಅರಣ್ಯ ಆಕ್ರಮಿಸಿದ್ದ ಬಗ್ಗೆ ದೂರಿತ್ತರೂ, ಆತನ ಬಗ್ಗೆ ಇಲಾಖೆ ಏನೂ ಕ್ರಮ ಕೈಗೊಂಡಿರುವುದಿಲ್ಲ. ಆದರೆ ರಸ್ತೆ ಕಾಮಗಾರಿ ಗುತ್ತಿಗೆದಾರರು ಪಟ್ರಮೆ ಅನಾರು ಶಂಕರ-ಕ್ಕೆ ರಸ್ತೆಯನ್ನು ಮಂಜೂರಾದ ನಬಾರ್ಡ್ ಅನುದಾನದಿಂದ ಅಭಿವೃದ್ಧಿ ಪಡಿಸುವಾಗ ಅಪಾಯಕಾರಿಯಾಗಿದ್ದ ಮರಗಳನ್ನು ಉರುಳಿಸಿದ್ದನ್ನು ಕಾನೂನು ಉಲ್ಲಂಘನೆ ಎಂದು ಪರಿಗಣಿಸಿ, ಆ ಗುತ್ತಿಗೆದಾರರ ಮೇಲೆ ಕೇಸು ದಾಖಲಿಸಿದ ಬಗ್ಗೆ ಡಿವೈಎಫ್ಐ ನೇತೃತ್ವದಲ್ಲಿ ಪಟ್ರಮೆ ಗ್ರಾಮಸ್ಥರು ಉಪ್ಪಿನಂಗಡಿ ಅರಣ್ಯಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಸಿಪಿಐ(ಎಂ) ಬೆಳ್ತಂಗಡಿ ತಾಲೂಕು ಕಾರ್ಯದರ್ಶಿ ಬಿ.ಎಂ. ಭಟ್, ಡಿವೈಎಫ್ಐ ದ.ಕ.ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ಉಪಾಧ್ಯಕ್ಷ ಬಿ.ಕೆ.ಇಮ್ತಿಯಾಜ್, ಪಟ್ರಮೆ ಗ್ರಾಮ ಸಿಪಿಐ(ಎಂ) ಮುಖಂಡರಾದ ಶ್ಯಾಮರಾಜ್ ಪ್ರತಿಭಟನಾ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಅರಣ್ಯಾಧಿಕಾರಿಗಳು ಮಾತುಕತೆ ನಡೆಸಿ, ಅರಣ್ಯಭೂಮಿ ಆಕ್ರಮಿಸಿಕೊಂಡ ಶ್ರೀಮಂತನ ವಿರುದ್ಧವೂ ಕಾನೂನು ಕ್ರಮ ಕೈಗೊಳ್ಳುವ ಭರವಸೆ ನೀಡಿದರು. ●

40 ವರ್ಷಗಳಿಂದ ಅಂಗವಿಕಲರ ಮೀಸಲಾತಿ ಜಾರಿಯಾಗಿಲ್ಲ – ಜಿ.ಎನ್. ನಾಗರಾಜು

13 ನವಂಬರ್ 2014ರ ಗುರುವಾರ ಮಂಡ್ಯ ಜಿಲ್ಲೆಯ ಮಳವಳ್ಳಿ ಪಟ್ಟಣದ ಸ್ತ್ರೀಶಕ್ತಿ ಭವನದಲ್ಲಿ ತಾಲ್ಲೂಕು ಸಮಾವೇಶ ನಡೆಸಲಾಯಿತು. ಮಳವಳ್ಳಿ ತಾಲ್ಲೂಕಿನಲ್ಲಿ ಸುಮಾರು 4600 ಕ್ಕೂ ಹೆಚ್ಚು ಅಂಗವಿಕಲರು ಇದ್ದು ಇವರಿಗೆ ಸರ್ಕಾರದಿಂದ ಸಿಗಬೇಕಾದ ಸೌಲಭ್ಯಗಳು ಸಿಗದೇ ಕೆಲವೇ ಕೆಲವು ಅಂಗವಿಕಲರು ಮಾತ್ರ ಪ್ರಯೋಜನ ಪಡೆಯುತ್ತಿದ್ದಾರೆ.



ಸಾಮಾನ್ಯವಾಗಿ ಹಳ್ಳಿ ಮತ್ತು ಪಟ್ಟಣ ಪ್ರದೇಶಗಳಲ್ಲಿ ಅಂಗವಿಕಲ ಮಕ್ಕಳು ಹುಟ್ಟಿದರೆ, ತಂದೆ-ತಾಯಿಗಳು ಇದು ಯಾವ ಜನ್ಮದ ಪಾಪವೋ ಎಂದು ಭಾವಿಸಿ ತಮ್ಮ ಜೀವನದುದ್ದಕ್ಕೂ ಮಕ್ಕಳ ಬಗ್ಗೆ ಯೋಚಿಸುತ್ತಾ ದಿನಗಳನ್ನು ಕಳೆಯುತ್ತಾರೆ. ಅಂಗವಿಕಲರು ಇನ್ನೊಬ್ಬರನ್ನು ಅವಲಂಬಿಸಿ ಹಲವಾರು ಸಂಕಷ್ಟಗಳಿಂದ ಬದುಕುತ್ತಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯಾವುದೇ ನೀತಿ-ನಿಯಮ-ಯೋಜನೆಗಳನ್ನು ಜಾರಿ ಮಾಡುವಾಗ ಸಂಪೂರ್ಣವಾಗಿ ಅಂಗವಿಕಲರನ್ನು ಕಡೆಗಣಿಸಲಾಗುತ್ತಿದೆ. ಪ್ರತಿ ವರ್ಷ ಮಂಡಿಸುವ ಬಜೆಟ್‌ಗಳಲ್ಲಿ ಅಂಗವಿಕಲರಿಗೆ ನಿರ್ದಿಷ್ಟವಾಗಿ ಉದ್ಯೋಗ ಕಲ್ಪಿಸುವ ಬಗ್ಗೆ ಯೋಜನೆ ಮಂಡಿಸದೇ ಕಾಟಚಾರಕ್ಕೆ ಐದು ವರ್ಷಕ್ಕೊಮ್ಮೆ 50 ರೂ. ನಿಂದ 100 ರೂ ಮಾಶಾಸನ ಹೆಚ್ಚಳ ಮಾಡಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಂಗವಿಕಲರ ಬದುಕಿಗಾಗಿ ಯಾವ ಆಸರೆಯನ್ನು ನೀಡದೇ ಇರುವುದನ್ನು ನಾವು ಕಾಣುತ್ತಲೇ ಇದ್ದೇವೆ. "ಕರ್ನಾಟಕ ರಾಜ್ಯ ಅಂಗವಿಕಲರ & ಪಾಲಕರ ಒಕ್ಕೂಟ"ವನ್ನು ತಾಲ್ಲೂಕಿನಲ್ಲಿ ಕಟ್ಟಿಬೆಳಸಿ ಸಂಘದ ಮೂಲಕ ಹೋರಾಟ ಮಾಡಿ ಎಲ್ಲಾ ಅಂಗವಿಕಲರಿಗೂ ಸರ್ಕಾರದಿಂದ ಬರುವ ಸೌಲಭ್ಯಗಳನ್ನು ಪಡೆದುಕೊಳ್ಳಲು ತೀರ್ಮಾನಿಸಿ ದಿನಾಂಕ 13 ನವಂಬರ್ 2014 ರ ಗುರುವಾರ ಮಳವಳ್ಳಿ ಪಟ್ಟಣದ ಸ್ತ್ರೀ ಶಕ್ತಿ ಭವನದಲ್ಲಿ ತಾಲೂಕು ಸಮ್ಮೇಳನ ನಡೆಸಲಾಯಿತು.

ಪ್ರಥಮ ಸಮಾವೇಶದ ಅಂಗವಾಗಿ ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ಧ್ವಜವನ್ನು ಹಿರಿಯ ಮುಖಂಡರಾದ ಶ್ರೀ ದೊಡ್ಡ ಮರೀಗೌಡರವರು ನೇರವೇರಿಸಿದರು. ನಂತರ ಸಮಾವೇಶವನ್ನು ರಾಜ್ಯ ಅಧ್ಯಕ್ಷರಾದ ಶ್ರೀ ಜಿ.ಎನ್. ನಾಗರಾಜುರವರು ಉದ್ಘಾಟಿಸಿ ಮಾತನಾಡುತ್ತ ಅಂಗವಿಕಲರ ಬಗ್ಗೆ ಸಾಕಷ್ಟು ಜನ ಕೀಳರಿಮೆಯಿಂದ ನೋಡುವುದನ್ನು ನಾವು ಕಾಣುತ್ತಿದ್ದೇವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 40 ವರ್ಷಗಳಿಂದ ಅಂಗವಿಕಲರಿಗೆ ಇರುವ ಮೀಸಲಾತಿಯನ್ನು ಜಾರಿ ಮಾಡಲು ಮುಂದಾಗಲಿಲ್ಲಾ. ಮುಂದೆ ಕೇಂದ್ರ ಸರ್ಕಾರ ನಡೆಸುವ ಚಳಿಗಾಲದ ಅಧಿವೇಶನದಲ್ಲಿ ಅಂಗವಿಕಲರ ಹಲವಾರು ಕಾನೂನುಗಳನ್ನು ತಿದ್ದುಪಡಿ ಮಾಡಬೇಕಾಗಿದೆ. ಎಲ್ಲಾ ಅಂಗವಿಕಲರಿಗೂ ಉದ್ಯೋಗ ಕೊಡಬೇಕು. ಅದಕ್ಕಾಗಿ ನಾವೆಲ್ಲರೂ ಸಂಘಟಿತರಾಗಿ ಪ್ರತಿ ಹಳ್ಳಿಯಿಂದ ಪಂಚಾಯತಿ ಮಟ್ಟದ ಸಮಿತಿಗಳು ರಚಿಸಿ ತಾಲ್ಲೂಕು, ಜಿಲ್ಲಾ, ರಾಜ್ಯ ಮತ್ತು ರಾಷ್ಟ್ರ ಮಟ್ಟದ ಹೋರಾಟಗಳನ್ನು ಮಾಡಿ ನಮ್ಮ ನ್ಯಾಯಯುತವಾದ ಬೇಡಿಕೆಗಳನ್ನು ಈಡೇರಿಸಿ ಕೊಳ್ಳಬೇಕಾಗಿದೆ. ಅಂಗವಿಕಲತೆ ದೇಹ ರಚನೆಯಿಂದ ಉಂಟಾಗುತ್ತದೆ. ಅವರಿಗೆ ಅಪಮಾನ ಮಾಡಿದರೆ ಶಿಕ್ಷೆಯಾಗಬೇಕು.

ಸರ್ಕಾರಗಳು ಇದನ್ನು ತಡೆಗಟ್ಟಲ್ಲೂ ದೇಶದ ಹಾಗೂ ವಿದೇಶದ ಸಂಸ್ಥೆಗಳ ಮೂಲಕ ಪೋಲೀಯೋ ಲಸಿಕೆ ಕಾರ್ಯಕ್ರಮ ಮೂಲಕ ಯಶಸ್ವಿಯಾಗಿದ್ದೆವೆ ಎನ್ನುತ್ತಾರೆ.

ಸರ್ಕಾರಗಳು ಸೂಕ್ತ ಚಿಕಿತ್ಸೆ ನೀಡವ ನಿಟ್ಟಿನಲ್ಲಿ ಅಂಗವಿಕಲತೆ ದೂರ ಮಾಡುವ ಪ್ರಯತ್ನ ಮಾಡಬೇಕು. ಹೊಸ ಅಂಗವಿಕಲರ ಹಕ್ಕುಗಳ ರಾಷ್ಟ್ರೀಯ ಮಸೂದೆ ಅಂಗೀಕಾರವಾಗಲು ಹೋರಾಟ ಅಗತ್ಯವಿದೆ. ಹಳ್ಳಿಯಿಂದ ದೆಹಲಿಯವರೆಗೂ ಸಂಘ ಕಟ್ಟಿ ಬೆಳಸೋಣ. ಎಲ್ಲ ಅಂಗವಿಕಲರು ಘನತೆಯಿಂದ ಜೀವನ ನಡೆಸಬೇಕು ಹಾಗೂ ಜೀವನ ವಿಕಾಸವಾಗಬೇಕು. ಎಲ್ಲರ ಸಹಕಾರ ಅತ್ಯಗತ್ಯ ಎಂದು ತಿಳಿಸಿದರು.

ಸರ್ಕಾರದಿಂದ ಸಿಗುವ ಯೋಜನೆಗಳು ಸಮರ್ಪಕವಾಗಿ ಜಾರಿಯಾಗಲು ಸರ್ಕಾರದ ಪ್ರತಿನಿಧಿಗಳು ನಾವು ಸರಿಯಾಗಿ ಕೆಲಸ ಮಾಡಲು ಆಗುತ್ತಿಲ್ಲ. ಅಂಗವಿಕಲರು ಅಂಕಿ – ಅಂಶಗಳ ಬಗ್ಗೆ ಸರಿಯಾದ ಮಾಹಿತಿಯನ್ನು ನಾವು ಸಂಗ್ರಹಿಸಲು ಸಾಧ್ಯವಾಗುತ್ತಿಲ್ಲ. ಸರ್ಕಾರದ ಅಂಕಿ-ಅಂಶಗಳು ಕೆಲವು ತಪ್ಪು ಮಾಹಿತಿಗಳು ಇರುವುದನ್ನು ನಾವು ಕಾಣುತ್ತಿದ್ದೇವೆ. ತಾವೆಲ್ಲರೂ ಸೇರಿ ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟವನ್ನು ತಾಲ್ಲೂಕಿನಲ್ಲಿ ಸಂಘಟಿಸುವ ಮೂಲಕ ತಮಗೆ ಧನ್ಯವಾದಗಳು. ಸರ್ಕಾರದ ಎಲ್ಲಾ ಸವಲತ್ತುಗಳು ತಮ್ಮಗೆ ಸಿಗುವಂತೆ ನೋಡಿಕೊಳ್ಳುತ್ತೇನೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಯೋಜನಾಧಿಕಾರಿಗಳಾದ ಅರುಂಧತಿ ತಿಳಿಸಿದರು.

ನಾವು, ಅಂಗವಿಕಲರೂ ಸಮಾಜದ ದೃಷ್ಟಿಯಲ್ಲಿ-ನಾವು ಅಮಂಗಳ, ಅದೃಷ್ಟಹೀನರು – ನಮ್ಮನ್ನು ನೋಡಿದರೆ ಕಡೆಗಣಿಸುತ್ತಾರೆ. ನಮ್ಮಿಂದ ಏನು ಆಗುವುದಿಲ್ಲ ಎಂಬ ಅಪನಂಬಿಕೆ ನಿಮಗೆ ಬೇಡ. ಸ್ಟೀಫನ್ ಹಾಕಿಂಗ್ಸ್ ಎಂಬ ಒಬ್ಬ ಪ್ರಪಂಚದ ಮಹಾದೊಡ್ಡ ವಿಜ್ಞಾನಿ ಇವರು ಕೂಡ ಅಂಗವಿಕಲರೂ ಆದರೂ ಕೂಡಾ ಇವರು ತಮ್ಮ ಕಂಪ್ಯೂಟರ್ ಮೂಲಕ ಪ್ರಪಂಚದ ಚಿತ್ರಣ ಹೇಗೆ ಇರಬೇಕು ಎಂದು ತಿಳಿಸುತ್ತಾರೆ ಹಾಗಾಗಿ ತಾವು ಯಾರಿಗೂ ಕಡಿಮೆ ಇಲ್ಲದೆ ಸಮಾಜದ ಮುಖ್ಯವಾಹಿನಿಗೆ ಬಂದು ಹೆಸರು ಪಡೆಯುವಂತಾಗಬೇಕು. ಸಿಐಟಿಯು ಸಂಪೂರ್ಣ ಬೆಂಬಲ ನೀಡುತ್ತದೆ ಎಂದು ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಜಿ. ರಾಮಕೃಷ್ಣ ತಿಳಿಸಿದರು.

ಅಂಗವಿಕಲತೆ ಶಾಪವಲ್ಲ. ನಾವು ಅಂಗವಿಕಲರೂ ಎಂಬ ಕೀಳರಿಮೆ ಹಾಗೂ ಖಿನ್ನತೆಯನ್ನು ಬಿಡಬೇಕು ಎಂದು ಹಿರಿಯ ಕಾರ್ಮಿಕ ಮುಖಂಡರು ಹಾಗೂ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರ ಸಂಘದ ಮಂಡ್ಯ ಜಿಲ್ಲಾ ಉಪಾಧ್ಯಾಕ್ಷರಾದ ಶ್ರೀ ನಂಜುಂಡಸ್ವಾಮಿರವರು ತಿಳಿಸಿದರು.

ರಾಜ್ಯ ವಲಯ ಕಾರ್ಯದರ್ಶಿ ಶ್ರೀ ಅರ್ಪುದರಾಜನ್, ರಾಜ್ಯ ಕಾರ್ಯದರ್ಶಿಗಳಾದ ಜಿ.

ಪುಟ 11 ರಿಂದ

ನವ–ಉದಾರವಾದದ ಹಳೆಯ ದಾರಿಯಲ್ಲೇ ರಭಸದ ಓಟ

. ಸೀತಾರಾಮ್ ಯೆಚೂರಿ

ಈ ವೇಳೆಗಂತೂ, ಮೋದಿಯವರು ಏನೇ ಅಬ್ಬರದ ಮಾತುಗಳನ್ನಾಡಿದರೂ ಅವರ ಸರಕಾರ ಈ ಹಿಂದಿನ ಸರಕಾರದಿಂದ ಬಳುವಳಿಯಾಗಿ ಪಡೆದಿರುವ ಅದೇ ನವ–ಉದಾರವಾದಿ ಆರ್ಥಿಕ ಸುಧಾರಣೆಗಳ ದಿಕ್ಪಥವನ್ನು ಮತ್ತಷ್ಟು ಆಕ್ರಮಣಕಾರಿಯಾಗಿ ಅನುಸರಿಸುತ್ತಿದೆ ಎಂಬುದು ಸ್ಪಷ್ಟವಾಗಿದೆ.

ಆರಂಭದಲ್ಲಿ ಡಾ.ಮನಮೋಹನ್‌ಸಿಂಗ್ ಕೂಡ ಇದೇ ರೀತಿಯಲ್ಲಿ 'ಸಮೃದ್ಧಿಯ ಯುಗ'ದ ಭ್ರಮೆಯನ್ನು ಉಂಟು ಮಾಡಿದ್ದರು, ಅದು ಭಾರತವನ್ನು 'ಹಾಲು–ಜೇನಿನ' ನಾಡಾಗಿ ಪರಿವರ್ತಿಸುತ್ತದೆ ಎಂದಿದ್ದರು. ಈ ಹಿಂದೆ ನಡೆದಂತೆಯೇ, ವಿಶೇಷವಾಗಿ, ಯುಪಿಎ–1 ಎಡಪಕ್ಷಗಳ ಬಾಹ್ಯಬೆಂಬಲದಿಂದ ಕಳಚಿಕೊಂಡು, ಕಾರ್ಪೊರೇಟ್ ಮಂದಿಯ ಸಕ್ರಿಯ ನೈತಿಕ ಮತ್ತು ಭೌತಿಕ ಬೆಂಬಲದೊಂದಿಗೆ ಭಾರತ–ಅಮೆರಿಕಾ ಪರಮಾಣು ವ್ಯವಹಾರ ಕುದುರಿಸಲು ಮುಂದಾದಾಗ ನಡೆದಂತೆಯೇ ನಡೆಯುತ್ತಿದೆ.

ಈ ಬಾರಿ ಪ್ರಧಾನ ಮಂತ್ರಿ ಮೋದಿಯವರ ಅಡಿಯಲ್ಲಿ ಒಂದು ನಿರ್ಣಾಯಕ ವ್ಯತ್ಯಾಸವೆಂದರೆ ಈಗ ಜನರಿಗೆ ಮಾರಲಾಗುತ್ತಿರುವ ಭ್ರಮೆಗಳು ಅದಕ್ಕಿಂತ ದೊಡ್ಡವಾಗಿವೆ. ಅದಕ್ಕೆ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಅತ್ಯಂತ ಸಕ್ರಿಯ ಬೆಂಬಲ ಇದೆ. ಪರಿಣಾಮವೆಂದರೆ ಕಾರ್ಪೊರೇಟ್ ಭಾರತ ಈ ಮೋದಿ ಸರಕಾರದ ಭಟ್ಟಂಗಿಯಾಗಿ ಕ್ರಿಯಾಶೀಲವಾಗಿದೆ.

ಮನಮೋಹನಸಿಂಗ್‌ರವರಿಗೆ ಕೈಕೊಟ್ಟವರ 'ಪಾರ್ಶ್ವವಾಯು' ರಾಗ

ಒಂದು ಸಮಯವಿತ್ತು. ಡಾ.ಮನಮೋಹನ್ ಸಿಂಗ್ ಭಾರತವನ್ನು ಒಂದು 'ಉದೀಯಮಾನ ಆರ್ಥಿಕ'ವಾಗಿ ಅದರ 'ಪ್ರೌಢತೆ'ಯತ್ತ ಒಯ್ಯುತ್ತಿದ್ದಾರೆ ಎಂದು ಹಾಡಿಹೊಗಳಲಾಗುತ್ತಿತ್ತು. ಭಾರತ–ಅಮೆರಿಕಾ ಪರಮಾಣು ವ್ಯವಹಾರದ ನಂತರ 'ಭಾರತದ ಒಂಟಿತನ'ವನ್ನು ಮುರಿದಿದ್ದಾರೆ ಎಂದು ಹೊಗಳಲಾಗುತ್ತಿತ್ತು. ಜಿ–20ರ ಉನ್ನತ ಪೀಠಸ್ಥರ ಹೆಗಲೆಣೆಯಾಗಿದ್ದಾರೆ, ಅದು ಒಂದು 'ರಾಷ್ಟ್ರೀಯ ಹೆಮ್ಮೆ' ಎಂದು ಬಣ್ಣಿಸಲಾಗುತ್ತಿತ್ತು.

ಆದರೆ ಯುಪಿಎ ಸರಕಾರ, ಎಡಪಕ್ಷಗಳ ಒತ್ತಡದಿಂದ ಅರೆ ಮನಸ್ಸಿನಿಂದಲಾದರೂ ಕೆಲವು ಜನಪರ ಧೋರಣೆಗಳನ್ನು ಜಾರಿ ಮಾಡಲಾರಂಭಿಸಿದಾಗ ತಡಮಾಡದೆ ಇವು ನವ–ಉದಾರವಾದಿ ಆರ್ಥಿಕ ಸುಧಾರಣೆಗಳ (ಗರಿಷ್ಟ ಲಾಭ ಗಳಿಸಲು ಹೆಚ್ಚಿನ ಅವಕಾಶಗಳನ್ನು ಕಲ್ಪಿಸುವ) ವೇಗವನ್ನು ನಿಧಾನಗೊಳಿಸುತ್ತವೆ, ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಮತ್ತು ಭಾರತ ಕಾರ್ಪೊರೇಟ್ ಮಂದಿಗಳ ನಿರೀಕ್ಷೆಯ ಮಟ್ಟಕ್ಕೆ ಬರಲಿಲ್ಲ ಎಂದು ಅವರ ಕೈಬಿಡಲಾಯಿತು.

ಹೀಗೆ ಈ ಎರಡೂ ಕುಳಗಳು ಡಾ.ಮನಮೋಹನ್ ಸಿಂಗ್ ಅಡಿಯಲ್ಲಿ "ಪಾರ್ಶ್ವವಾಯು ಬಡಿದಿದೆ" ಎಂಬ ಮೋದಿ ಪ್ರಚಾರವನ್ನು ಸಕ್ರಿಯವಾಗಿ ಪ್ರೋತ್ಸಾಹಿಸಿದವು ಪ್ರತಿಧ್ವನಿಸಿದವು.. ಭಾರತದ ಆಗಿನ ಪ್ರಧಾನ ಮಂತ್ರಿಗಳು ಭಾರತದಲ್ಲಿ ಇರುವಾಗ 'ಮೌನಮೋಹನ ಸಿಂಗ್' ಆಗಿದ್ದಾರೆ, ವಿದೇಶಿ ಪ್ರವಾಸಗಳಲ್ಲಿ ಮಾತ್ರ ಬಾಯಿ ತೆರೆಯುತ್ತಾ–ರೆ ಎಂದು ಒತ್ತಿ ಹೇಳಲು ಮೋದಿ ಎಂದೂ ಮರೆಯುತ್ತಿರಲಿಲ್ಲ. ಈ ಲಕ್ಷಣವನ್ನು ಇಂದು ಪ್ರಧಾನಿ ಮೋದಿಯವರು ಇನ್ನೂ ಹೆಚ್ಚು ಚೈತನ್ಯಯುತವಾಗಿ ಜಾರಿಗೊಳಿಸುತ್ತಿದ್ದಾರೆ.

ದಾರಿ ತಪ್ಪಿಸುವ ಕಲೆಯಲ್ಲಿ ಪಾರಂಗತ

ಹೊರದೇಶಗಳಲ್ಲಿ ಪ್ರಧಾನಿ ಮೋದಿಯವರ ಭಾಷಣಗಳನ್ನು 24/7, ವಾರವಿಡೀ–ದಿನವಿಡೀ ನೇರಪ್ರಸಾರ ಮಾಡಲಾಗುತ್ತಿದೆ. ಸುದ್ದಿ ಶಿರೋನಾಮೆಗಳನ್ನು ಅವು ಬಾಚಿ ಕೊಳ್ಳುತ್ತಿವೆ. ಅಜೆಂಡಾವನ್ನು ದೇಶದೊಳಗೆ ಯಾವುದೇ ಮಹತ್ವದ ಚಟುವಟಿಕೆಗಳು ನಡೆಯದಂತೆ ದಾರಿ ತಪ್ಪಿಸುವ ಕಲೆಯನ್ನು ಪ್ರಧಾನಿ ಮೋದಿ ಪರಿಪೂರ್ಣಗೊಳಿಸಿರುವಂತೆ ಕಾಣುತ್ತದೆ.

ಒಂದೆಡೆಯಲ್ಲಿ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ಮತ್ತು ಭಾರತದ ಕಾರ್ಪೊರೇಟ್ ವಲಯಕ್ಕೆ ಅನುಕೂಲ ಕಲ್ಪಿಸುವ ಸುಧಾರಣೆಗಳು, ಮತ್ತೊಂದೆಡೆಯಲ್ಲಿ ಭಾರತದ ಜನತೆಯ ಮೇಲೆ ಹೊರೆಗಳನ್ನು ಹಾಕುವ ಇನ್ನೊಂದು ಸ್ವರೂಪದ ಸುಧಾರಣೆಗಳು- ಇದೇ ಶ್ರೀಯುತ ಮೋದಿಯವರ ಆರ್ಥಿಕ ಪಾಕಸೂತ್ರ. ಇದಕ್ಕೆ ಸಹಜವಾಗಿಯೇ ಹೆಚ್ಚುತ್ತಿರುವ ಜನತೆಯ ಅಸಂತೃಪ್ತಿ ಅವರ ಸರಕಾರದತ್ತ ಗುರಿಯಿಡದಂತೆ ದಾರಿ ತಪ್ಪಿಸಲು ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಆರೆಸ್ಸೆಸ್/ಬಿಜೆಪಿ ಪ್ರಯತ್ನ. ಇದನ್ನು ಬಯಲಿಗೆಳೆಯಬೇಕಾಗಿದೆ, ಸೋಲಿಸಬೇಕಾಗಿದೆ.

ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ಅನಿವಾಸಿ ಭಾರತೀಯರನ್ನು ಉದ್ದೇಶಿಸಿ ಪ್ರಧಾನಿ ಮೋದಿಯವರು ಮಾಡಿದ ಭಾಷಣದ ಪ್ರಸಾರ ನವದೆಹಲಿಯ ವಿಜ್ಞಾನ ಭವನದಲ್ಲಿ ಜವಹರಲಾಲ್ ನೆಹರೂರವರ 125ನೇ ಜನ್ಮ ದಿನಾಚರಣೆಯ ಸುದ್ದಿಯನ್ನು ಸಂಪೂರ್ಣ ಮುಚ್ಚಿ ಹಾಕಿದೆ.

ನೆನಪಿದೆಯೇ, ಏಳು ಹಂತಗಳ ಸಾರ್ವತ್ರಿಕ ಚುನಾವಣೆಗಳ ಪ್ರಚಾರದ ಸಂದರ್ಭದಲ್ಲಿ ಮೋದಿಯವರು ಮತದಾನವಿಲ್ಲದ ರಾಜ್ಯಗಳಲ್ಲಿ ಸಾರ್ವಜನಿಕ ಸಭೆಗಳನ್ನು ನಡೆಸಿ ಮಾಧ್ಯಮಗಳಲ್ಲಿ ಪ್ರಚಾರ ಗಿಟ್ಟಿಸುತ್ತಿದ್ದರು. ಹೀಗೆ ಮತದಾರರ ಮೇಲೆ ಪ್ರಭಾವ ಬೀರಿ ಚುನಾವಣಾ 'ನೀತಿ ಸಂಹಿತೆ'ಯನ್ನು ಪರಿಣಾಮಕಾರಿಯಾಗಿ ಬುಡಮೇಲು ಮಾಡುತ್ತಿದ್ದರು.

ಭಾರತದಲ್ಲಿ 20ಸಾವಿರಕ್ಕಿಂತ ಕಡಿಮೆ ಜನಸೇರುವ ಬೀದಿ ಬದಿ ಸಭೆಗಳು ಸರಾಸರಿಗಿಂತ. ಸಣ್ಣವು ಎಂದು ಪರಿಗಣಿಸಲ್ಪಡುತ್ತವೆ. ಆದರೆ ಅವೇ ವಿದೇಶಿ ಪ್ರವಾಸಗಳಲ್ಲಿ 'ಬೃಹತ್' ಎನಿಸಿಕೊಳ್ಳುತ್ತವೆ. ಅಲ್ಲಿಯ ವಿರಳ ಜನಸಂಖ್ಯೆಗೆ(ಭಾರತದ ಜನಸಂಖ್ಯೆಯ ಹತ್ತನೇ ಒಂದು ಭಾಗದಷ್ಟು) ಹೋಲಿಸಿದಾಗ ಇದು ನಿಜವಿದ್ದರೂ ಇರಬಹುದು. ಇಷ್ಟು ಜನ ಸೇರಿರುವುದನ್ನು ಭಾರತದ ಕಾರ್ಪೊರೇಟ್ ಮಂದಿ ಮತ್ತು ಕಾರ್ಪೊರೇಟ್ ಮಾಧ್ಯಮಗಳಲ್ಲಿ ಪ್ರಧಾನಿಗಳ ಡಂಗುರ ಸಾರುವ ಮಂದಿ ಹಾಡಿ ಹೊಗಳುತ್ತಾರೆ. ಸಂಪಾದಕೀಯ ಟಿಪ್ಪಣಿಗಳ ಮೂಲಕ ಅವರು ತಮ್ಮ ವಿಧೇಯತೆಯನ್ನು ವ್ಯಕ್ತಪಡಿಸುತ್ತಾರೆ.

'ಯೇ ದಿಲ್ ಮಾಂಗೇ ಮೋರ್'!

ಟೈಮ್ಸ್ ಆಫ್ ಇಂಡಿಯಾ ಹೇಳುತ್ತದೆ –"ಆಸ್ಟ್ರೇಲಿಯಾದಲ್ಲಿ ಚದುರಿರುವ ಭಾರತೀಯರನ್ನು ಉದ್ದೇಶಿಸಿ ಸಿಡ್ನಿಯಲ್ಲಿ ಮಾಡಿದ ಪ್ರಧಾನ ಮಂತ್ರಿ ಮೋದಿಯವರ ಭಾಷಣಕ್ಕೆ ಸಿಕ್ಕ ಹುಮ್ಮಸ್ಸಿನಿಂದ ತುಂಬಿದ ಸ್ಪಂದನ ನ್ಯೂಯಾರ್ಕಿನ ಮ್ಯಾಡಿಸನ್ ಚೌಕದಲ್ಲಿನ ಸ್ಪಂದನಕ್ಕೆ ಸರಿಗಟ್ಟುವಂತಿತ್ತು. ಇದು ಭಾರತದ ನಾಗರಿಕತೆಯ ಹರಹು ಭಾರತ ಎಂಬ ರಾಷ್ಟ್ರಪ್ರಭುತ್ವಕ್ಕಿಂತ ವಿಸ್ತಾರವಾಗಿದೆ ಎಂಬುದನ್ನು ಪ್ರದರ್ಶಿಸಿದೆ." ಆದ್ದರಿಂದ, ಅದು ಮುಂದುವರೆದು ಸುಧಾರಣೆಗಳು ಇನ್ನೂ ವೇಗವಾಗಿ ಆಗಬೇಕು ಎಂದು ಆಗ್ರಹಿಸುತ್ತಾ ಹೀಗೆ ಹೇಳುತ್ತದೆ–"ದೇಶದೊಳಗೆ ಹೂಡಿಕೆ ವಾತಾವರಣ ಉತ್ತಮಗೊಳ್ಳಬೇಕು, ಆಂತರಿಕ ಧೋರಣೆಯನ್ನು ಉದಾರ ಮತ್ತು ಪಾರದರ್ಶಕಗೊಳಿಸುವ ಆರ್ಥಿಕ ಧೋರಣೆಗಳನ್ನು ಕೈಗೆತ್ತಿಕೊಳ್ಳಬೇಕು."

ಹಿಂದುಸ್ತಾನ್ ಟೈಮ್ಸ್ ಸಂಪಾದಕೀಯ "ಜಾಗತಿಕ ವೇದಿಕೆಯಲ್ಲಿ ಹೆಚ್ಚು ಸಲೀಸಾದ ಪ್ರದರ್ಶನ ನೀಡುತ್ತಿರುವ ಶ್ರೀಯುತ ಮೋದಿಯವರಿಗೆ ಜಿ–20 ಶೃಂಗ ಸಭೆ ಇನ್ನೊಂದು ಸಾರ್ವಜನಿಕ ರಾಜ–ತಾಂತ್ರಿಕ ವಿಜಯ" ಎನ್ನುತ್ತದೆ. ಮತ್ತು "ಬಹುಶ: ದೇಶದಲ್ಲಿ ಮಿಲಿಯಾಂತರ ಮಂದಿ ಇದನ್ನು ನೋಡುತ್ತಿರಬಹುದು ಎಂದು ಅವರು ತಮ್ಮ ಸಭಿಕರಿಗೆ ತನ್ನ, ಆಕಾಂಕ್ಷೆಗಳು, ಸಾಧನೆಗಳನ್ನು ಮತ್ತು ಅವರು ಅನುಸರಿಸಬಹುದೆಂದು ಆಶಿಸುವ ಮೌಲ್ಯಗಳನ್ನು ನೆನಪಿದರು" ಎಂದು ಹೇಳುತ್ತದೆ. ಇದು ಕೂಡ ಇನ್ನೂ ವೇಗದ ಸುಧಾರಣೆಗಳು ಬೇಕೆಂದು ಆಗ್ರಹಿಸುತ್ತ "ಹೊಸ ಶಾಸನಗಳನ್ನು ರೂಪಿಸಬಯಸುವ ಇತರ ಸರಕಾರಗಳಂತಲ್ಲದೆ ತನಗೆ ನಾಗರಿಕರ ಕುತ್ತಿಗೆ ಹಿಸುಕುವ ಕಾನೂನಗಳನ್ನು ಧ್ವಂಸ ಮಾಡುವುದೇ (ಇದನ್ನು, ಗರಿಷ್ಟ ಲಾಭಕ್ಕೆ ಹಾಕಿರುವ ಮಿತಿಗಳನ್ನೆಲ್ಲ ಧ್ವಂಸಮಾಡುವುದು ಎಂದು ಓದಿಕೊಳ್ಳಿ) ಹೆಚ್ಚು ಇಷ್ಟ ಎಂದು ಪ್ರಧಾನ ಮಂತ್ರಿಗಳು ಸಾರಿದರು. ಸರಕಾರದಲ್ಲಿ ತನ್ನ ತತ್ವಜ್ಞಾನದ ಬಗ್ಗೆ ಇಂತಹ ಸ್ಪಷ್ಟ ಒತ್ತು ಸ್ವಾಗತಾರ್ಹ" ಎಂದು ಕೊನೆಗೊಳಿಸುತ್ತದೆ.

ಇಂಡಿಯನ್ ಎಕ್ಸ್‌ಪ್ರೆಸ್‌ನಂತಹ ಪತ್ರಿಕೆಗಳು ಕೆಲವು 2018ರ ವೇಳೆಗೆ ತಮ್ಮೆಲ್ಲರ ಒಟ್ಟು ಜಿಡಿಪಿಯನ್ನು 2ಶೇ.ದಷ್ಟು ಮೇಲ್ಕಕೆತ್ತುವ ಜಿ–20 ದೇಶಗಳ ಪ್ರತಿಜ್ಞೆಯನ್ನು ಸ್ವಾಗತಿಸಿವೆ, ಆದರೆ "ಜಾಗತಿಕ ಆರ್ಥಿಕತೆಗೆ 2ಟ್ರಿಲಿಯನ್ ಡಾಲರುಗಳನ್ನು ಸೇರಿಸುವ ಈ ವಚನ ನೆಚ್ಚಿನ ಮುಗ್ಧ ಆದರ್ಶದಂತೆ ಕಾಣಬರುತ್ತದೆ" ಎಂದೂ ಎಚ್ಚರಿಸಿದೆ. ಮುಂದುವರೆದು ಅದು " ಈ ಸರಕಾರಕ್ಕೆ ಬೆಳವಣಿಗೆ ಮತ್ತು ಉದ್ಯೋಗ ನಿರ್ಮಾಣವನ್ನು ಮತ್ತೆ ತರಬೇಕೆಂದಿದ್ದರೆ ಸ್ವತಂತ್ರವಾಗಿ ಅದು ಮಾಡಲೇಬೇಕಾದ" ಒಂದು ಸಂಗತಿಯೆಂದ–ರೆ "ದೇಶದ ಹೂಡಿಕೆ ವಾತಾವರಣವನ್ನು ಉತ್ತಮಪಡಿಸುವುದು" ಎನ್ನುತ್ತದೆ.

'ಯೇ ದಿಲ್ ಮಾಂಗೇ ಮೋರ್'(ಈ ಹೃದಯ ಇನ್ನೂ ಹೆಚ್ಚನ್ನು ಬಯಸುತ್ತದೆ) ಎಂಬುದು ಶ್ರೀಯುತ ಮೋದಿಯವರ ಚುನಾವಣಾ ಪ್ರಚಾರದಲ್ಲಿನ ಒಂದು ಘೋಷಣೆಯಾಗಿತ್ತು. ಅದು ಭಾರತದ ಕಾರ್ಪೊರೇಟ್ ವಲಯ ಹೆಚ್ಚು ಸುಧಾರಣೆಗಳನ್ನು ಇನ್ನಷ್ಟು ವೇಗವಾಗಿ ಕಾಣಲು ಎಷ್ಟು ಕಾತರವಾಗಿದೆ ಎಂಬುದನ್ನು ಬಿಂಬಿಸಿದ್ದ ಘೋಷಣೆ ಎಂಬುದನ್ನು ಪತ್ರಿಕೆಗಳ ಈ ಸಂಪಾದಕೀಯಗಳೆಲ್ಲ ಸ್ಪಷ್ಟವಾಗಿ ತೋರಿಸುತ್ತವೆ. ಈ ಕಾರ್ಪೊರೇಟ್ ಮಂದಿ ತಮ್ಮ ವಿಧೇಯತೆಯನ್ನು ವ್ಯಕ್ತಪಡಿಸಿದ್ದು, ಮತ್ತು ಆ ಪ್ರಚಾರಕ್ಕೆ ಉದಾರ ಭೌತಿಕ ಬೆಂಬಲ ನೀಡಿದ್ದು ಈ ಕಾರಣಕ್ಕಾಗಿಯೇ ತಾನೇ!

ಋಣಸಂದಾಯ–ಅದಾನಿ ಮಾದರಿ

ಇದೀಗ ಋಣಸಂದಾಯದ ಸಮಯ. ಅದಾನಿ ಗುಂಪು ಈಗ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ(ಎಸ್‌ಬಿಐ)ದಿಂದ ಪಡೆಯಲಿರುವ ಸಾಲ ಸೌಲಭ್ಯ ಬಹುಶಃ ಒಂದು ಸಾಗರದಾಚೆಯ ಪ್ರಾಜೆಕ್ಟಿಗೆ ಒಂದು ಭಾರತೀಯ ಬ್ಯಾಂಕಿನಿಂದ ಸಿಗುವ ಅತಿ ದೊಡ್ಡ ಸಾಲ ಸೌಲಭ್ಯ. ಈತ ಶ್ರೀಯುತ ಮೋದಿಯವರ ಪ್ರೀತಿಯ 'ಭಟ್ಟಂಗಿ'ಗಳಲ್ಲಿ ಒಬ್ಬರು, ಅವರ ಜೆಟ್ ವಿಮಾನದಲ್ಲೇ ಮೋದಿಯವರು ತನ್ನ ಬಿಡುವಿಲ್ಲದ ಚುನಾವಣಾ ಪ್ರಚಾರದಲ್ಲಿ ದೇಶದ ಮೂಲೆಮೂಲೆಗೆ ಓಡಾಡಿದ್ದು.

ಎಸ್‌ಬಿಐ ಈ ಅದಾನಿ ಗುಂಪಿಗೆ 1 ಶತಕೋಟಿ ಡಾಲರುಗಳ(6000 ಕೋಟಿ ರೂ.ಗಳಿಗಿಂತಲೂ ಹೆಚ್ಚು) ಸಾಲವನ್ನು ಒದಗಿಸಲಿದೆ. ಈಗಾಗಲೇ ಅದಾನಿ ಗುಂಪು ಪಡೆದಿರುವ ಸಾಲಗಳ ಮೊತ್ತ ಸುಮಾರು 65,000 ಕೋಟಿ ರೂ.ಗಳಷ್ಟಿದೆ. ಅದರ ಪ್ರಾಜೆಕ್ಟ್ ಎಷ್ಟರ ಮಟ್ಟಿಗೆ ಯಶಸ್ವಿಯಾಗಬಹುದು ಎಂಬ ಬಗ್ಗೆ ಸಂದೇಹಗಳಿವೆ. ಆಸ್ಟ್ರೇಲಿಯಾದಲ್ಲಿ ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿರುವ ಅದಾನಿಯ ಕಲ್ಲಿದ್ದಲು ಉದ್ದಿಮೆ ಪ್ರಯತ್ನ ಸದ್ಯಕ್ಕೆ ಪರಿಸರ ಸಂಬಂಧಿ ಸಮರಗಳನ್ನು ಎದುರಿಸುತ್ತಿರುವುದು, ಈ ದೊಡ್ಡ ಮೊತ್ತದ ಸಾಲದ ಸಮಸ್ಯೆಗಳು ಮತ್ತು ಭಾರತದ ಕಲ್ಲಿದ್ದಲು ಸ್ವಯಂಪೂರ್ಣತೆಯ ಅಂ–ದಾಜು ಮುಂತಾದ ಪ್ರಶ್ನೆಗಳಿದ್ದರೂ ಇಂತಹ ಉದಾರ ಭಕ್ಷೀಸು ನೀಡಲಾಗುತ್ತಿದೆ.

ಕೇಂದ್ರ ವಿದ್ಯುತ್ ಮಂತ್ರಿಗಳು ಭಾರತ ಮುಂದಿನ ಮೂರು ವರ್ಷಗಳಲ್ಲಿ ತಾಪ ವಿದ್ಯುತ್ ಯೋಜನೆಗಳಿಗೆ ಬಳಸುವ ಕಲ್ಲಿದ್ದಲಿನ ಆಮದನ್ನು ನಿಲ್ಲಿಸಲಿದೆ ಎಂದು ಇತ್ತೀಚೆಗೆ ಹೇಳಿದ್ದಾರೆ. ಅತ್ತ ಅದಾನಿ ಕಾರ್‌ಮೈಕಲ್‌ನಲ್ಲಿರುವ ಆಸ್ಟ್ರೇಲಿಯಾದ ಗಣಿಗಳ ಕಲ್ಲಿದ್ದಲಿನ ಮೂರನೇ ಎರಡರಷ್ಟನ್ನು

ಪುಟ 11 ನೋಡಿ



ಬ್ಯೂಮರಾಂಗ್
– ಭರವಸೆಗಳ ತಿರುಗುಬಾಣ?
ಕೃಪೆ: ಮಂಜುಲ್, ಡಿಎನ್‌ಎ



ಆಸ್ಟ್ರೇಲಿಯಾದ ಇತಿಹಾಸದಲ್ಲೇ ಅತಿ ದೊಡ್ಡದಾದ ಅದಾಣಿಯ ತಾಪ ಕಲ್ಲಿದ್ದಲು ಪ್ರಾಜೆಕ್ಟಿಗೆ ಅದರ ಹಲವಾರು ಮಿತಿಗಳ, ಅಪಾಯಗಳ ನಡುವೆಯೂ ಭಾರತದ ಸ್ಟೇಟ್ ಬ್ಯಾಂಕಿನಿಂದ 6000 ಕೋಟಿ ರೂ.ಗಳ ಬೃಹತ್ ಮೊತ್ತದ ಸಾಲವನ್ನು ಮಂಜೂರು ಮಾಡಲಾಗಿದೆ. ಇದರ ಅರ್ಥ ಬೇರೇನಿರಲು ಸಾಧ್ಯ? ಋಣಸಂದಾಯದ ಸಮಯ ಎಂದೇ ತಾನೇ?



‘ಪ್ರತಿನಿಧಿಗೆ ಒಂದು ಮತ-ಪಕ್ಷಕ್ಕೆ ಒಂದು ಮತ- ವ್ಯವಸ್ಥೆ ಬರಲಿ’

‘ಪಕ್ಷಗಳ ಮತ ಗಳಿಕೆ ಪ್ರಮಾಣ ಆಧರಿಸಿ ಶಾಸನ ಸಭೆಯ ಸ್ಥಾನಗಳ ನಿಗದಿಯಾಗಲಿ’

ಬೆಂಗಳೂರು ವಿಚಾರ ಸಂಕಿರಣದಲ್ಲಿ ಯೆಚೂರಿ ಪ್ರತಿಪಾದನೆ

ವರದಿ : ಆರ್. ರಾಮಕೃಷ್ಣ

ಜನವರಿ 8 ರಿಂದ 11, 2015 ರವರೆಗೆ ಬೆಂಗಳೂರಿನಲ್ಲಿ ನಡೆಯಲಿರುವ ತನ್ನ 21ನೇ ರಾಜ್ಯ ಸಮ್ಮೇಳನದ ಪ್ರಯುಕ್ತ ಸಿಪಿಐ(ಎಂ) ನವೆಂಬರ್ 16, 2014 ರಂದು ಬೆಂಗಳೂರು ನಗರದ ಗಾಂಧಿಭವನದಲ್ಲಿ ‘ಭಾರತದ ಪ್ರಜಾಪ್ರಭುತ್ವ: ಚುನಾವಣಾ ಸುಧಾರಣೆಗಳ ಅಗತ್ಯತೆ– ಒಂದು ಪರ್ಯಾಯವಾಗಿ ‘ಅನುಪಾತದ ಪ್ರಾತಿನಿಧ್ಯ’ ಎಂಬ ವಿಷಯದ ಕುರಿತ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಸಂಘಟಿಸಲಾಗಿತ್ತು. ವಿವಿಧ ಪಕ್ಷಗಳ ಮುಖಂಡರು–ಗಣ್ಯರು ಈ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡು ತಮ್ಮ ಅಭಿಪ್ರಾಯ ಮಂಡಿಸಿದರು. ‘ಚುನಾವಣೆಯಲ್ಲಿ ಪಕ್ಷವೊಂದು ಪಡೆದಿರುವ ಮತಗಳಿಗೆ ಅನುಗುಣವಾಗಿ ಶಾಸನಸಭೆಯಲ್ಲಿ ಸ್ಥಾನಗಳನ್ನು ನಿಗದಿ ಪಡಿಸುವಂತಹ ಪದ್ಧತಿ ಜಾರಿಗೆ ಬರಬೇಕು’ ಎಂದು ಸಿಪಿಐ(ಎಂ)ನ ಪಾಲಿಟ್ ಬ್ಯೂರೋ ಸದಸ್ಯರು ಮತ್ತು ಸಂಸತ್ ಸದಸ್ಯರೂ ಆದ ಸೀತಾರಾಂ ಯೆಚೂರಿ ಮಂಡಿಸಿದ ವಿಚಾರ ವಿಶೇಷವಾಗಿ ಎಲ್ಲರ ಗಮನ ಸೆಳೆಯಿತು. ಅನುಪಾತ ಪ್ರಾತಿನಿಧ್ಯ ವ್ಯವಸ್ಥೆಯ ಪರ ಬಹತೇಕರ ಒಲವು ವ್ಯಕ್ತವಾದದ್ದು ವಿಶೇಷವಾಗಿತ್ತು.



ಸಿಪಿಐ(ಎಂ) ಬೆಂಗಳೂರು ದಕ್ಷಿಣ ಜಿಲ್ಲಾ ಕಾರ್ಯದರ್ಶಿ ಕೆ. ಪ್ರಕಾಶ್‌ರವರು ವಿಚಾರ ಸಂಕಿರಣದ ಆರಂಭದಲ್ಲಿ ಪ್ರಸ್ತಾವಿಕ ಮಾತುಗಳಾನ್ನಾಡಿದರು. ರಾಜಕೀಯ ಪಕ್ಷಗಳು ಗಳಿಸಿರುವ ಮತಗಳ ಪ್ರಮಾಣದ ಆಧಾರದಲ್ಲಿ ನೋಡಿದರೆ ಪ್ರಸ್ತುತ ಲೋಕಸಭೆಯಲ್ಲಿ ಬಿಜೆಪಿಗೆ ತನ್ನ ಶೇ. 31 ಮತಕ್ಕೆ ಅನುಗುಣವಾಗಿ ಕೇವಲ



181 ಸ್ಥಾನ ಮಾತ್ರ ಸಿಗಬೇಕು. 141 ಸ್ಥಾನಗಳು ಕಡಿಮೆಯಾಗಬೇಕು. ಒಂದೂ ಸ್ಥಾನ ಗಳಿಸಿಲ್ಲದ ಬಿಎಸ್‌ಪಿ ಪಕ್ಷಕ್ಕೆ ತನ್ನ ಶೇ. 4.1 ಮತಗಳಿಕೆ ಆಧಾರದಲ್ಲಿ 21 ಸ್ಥಾನಗಳು ಸಿಗಬೇಕು. ಅದೇ ರೀತಿ ಸಿಪಿಐ(ಎಂ) ಪಕ್ಷಕ್ಕೆ 18 ಸ್ಥಾನಗಳು ಸಿಗಬೇಕು. ಇಂತಹ ಅಭಾಸಗಳ ಹಿನ್ನೆಲೆಯಲ್ಲಿ ಚುನಾವಣಾ ಸುಧಾರಣೆಯ ಅಗತ್ಯದ ಬಗೆಗೆ ಸಿಪಿಐ(ಎಂ) ಪಕ್ಷವು ಚರ್ಚೆ ಸಂಘಟಿಸಿದೆ ಎಂದರು. ಕೆ.ಎಸ್. ಲಕ್ಷ್ಮಿಯವರ ‘ಸ್ವಾತಂತ್ರ್ಯ... ನಮ್ಮ ಸ್ವಾತಂತ್ರ್ಯ’ ಹಾಡಿನೊಂದಿಗೆ ಕಾರ್ಯಕ್ರಮ ಆರಂಭವಾಯಿತು. ವಕೀಲರು, ಸಿಪಿಐ(ಎಂ) ಮುಖಂಡರೂ ಆದ ನಾರಾಯಣ ಸ್ವಾಮಿಯವರು ಎಲ್ಲರನ್ನೂ ಸ್ವಾಗತಿಸಿದರು.

ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯ ಹಾಗೂ ಸಂಸದ ಸೀತಾರಾಂ ಯೆಚೂರಿಯವರು ಎಂದಿನ ತಮ್ಮ ಸರಾಗ ಸ್ಪಷ್ಟ ನಿರರ್ಗಳ ಮಾತುಗಳ ಮೂಲಕ ವಿಚಾರ ಸಂಕಿರಣವನ್ನು ಉದ್ಘಾಟನೆ ಮಾಡಿದರು. ಅವರು ಮಾತನಾಡುತ್ತಾ 1968 ರ ರಾಷ್ಟ್ರೀಯ ಸಮಗ್ರತಾ ಮಂಡಳಿಯಲ್ಲಿಯೇ ಸಿಪಿಐ(ಎಂ) ಚುನಾವಣಾ ಸುಧಾರಣೆಗಳ ಬಗೆಗೆ ಮತ್ತು ಅನುಪಾತ ಪ್ರಾತಿನಿಧ್ಯದ ಆಧಾರದ ಚುನಾವಣಾ ಪದ್ದತಿಯ ಬಗೆಗೆ ಪ್ರತಿಪಾದಿಸಿತ್ತು. ಸಿಪಿಐ(ಎಂ) ವಾದಕ್ಕೆ ನಿರಂತರವಾಗಿ ಸಮರ್ಥನೆ ಸಿಗುತ್ತಲೆ ಬರುತ್ತಿದೆ ಎಂದರು.

ಕೇಂದ್ರದ ಯಾವ ಸರಕಾರವೂ ಶೇ.50 ಮತ ಪಡೆದ ಉದಾಹರಣೆ ಇಲ್ಲ.

ಮುಂದುವರಿದು ಮಾತನಾಡಿದ ಯೆಚೂರಿಯವರು ಡಾ. ಬಿ.ಆರ್. ಅಂಬೇಡ್ಕರ್ ಅವರ ಅಪಾರ ಪರಿಶ್ರಮದಿಂದ ಭಾರತದಲ್ಲಿ ‘ಒಬ್ಬ ವ್ಯಕ್ತಿ–ಒಂದು ಮತ, ಒಂದು ಮತ–ಒಂದು ಮೌಲ್ಯ’ ಎಂಬ ಸಾರ್ವತ್ರಿಕ ಮತದಾನದ ಹಕ್ಕು ನೀಡುವ ಸಂವಿಧಾನವು 1950 ರಲ್ಲೇ ಅಂಗೀಕರಿಸಲ್ಪಟ್ಟಿತು. ಆದರೆ ದೇಶದ ಇತಿಹಾಸದಲ್ಲಿ ಯಾವ ಸರಕಾರವೂ ಶೇ.50ರಷ್ಟು ಬಹುಮತ ಪಡೆದು ಆಡಳಿತ ನಡೆಸಿದ ಉದಾಹರಣೆ ಇಲ್ಲ. ಕೇವಲ ಹೆಚ್ಚಿನ ಸ್ಥಾನಗಳಿಕೆಯ ಆಧಾರದ ಮೇಲೆ ಅಧಿಕಾರದ ಚುಕ್ಕಾಣಿ ಹಿಡಿಯಲಾಗುತ್ತಿದೆ. ಈ ವ್ಯವಸ್ಥೆಯನ್ನು ಸುಧಾರಣೆ ಮಾಡಬೇಕಾದ ಅಗತ್ಯ ಇದೆ ಎಂದು ಪ್ರತಿಪಾದಿಸಿದರು.

ಪ್ರಜಾಪ್ರಭುತ್ವವನ್ನು ಬಹುಮತ ಹೊಂದಿರುವವರ ಅಧಿಕಾರ ಎಂದು ಹೇಳಲಾಗುತ್ತದೆ. ಲೋಕಸಭಾ ಚುನಾವಣೆಯಲ್ಲಿ ಬಹಳಷ್ಟು ಸಾರಿ ಚಲಾವಣೆಯಾದ ಮತಗಳ ಪ್ರಮಾಣ ಸುಮಾರು ಶೇ. 50 ರಷ್ಟು ಮಾತ್ರ ಇರುತ್ತದೆ. ಪ್ರಸ್ತುತ ಕೇಂದ್ರದಲ್ಲಿ ಅಧಿಕಾರದ ಗದ್ದುಗೆ ಹಿಡಿದಿರುವ ಬಿಜೆಪಿಯ ಒಟ್ಟಾರೆ ಮತಗಳಿಕೆಯು ಚಲಾವಣೆಯಾದ ಮತಗಳಲ್ಲಿ ಕೇವಲ ಶೇ.31ರಷ್ಟು ಮಾತ್ರ ಇದೆ. ಇನ್ನು ಶೇ.69ರಷ್ಟು ಮತಗಳು ಬಿಜೆಪಿ ವಿರುದ್ಧ ಚಲಾವಣೆಯಾಗಿವೆ. ಆದರೂ ಸ್ಥಾನ ಗಳಿಕೆಯ ಮೇಲೆ ಆ ಪಕ್ಷ ಆಡಳಿತ ಚುಕ್ಕಾಣಿ ಹಿಡಿದಿದೆ. ಬಿಎಸ್ಪಿ ಶೇಕಡಾವಾರು ಮತಗಳಿಕೆಯಲ್ಲಿ ಮೂರನೇ ಅತಿದೊಡ್ಡ ಪಕ್ಷವಾಗಿದ್ದರೂ, ಸಂಸತ್ತಿನಲ್ಲಿ ಒಂದು ಸ್ಥಾನ ಕೂಡ ಪಡೆದುಕೊಳ್ಳಲು ಸಾಧ್ಯವಾಗಿಲ್ಲ ಎಂದು ವಿವರಿಸಿದರು. ಸಂಸತ್ತಿನ ಅರ್ಧ ಭಾಗ ಚುನಾಯಿತ ಪ್ರತಿನಿಧಿಗಳು ಇರಬೇಕು. ಉಳಿದರರ್ಧ ಭಾಗ ರಾಜಕೀಯ ಪಕ್ಷಗಳು ಅನುಪಾತ ಪ್ರಾತಿನಿಧ್ಯದ ಆಧಾರದಲ್ಲಿ ಆಯ್ಕೆ ಮಾಡುವ ಸಂಸದರೊನ್ನೊಳಗೊಳ್ಳಬೇಕು ಎಂದ ಯೆಚೂರಿಯವರು ಅನುಪಾತ ಪ್ರಾತಿನಿಧ್ಯ ವ್ಯವಸ್ಥೆಯ ಬಗೆಗೆ ವಿವರಿಸುತ್ತ ಈಗಿನ ಅಕ್ಕಪಕ್ಕದ ಎರಡು ಲೋಕಸಭಾ ಸ್ಥಾನಗಳನ್ನು ಒಟ್ಟುಗೂಡಿಸಿ ಅಲ್ಲಿ ಮತದಾರರಿಗೆ ಎರಡು ಮತದ ಹಕ್ಕು ನೀಡಬಹುದು. ಒಂದು ಮತ ತಮ್ಮ ಪ್ರತಿನಿಧಿಯೊಬ್ಬರನ್ನು ಆರಿಸಲು, ಮತ್ತೊಂದು ಮತ ರಾಜಕೀಯ ಪಕ್ಷಕ್ಕೆ ನೀಡಲು. ರಾಜಕೀಯ ಪಕ್ಷಗಳಿಗೆ ದೊರೆತ ಮತಗಳ ಆಧಾರದಲ್ಲಿ ಪಕ್ಷವು ಮೊದಲೇ ಪ್ರಕಟಿಸಿದ ಆದ್ಯತೆ ಪಟ್ಟಿಯಂತೆ ಶಾಸನ ಸಭೆಗೆ ಆ ಪಕ್ಷಗಳಿಂದ ಪ್ರತಿನಿಧಿಗಳು ಆವಕಾಶ ಪಡೆಯುತ್ತಾರೆ ಎಂದರು. ಮುಂದುವರೆದು ಮಾತನಾಡಿದ ಯೆಚೂರಿಯವರು ಶೇ. 2 ಕ್ಕಿಂತ ಕಡಿಮೆ ಮತ ಗಳಿಸುವ ಪಕ್ಷಗಳಿಗೆ ಲೋಕಸಭೆಯ ಪ್ರವೇಶ ನಿರಾಕರಿಸಬೇಕು. ಈ ಸಂಬಂಧ ಎಲ್ಲ ಪಕ್ಷಗಳೂ ಸ್ಪಂದಿಸಬೇಕು ಎಂದು ಅವರು ಮನವಿ ಮಾಡಿದರು.

2012 ರಲ್ಲಿ ಎಡಪಕ್ಷಗಳು ಈ ಚುನಾವಣಾ

‘ಈ ಬಾರಿಯ ಕೋಮುದಳ್ಳುರಿ’ ಪುಸ್ತಕ ಬಿಡುಗಡೆ

ಕೋಮುಗಲಭೆಗಳಿಗೆ 10 ವರ್ಷಗಳ ಬಿಡುವು ಕೊಡಿ ನರೇಂದ್ರಮೋದಿಯವರು ಕರೆ ಕೊಟ್ಟಿರುವ ಕಾಲಘಟ್ಟದಲ್ಲೂ ಉರಿಯುತ್ತಲೇ ಇರುವ ಕೋಮುದಳ್ಳುರಿಯ ವಿವರಗಳನ್ನು ನೀಡುವ ‘ಪೀಪಲ್ಸ್ ಡೆಮಾಕ್ರಸಿ’ ವಾರಪತ್ರಿಕೆಯ ಆಯ್ದ ಸಂಪಾದಕೀಯಗಳು ಮತ್ತು ಯೆಚೂರಿಯವರ ಲೇಖನದ ಅನುವಾದಗಳ ಸಂಗ್ರಹವಾದ ಎನ್. ಕೆ. ವೇದರಾಜ ಮತ್ತು ಆರ್. ರಾಮಕೃಷ್ಣ ಅವರು ಅನುವಾದಿಸಿರುವ ‘ಈ ಬಾರಿಯ ಕೋಮುದಳ್ಳುರಿ’ ಪುಸ್ತಕವನ್ನು ಸೀತಾರಾಂ ಯೆಚೂರಿಯವರು ಬಿಡುಗಡೆ ಮಾಡಿದರು.

ಜನತಾ ಪರಿವಾರ ಒಂದುಗೂಡಲು ವಿರೋಧವಿಲ್ಲ : ಎಚ್.ಡಿ. ದೇವೇಗೌಡ

ತಮ್ಮ ತುರ್ತು ಕಾರ್ಯಕ್ರಮದ ನಿಮಿತ್ತ ಮೊದಲಿಗೆ ಮಾತನಾಡಿದ ಜನತಾ ದಳ(ಎಸ್)ನ ರಾಷ್ಟ್ರಾಧ್ಯಕ್ಷರು ಮಾಜಿ ಪ್ರಧಾನಿಗಳೂ ಆದ ಎಚ್.ಡಿ. ದೇವೇಗೌಡ ಅವರು ಮಾತನಾಡಿ ‘ಜನತಾ ಪರಿವಾರ ಮತ್ತೆ ಒಗ್ಗೂಡಲು ತಮ್ಮ ವಿರೋಧವಿಲ್ಲ. ಆದರೆ, ಈ ಪ್ರಕ್ರಿಯೆ ಕೆಳಹಂತದಿಂದ ಬಲಯುತವಾಗಿ ನಡೆಯಬೇಕಿದೆ ಎಂದರು. ಹಲವು ಕಾರಣಗಳಿಂದ ವಿಭಜನೆಗೊಂಡಿರುವ ಜನತಾ ಪರಿವಾರ ಮತ್ತೆ ಒಗ್ಗೂಡಿದರೆ ಅದ–ಕ್ಕೆ ತಮ್ಮ ಅಭ್ಯಂತರ ಇಲ್ಲ. ಈಗಾಗಲೇ ಇದರ ಪ್ರಕ್ರಿಯೆ ಕೂಡ ಆರಂಭವಾಗಿದೆ. ಇತ್ತೀಚೆಗಷ್ಟೆ ಬಿಹಾರದ ಮಾಜಿ ಮುಖ್ಯಮಂತ್ರಿ ನಿತೀಶ್ ಕುಮಾರ್ ನಿವಾಸದಲ್ಲಿ ಚರ್ಚೆ ನಡೆಸಲಾಗಿದೆ. ಮುಂದಿನ ದಿನದಲ್ಲಿ ಒಗ್ಗಟ್ಟಾಗಿ ರಾಜಕೀಯವನ್ನು ಎದುರಿಸಬೇಕು. ಜನತಾ ಪರಿವಾರವನ್ನು ಕಟ್ಟಲು ಕೆಳಮಟ್ಟದಿಂದ ಕೆಲಸ ಪ್ರಾರಂಭಿಸಬೇಕಿದೆ ಎಂದು ಅಭಿಪ್ರಾಯಪಟ್ಟರು.

ತೃತೀಯ ರಂಗವನ್ನು ಐಕ್ಯತೆಯಿಂದ ಹೋರಾಟ ನಡೆಸಿ ಬಲವರ್ಧನೆಗೊಳಿಸಬಹುದು. ಇದಕ್ಕೆ ಎಡಪಂಥೀಯ ಪಕ್ಷಗಳು ಮುಂದಾಳತ್ವ ವಹಿಸಿದರೆ ಜನತಾ ಪರಿವಾರ ಬೆಂಬಲ ನೀಡಲಿದೆ ಎಂದು ಹೇಳಿದರು. ಪ್ರಾದೇಶಿಕ ಪಕ್ಷಗಳನ್ನು ಬಲವರ್ಧನೆಗೊಳಿಸುವ ಬಗ್ಗೆ ಉತ್ತರಪ್ರದೇಶ ಮಾಜಿ ಮುಖ್ಯಮಂತ್ರಿ ಮುಲಾಯಂ ಸಿಂಗ್ ಯಾದವ್ ಅವರಿಗೆ ಈಗಾಗಲೇ ಸಲಹೆ ನೀಡಿದ್ದೇವೆ. ಒಗ್ಗಟ್ಟಿದ್ದರೆ ಮಾತ್ರ ರಾಜಕಾರಣದಲ್ಲಿ ಬೆಲೆ ಸಿಗುತ್ತದೆ ಎಂದರು.

ಸುಧಾರಣೆಯ ಬಗೆಗೆ ಪ್ರಶ್ನೆ ಎತ್ತಿದಾಗ ಬಿಜೆಪಿಯು ಅದನ್ನು ಬೆಂಬಲಿಸಿತ್ತು. ಆದರೆ ಈಗ ಆ ಬಗೆಗೆ ಮಾತೇ ಆಡುವುದಿಲ್ಲ ಎಂದು ಅವರು ಹೇಳಿದರು. ಚುನಾವಣಾ ಆಯೋಗವು ಅಭ್ಯರ್ಥಿಗಳ ಚುನಾವಣಾ ವೆಚ್ಚದ ಮೇಲೆ ನಿಯಂತ್ರಣ ಹಾಕಿದೆ. ಆದರೆ ರಾಜಕೀಯ ಪಕ್ಷಗಳ ಚುನಾವಣಾ ವೆಚ್ಚಗಳಿಗೆ ಮಿತಿ ಇಲ್ಲ. ಹೀಗಾಗಿ ಮೋದಿಯವರ ಚುನಾವಣಾ ರ್‍ಯಾಲಿ–ಪ್ರಚಾರಗಳಿಗಾಗಿ ಬಂಡವಾಳಗಾರ ಅದಾನಿ ಸಾವಿರಾರು ಕೋಟಿ ರೂಪಾಯಿ ಖರ್ಚು ಮಾಡಿದರೂ ಯಾವುದೇ ನಿಯಂತ್ರಣವಿಲ್ಲ ಎಂದರು.

ರಾಜಕೀಯ ಪಕ್ಷಗಳು ಅಭ್ಯರ್ಥಿಗಳನ್ನು ಕಣಕ್ಕಿಳಿಸುವಾಗ ಜಾತಿ ಕೋಮುಗಳ ಪ್ರಾಬಲ್ಯ ನೋಡಿ ಬಲಾಢ್ಯ ಜಾತಿ ಕೋಮುಗಳಿಗೆ ಸೇರಿದ ವ್ಯಕ್ತಿಗಳನ್ನು ಕಣಕ್ಕಿಳಿಸುತ್ತಿವೆ. ಜಾತೀಯತೆಯ ವಿರುದ್ಧ ಹೋರಾಡುವ ಬದಲಿಗೆ ಜಾತೀಯತೆಯನ್ನು ಹರಡಲಾಗುತ್ತಿದೆ. ರಾಜಕೀಯ ಪಕ್ಷಕ್ಕೆ, ಪಕ್ಷದ ಕಾರ್ಯಕ್ರಮಕ್ಕೆ ಮತ ಕೇಳುವ ವ್ಯವಸ್ಥೆ ಬಂದಲ್ಲಿ ಜಾತೀಯತೆಗೆ ಮತ್ತು ಅಪರಾಧಗಳಿಗೆ ಮಿತಿ ಬೀಳಲಿದೆ ಎಂದರು. ಹಾಲಿ ಕೇಂದ್ರ ಸರ್ಕಾರದ ಸಚಿವ ಸಂಪುಟದಲ್ಲಿ ಮೂರನೇ ಒಂದು ಭಾಗದಷ್ಟು ಕ್ರಿಮಿನಲ್ ಹಿನ್ನೆಲೆಯುಳ್ಳವರು ಇದ್ದಾರೆ. ಇಂದು ರಾಜಕೀಯದ ಅಪರಾಧೀಕರಣವಲ್ಲ, ಬದಲಿಗೆ 'ಅಪರಾಧಿಗಳ ರಾಜಕೀಯಕರಣ' ನಡೆಯುತ್ತಿದೆ ಎಂದು ಅವರು ಅಭಿಪ್ರಾಯಪಟ್ಟರು.

"ವಿ ದ ಪೀಪಲ್... ... (ನಾವು ನಮಗೆ ಕೊಡಮಾಡಿಕೊಂಡಿರುವ..) ಎಂಬಂತಹ ಮಾತುಗಳಿಂದ ನಮ್ಮ ಸಂವಿಧಾನ ಆರಂಭವಾಗುತ್ತದೆ. ದೇಶದ ಸಾರ್ವಭೌಮತೆ ಜನರ ಕೈಯಲ್ಲಿದೆ. ಸಂಸದೀಯ ಚುನಾವಣೆಗಳ ಮೂಲಕ ಅದು ವ್ಯಕ್ತವಾಗುತ್ತದೆ. ಆದರೆ ಪ್ರಸ್ತುತ ಚುನಾವಣೆಗಳಲ್ಲಿ (ನಿಗದಿತ ಕನಿಷ್ಟ ಮತಪಡೆದು) ಠೇವಣಿ ಉಳಿಸಿಕೊಳ್ಳಲಾರದವರು ಸಹ ಗೆದ್ದಿದ್ದಾರೆ.

ಚುನಾವಣೆಗಳಲ್ಲಿ ಹಣ_ಆಮಿಷಗಳ ಪಾತ್ರ ಮತ್ತು ಕಾರ್ಪೋರೇಟ್ ರಾಜಕೀಯ ನಿಧಿಯ ನಿರಾಕರಣೆ

"ಟಾಟಾ ಟ್ರಸ್ಟ್‌ನಿಂದ 1990 ರಲ್ಲಿ ಸಿಪಿಐ(ಎಂ) ಪಕ್ಷಕ್ಕೆ 16 ಲಕ್ಷ ರೂಪಾಯಿಗಳ ಚೆಕ್‌ರೂಪದ ನಿಧಿ ಬಂದಿತ್ತು. ಅದನ್ನು ಟಾಟಾ ಟ್ರಸ್ಟ್‌ಗೆ ವಾಪಾಸ್ ಕಳಿಸಲಾಯಿತು. ಆ ಹಣವನ್ನು ಟಾಟಾ ಟ್ರಸ್ಟ್ ದೇಶದ ಚುನಾವಣಾ ನಿಧಿಗೆ ಜಮಾ ಮಾಡಲು ಸರಕಾರಕ್ಕೆ ಕಳಿಸಬೇಕೆಂದು ವಿನಂತಿಸಲಾಯಿತು. ಚುನಾವಣಾ ಕರಪತ್ರಗಳು–ಪೋಸ್ಟರ್‌ಗಳು ಸರಕಾರದಿಂದ ಮುದ್ರಣಗೊಂಡರೆ, ಪ್ರಚಾರ ಕಾರ್ಯಗಳಿಗೆ ಸರಕಾರದ ವಾಹನ ಮತ್ತು ಚಾಲಕರನ್ನು ನೀಡುವಂತಾದರೆ ಬಹಳಷ್ಟು ಚುನಾವಣಾ ಅಕ್ರಮಗಳು ನಿಯಂತ್ರಣಕ್ಕೆ ಬರುತ್ತವೆ. ಚುನಾವಣೆಗಳಲ್ಲಿ ಮತವೊಂದಕ್ಕೆ 1,000–1,200 ರೂಪಾಯಿಗಳನ್ನು ಕೊಡಲಾಗುತ್ತಿದೆ. ಮೊದಲಿಗೆ ಮತದಾರರಿಗೆ ಸೈಕಲ್, ಕೊಡೆಗಳನ್ನು ಕೊಡಲಾಗುತ್ತಿತ್ತು. ಈಗ ಫ್ರಿಡ್ಜ್, ಟಿ.ವಿ.ಗಳನ್ನು ಕೊಡುವ ಸನ್ನಿವೇಶ ಬಂದಿದೆ. ಚುನಾವಣೆಗಳಲ್ಲಿ ಹಣ ಹಂಚುವುದರಲ್ಲಿ ಮೊದಲು ಆಂಧ್ರಪ್ರದೇಶ ಮುಂಚೂಣಿಯಲ್ಲಿತ್ತು. ಈಗ ಕರ್ನಾಟಕ ಮುಂಚೂಣಿಗೆ ಬಂದಿದೆ. ಪ್ರತಿ 5 ವರ್ಷಕ್ಕೊಮ್ಮೆ ಚುನಾವಣೆಯಾಗುವ ಬದಲು ಪ್ರತಿವರ್ಷ ಚುನಾವಣೆ ಬರಲಿ ಎಂದು ಕೆಲವರು ಅಂದುಕೊಳ್ಳುವಂತಾಗಿದೆ. ಪರಿಸ್ಥಿತಿ ಹೀಗಾದರೆ ಹಣಬಲವಿಲ್ಲದ ಪಕ್ಷಗಳು ಚುನಾವಣೆಗಳಲ್ಲಿ ಹೋರಾಡುವುದು ಹೇಗೆ ಎಂದು ಯೆಚೂರಿ ಪ್ರಶ್ನಿಸಿದರು.

ವಸಾಹತುಶಾಹಿ ಪದ್ಧತಿ ಮತ್ತು ಕುರುಡು ಅನುಕರಣೆಗಳು – ಯೆಚೂರಿ ವ್ಯಂಗ್ಯ

ವಸಾಹತುಶಾಹಿ ವ್ಯವಸ್ಥೆಯ ಕುರುಡು ಅನುಕರಣೆಗಳ ಬಗೆಗೆ ಮಾತನಾಡಿದ ಸೀತಾರಾಂ ಯೆಚೂರಿಯವರು ನಾವು ಬ್ರಿಟೀಷರ ಹಲವು ಮಾದರಿಗಳನ್ನು ಅನುಸರಿಸುತ್ತಿದ್ದೇವೆ. ಸಂಸತ್ತಿನ ಕಲಾಪಗಳನ್ನು ನಿಯಂತ್ರಿಸುವುದನ್ನು ಬಿಟ್ಟು ಹೆಚ್ಚೇನೂ ಮಾತೇ ಆಡದ ಸಭಾಧ್ಯಕ್ಷರ ಸ್ಥಾನಕ್ಕೆ 'ಸ್ಪೀಕರ್'(ಅಂದರೆ 'ಮಾತನಾಡುವವರು') ಎನ್ನುತ್ತೇವೆ. ಏಕೆಂದರೆ ಬ್ರಿಟನ್‌ನಲ್ಲಿ ಸಂಸತ್ತಿನ ಕಲಾಪಗಳನ್ನು ರಾಜಪರಿವಾರದ ಮುಖ್ಯಸ್ಥರಿಗೆ ವರದಿ ಮಾಡುವ(ಮಾತನಾಡುವ) ಜವಾಬ್ದಾರಿ ಈ 'ಸ್ಪೀಕರ್'ಗೆ ಇದೆ ಎಂದರು.

ಭಾರತದ ಲೋಕಸಭಾ ಸದಸ್ಯರ ಗುರುತಿನ ಚೀಟಿ ಹಸಿರು ಬಣ್ಣದಲ್ಲಿದೆ. ರಾಜ್ಯಸಭಾ ಸದಸ್ಯರ ಗುರುತಿನ ಚೀಟಿ ಕೆಂಪು ಬಣ್ಣದಲ್ಲಿದೆ. ಏಕೆಂದರೆ ಬ್ರಿಟನ್ನಿನಲ್ಲಿ ಮೇಲ್ಮನೆಯಲ್ಲಿ ಕೆಂಪು, ಕೆಳಮನೆಯಲ್ಲಿ ಹಸಿರು ಬಣ್ಣದ ಗುರುತಿನ ಚೀಟಿ ವ್ಯವಸ್ಥೆ ಇದೆ. ಬ್ರಿಟನ್ ಸಂಸತ್‌ನಲ್ಲಿ ಪ್ರತಿಷ್ಠಿತರಿಗೆ, ರಾಜಕುಟುಂಬದವರಿಗೆ ನೀಲಿ ಬಣ್ಣದ ಗುರುತಿನ ಚೀಟಿ ಇದೆ. ಸದ್ಯ ಅದನ್ನೂ ನಾವು ಅನುಸರಿಸುತ್ತಿಲ್ಲ ಎಂದು ಯೆಚೂರಿಯವರು ವಸಾಹತುಶಾಹಿ ಛಾಯೆಗಳನ್ನು ಕಳಚಿ ಹಾಕದ ಭಾರತೀಯರ ಮನೋಭಾವ ಮತ್ತು ವ್ಯವಸ್ಥೆಗಳ ಕುರಿತು ವ್ಯಂಗ್ಯವಾಡಿದರು.

ಅಮೆರಿಕದಲ್ಲಿ ಕಪ್ಪು ವರ್ಣೀಯರಿಗೆ 1962 ರಲ್ಲಷ್ಟೇ ಮತದ ಹಕ್ಕು ಸಿಕಿದ್ದು !!

ಅಮೆರಿಕದ ಅಧ್ಯಕ್ಷರಾದ ಒಬಾಮ ಭಾರತದ ಸಂಸತ್ತಿಗೆ ಭೇಟಿ ಕೊಟ್ಟಾಗ ಗೋಲ್ಡನ್ ಬುಕ್(ಸಂದೇಶ ಪುಸ್ತಕ)ನಲ್ಲಿ 'ಜಗತ್ತಿನ ಅತ್ಯಂತ ಹಳೆಯ ಪ್ರಜಾಪ್ರಭುತ್ವದ ಪರವಾಗಿ ಜಗತ್ತಿನ ಅತ್ಯಂತ ದೊಡ್ಡ ಪ್ರಜಾಪ್ರಭುತ್ವಕ್ಕೆ ಶುಭಾಶಯಗಳು' ಎಂದು ಬರೆದಿದ್ದರು. ಸಂಸದನಾಗಿ ನಾನು ಅವರೊಂದಿಗೆ ಮಾತನಾಡುವಾಗ ಅವರಿಗೆ ತಮ್ಮ ಸಂದೇಶದಲ್ಲಿ ಒಂದು ದೋಷವಿದೆ ಎಂದು ಹೇಳಿದೆ. ಅವರು ಅದೇನೆಂದು ಕೇಳಿದರು. 'ಆಫ್ರೋ–ಅಮೆರಿಕನ್ನರಿಗೆ (ಕಪ್ಪು ವರ್ಣೀಯರಿಗೆ) 1962 ರಲ್ಲಷ್ಟೇ ಅಮೆರಿಕದ ಎಲ್ಲ ರಾಜ್ಯಗಳಲ್ಲಿ ಮತದಾನದ ಹಕ್ಕು ದೊರೆತದ್ದು. ಭಾರತದಲ್ಲಿ ತಾವು (ಒಬಾಮ) ಹುಟ್ಟುವ ಮೊದಲೇ ಸಾರ್ವತ್ರಿಕ ಮತದಾನದ ವ್ಯವಸ್ಥೆ ಜಾರಿಯಾಗಿತ್ತು.' ಎಂದು ಅವರಿಗೆ ಹೇಳಿದೆ" ಎಂದು ಯೆಚೂರಿ ತಿಳಿಸಿದರು.

ಕಾರ್ಪೋರೇಟ್ ಸಂಸ್ಥೆಗಳ ಕೈಯಲ್ಲಿ ಪತ್ರಿಕಾರಂಗ–ಮಾಧ್ಯಮ ರಂಗ

ಸಮೂಹ ಮಾಧ್ಯಮಗಳು ಸಹ ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸುತ್ತಿಲ್ಲ. ಮಾಧ್ಯಮಗಳು ಏಕಮುಖವಾಗಿ ಕೆಲಸ ಮಾಡುತ್ತಿವೆ. ಎಸ್‌ಎಂಎಸ್ ಮೂಲಕ ಪ್ರಶ್ನೆ ಕಳಿಸುವುದು, ಪ್ರತಿಯಾಗಿ ಎಸ್‌ಎಮ್‌ಎಸ್ ಉತ್ತರ ನೀಡದಿದ್ದಲ್ಲಿ 'ಉತ್ತರಿಸಲು ನಿರಾಕರಿಸಿದರು' ಎಂದು ವರದಿ ಮಾಡುವುದು, 'ಎಸ್' ಅಥವಾ 'ನೋ' ಅಷ್ಟೇ ಹೇಳಿ ಎಂದು ಪಟ್ಟು ಹಿಡಿಯುವುದು ಮುಂತಾದ ಪ್ರವೃತ್ತಿಗಳಿವೆ ಎಂದರು. ಪಾಟ್ನಾದ ಮೋದಿ ಸಭೆಯ ಬಳಿ ಬಾಂಬ್ ಸ್ಫೋಟವಾದರೂ ಮೋದಿಯವರ ಭಾಷಣದ ವರದಿ ಯಾವುದೇ ತಡೆ ಇಲ್ಲದೇ ವರದಿಯಾಗಿದೆ. ಮನುಷ್ಯ ಸಹಜವಾದ ಕುತೂಹಲಕ್ಕಾದರೂ ಬಾಂಬ್ ಸ್ಫೋಟಗೊಂಡ ಕಡೆಗೆ ಟಿವಿ ಕ್ಯಾಮರಾಗಳು ತಿರುಗಬೇಕಿತ್ತು. ಹಾಗಾಗಿಲ್ಲ. ಏಕೆಂದರೆ ಬಹುತೇಕ ಟಿವಿ ಚಾನೆಲ್‌ಗಳು ಮೋದಿ ರ್‍ಯಾಲಿಯ ವರದಿಗೆ ತಂಡವನ್ನು ಕಳುಹಿಸಿರಲೇ ಇಲ್ಲ. ಬಿಜೆಪಿಯ ಮಾಧ್ಯಮ ಕೇಂದ್ರದಿಂದ ಸಿದ್ಧ ವಿಡಿಯೋವನ್ನು ಎಲ್ಲ ಮಾಧ್ಯಮಗಳಿಗೆ ಪೂರೈಸಲಾಗುತ್ತಿತ್ತು. 'ಸ್ವಯಂ ನಿಯಂತ್ರಣ' ಎಂಬುದು ಮಾಧ್ಯಮಗಳಲ್ಲಿ ಎಂದೂ ಜಾರಿಯಾಗಿಲ್ಲ. ಕಾರ್ಪೋರೇಟ್ ಸಂಸ್ಥೆಗಳ ಕೈಯಲ್ಲಿ ಪತ್ರಿಕಾರಂಗ–ಮಾಧ್ಯಮ ರಂಗ ಇದೆ. ಜಾಹಿರಾತುದಾರರು ಸುದ್ದಿ ಎಷ್ಟು ಪುಟ ಇರಬೇಕೆಂದು ನಿರ್ಧರಿಸುತ್ತಿದ್ದಾರೆ ಎಂದರು.

ರಾಜಕೀಯ ಪಕ್ಷಗಳ ಸಿದ್ಧಾಂತ ಪರಿಗಣಿಸಿ ಮತ ಚಲಾಯಿಸುವ ವ್ಯವಸ್ಥೆ ಬರಲಿ
– ಬಿ.ಎಲ್. ಶಂಕರ್

ಕಾಂಗ್ರೆಸ್ ನಾಯಕ ಬಿ.ಎಲ್. ಶಂಕರ್ ಅವರು ವಿಚಾರ ಸಂಕಿರಣದಲ್ಲಿ ಮಾತನಾಡಿ ನಮ್ಮ ಚುನಾವಣಾ ಪದ್ಧತಿಯಲ್ಲಿ ಹಲವಾರು ಅಭಾಸಗಳಿವೆ. ನಮ್ಮ ಶೇ. 82 ರಷ್ಟು ಚುನಾಯಿತ ಪ್ರತಿನಿಧಿಗಳು ಚಲಾವಣೆಯಾದ ಮತಗಳಲ್ಲಿ ಶೇ. 50 ಕ್ಕಿಂತ ಕಡಿಮೆ ಮತಗಳನ್ನು ಪಡೆದವರಾಗಿದ್ದಾರೆ. ಠೇವಣಿ ಕಳೆದುಕೊಂಡು ಸಹ ಎರಡು ಬಾರಿ ಗೆದ್ದುಬಂದಿರುವ ಉದಾಹರಣೆ ನಮ್ಮ ಮುಂದೆ ಇದೆ. ಚುನಾವಣಾ ಸುಧಾರಣೆ ಅಗತ್ಯವಿದೆ. ಆದರೆ ದೇಶದಲ್ಲಿ ಕುಟುಂಬ ರಾಜಕಾರಣ ಮತ್ತು ಹೈಕಮಾಂಡ್ ಸಂಸ್ಕೃತಿ ಹೆಚ್ಚಾಗಿದೆ. ಎಡಪಕ್ಷಗಳನ್ನು ಬಿಟ್ಟು ಯಾವ ರಾಜಕೀಯ ಪಕ್ಷವೂ ಇದಕ್ಕೆ ಹೊರತಾಗಿಲ್ಲ. ಕಾಂಗ್ರೆಸ್ ಪಕ್ಷ ಸೇರಿದಂತೆ ಈ ಪಕ್ಷಗಳೊಳಗೆ ಆಂತರಿಕ ಪ್ರಜಾಪ್ರಭುತ್ವವಿಲ್ಲ.

ವ್ಯಕ್ತಿ, ಹಣ ಬಲ, ಜಾತಿ ಬಲಕ್ಕಿಂತ ಮುಖ್ಯವಾಗಿ ರಾಜಕೀಯ ಪಕ್ಷಗಳ ಸಿದ್ಧಾಂತ ಪರಿಗಣಿಸಿ ಮತ ಚಲಾಯಿಸುವ ವ್ಯವಸ್ಥೆ ಬರಬೇಕು. ಪಕ್ಷಗಳನ್ನು ಕುಟುಂಬದ ಆಸ್ತಿ ಎಂದು ನೋಡುವ ಪ್ರವೃತ್ತಿ ರಾಜಕೀಯದಲ್ಲಿದೆ. ಅನುಪಾತ ಪ್ರಾತಿನಿಧ್ಯ ಚುನಾವಣಾ ಪದ್ಧತಿ ಆಧಾರದಲ್ಲಿ ರಾಜಕೀಯ ಪಕ್ಷಗಳು ಪ್ರತಿನಿಧಿಗಳನ್ನು ಆಯ್ಕೆ ಮಾಡುವಾಗ ಜಾತಿ, ಆಧಾರದ ಮೇಲೆ ಸ್ವಜನ ಪಕ್ಷಪಾತ,ಬಂಧು ಬಳಗವನ್ನು ತುಂಬುವುದು ನಡೆಯುವುದಿಲ್ಲವೇ ಎಂಬ ಅನುಮಾನಗಳು ಇವೆ. ಇದಕ್ಕೆ ಪರಿಹಾರ ಕಂಡುಕೊಳ್ಳಬೇಕು. ಒಟ್ಟಾರೆ ಚುನಾವಣಾ ಸುಧಾರಣೆಗಳು ಅಗತ್ಯವಾಗಿದ್ದು ಎಡಪಕ್ಷಗಳ ಅನುಪಾತ ಪ್ರಾತಿನಿಧ್ಯದ ಈ ಪ್ರತಿಪಾದನೆಗೆ ತಮ್ಮ ಬೆಂಬಲವಿದೆ. ನಾನು ಪ್ರತಿನಿಧಿಸುವ ಕಾಂಗ್ರೆಸ್ ಪಕ್ಷದಲ್ಲಿ ಸಹ ಈ ಬಗೆಗೆ ಚರ್ಚೆಗೆ ಪ್ರಯತ್ನಿಸುತ್ತೇನೆ ಎಂದು ಬಿ.ಎಲ್. ಶಂಕರ್‌ರವರು ಹೇಳಿದರು.


ಕಾನೂನು ರೂಪಿಸುವುದರ ಜೊತೆ ಸಮರ್ಪಕ ಜಾರಿ ಮತ್ತು ಜನಜಾಗೃತಿ ಅಗತ್ಯ
– ಸಿದ್ದನಗೌಡ ಪಾಟೀಲ


'ಸಿಪಿಐ'ನ ರಾಷ್ಟ್ರೀಯ ಮಂಡಳಿ ಸದಸ್ಯ ಸಿದ್ದನಗೌಡ ಪಾಟೀಲ ಅವರು ಮಾತನಾಡಿ ಸಿಪಿಐ(ಎಂ) ಪಕ್ಷವು ಚುನಾವಣಾ ಸುಧಾರಣೆ ಬಗೆಗೆ ಮಾಡಿರುವ ಪ್ರತಿಪಾದನೆಗೆ ಸಿಪಿಐನ ಸಂಪೂರ್ಣ ಸಹಮತ ಇದೆ. ಹಿಂದೆ ಸಿಪಿಐ ನೇತಾರ, ಸಂಸದ ಇಂದ್ರಜಿತ್ ಗುಪ್ತ ಅವರ ನೇತೃತ್ವದ ಸಮಿತಿಯು ರಾಜಕೀಯ ಪಕ್ಷಗಳ ಚುನಾವಣಾ ವೆಚ್ಚವನ್ನು ಸರಕಾರ ಭರಿಸಬೇಕೆಂಬ ಶಿಫಾರಸ್ಸು ನೀಡಿತ್ತು. ಅನುಪಾತ ಪ್ರಾತಿನಿಧ್ಯ ವ್ಯವಸ್ಥೆ ಜಾರಿಗೆ ಬರಬೇಕು. ಆದರೆ ಯಾವುದೇ ಕಾನೂನು, ಪದ್ಧತಿ ರೂಪಿಸಿದರೂ ಅದರ ಸಮರ್ಪಕವಾದ ಜಾರಿ ಮುಖ್ಯ. ಪಟ್ಟಭದ್ರರು ಎಲ್ಲವನ್ನೂ ತಮ್ಮ ಅನುಕೂಲಕ್ಕೆ ಬಳಸಿಕೊಳ್ಳುತ್ತಾರೆ. ಆದ್ದರಿಂದ ಜನಜಾಗೃತಿ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆ ಬಲಗೊಳ್ಳುವುದು ಸಹ ಅದೇ ಕಾಲಕ್ಕೆ ನಡೆಯಬೇಕು. ರಾಜಕೀಯ ಪಕ್ಷಗಳಿಗೆ ಕಾರ್ಪೋರೇಟ್ ಬಂಡವಾಳಗಾರರು ಹಣ ನೀಡುವುದನ್ನು ನಿಷೇಧಿಸಬೇಕು ಎಂದರು.

'ಆಪರೇಷನ್ ಕಮಲ'ಗಳಿಗೆ ತಡೆ ಹಾಕಬೇಕು
– ಎಂ.ಪಿ. ನಾಡಗೌಡ

ಜೆಡಿ(ಯು) ರಾಜ್ಯಾಧ್ಯಕ್ಷ ಎಂ.ಪಿ.ನಾಡಗೌಡ ಅವರು ಮಾತನಾಡಿ ದೇಶದಲ್ಲಿ ಆಯಾರಾಂ ಗಯಾರಾಂ ರಾಜಕಾರಣ ನಡೆಯುತ್ತಿದೆ. ಗೆದ್ದ ಮೇಲೆ ವ್ಯಕ್ತಿ ಪಕ್ಷ ಬದಲಿಸುವುದನ್ನು ತಪ್ಪಿಸಲು ಪಕ್ಷಾಂತರ ನಿಷೇಧ ತರಲಾಯಿತು. ಕನಿಷ್ಟ ಬಲದ ಗುಂಪು ಮಾತ್ರ ಪಕ್ಷಾಂತರ ಮಾಡಬಹುದು ಎಂದಾದಾಗ ಪಕ್ಷಗಳನ್ನೇ ಒಡೆಯುವ ಪ್ರವೃತ್ತಿ ಹೆಚ್ಚಿತು. ಬಿಜೆಪಿಯು ಆಪರೇಷನ್ ಕಮಲದಂತಹ ವಿನೂತನ ಕ್ರಮವನ್ನೇ ಜಾರಿಗೆ ತಂದಿತು. ಜೆಡಿಯು ಪಕ್ಷವು ಕಾಂಗ್ರೆಸ್, ಬಿಜೆಪಿ, ಜೆಡಿ(ಎಸ್) ಮೂರು ಪಕ್ಷಗಳಿಂದ 'ಆಪರೇಷನ್'ಗೆ ಒಳಗಾಗಿದೆ. 5 ವರ್ಷಕ್ಕೊಮ್ಮೆ ಮಾತ್ರ ಚುನಾವಣೆ ನಡೆಯಬೇಕು.

ಪುಟ 15 ಕ್ಕೆ








ಕ್ರಮವಾಗಿ ಮಾಜಿ ಪ್ರಧಾನಿ ಹೆಚ್.ಡಿ. ದೇವೆಗೌಡರು, ಬಿ. ಎಲ್. ಶಂಕರ್, ಸಿದ್ದನಗೌಡ ಪಾಟೀಲ, ಎಂ.ಪಿ. ನಾಡಗೌಡ, ಮಹೇಶ್, ಜಿ.ವಿ. ಶ್ರೀರಾಮರೆಡ್ಡಿ ಮಾತನಾಡುತ್ತಿರುವುದು.

ಪಂಡಿತ್ ನೆಹರು – ಸರ್ದಾರ್ ಪಟೇಲ್ ಪರಂಪರೆಯ ವಾರಸುದಾರಿಕೆಗಾಗಿ

ಕಾಂಗ್ರೆಸ್ – ಬಿಜೆಪಿ ನಡುವೆ ಕದನ...!

ಅನುವಾದ : ಕೆ. ಮಹಾಂತೇಶ

ಎಡಗಡೆಯಿಂದ ಜವಹರಲಾಲ್ ನೆಹರು, ಮಹಾತ್ಮ ಗಾಂಧೀಜಿ, ಸರ್ಧಾರವಲ್ಲಭ ಭಾಯಿ ಪಟೇಲ್



ನಮ್ಮ ದೇಶದ ಪ್ರಥಮ ಪ್ರಧಾನಿಯಾಗಿದ್ದ ಜವಹರಲಾಲ್ ನೆಹರು ಅವರ 125 ನೇ ಜನ್ಮ ದಿನವನ್ನು ನವೆಂಬರ್ 14 ರಂದು ದೇಶದಾದ್ಯಂತ ಆಚರಿಸುತ್ತಿರುವ ಸಂದರ್ಭದಲ್ಲೇ ಆಸಕ್ತಿದಾಯಕವಾದ ಚರ್ಚೆಯೊಂದು ಆರಂಭಗೊಂಡಿದೆ. ಹಾಗೆ ಆರಂಭಗೊಂಡಿರುವ ಈ ಚರ್ಚೆಯನ್ನು ಗಮನಿಸಿದರೆ ಅದು ಅಷ್ಟು ಬೇಗ ಮುಗಿಯುವ ಲಕ್ಷಣ ಇದ್ದಂತಿಲ್ಲ. ಯಾಕೆ–ಂದರೆ ಆ ಚರ್ಚೆ ಸಾಮಾನ್ಯವಾದುದಲ್ಲ. ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡ ಇಬ್ಬರು ಮಹಾನ್ ನಾಯಕರುಗಳಾದ ಜವಹರಲಾಲ್ ನೆಹರು–ಸರ್ಧಾರವಲ್ಲಭ ಭಾಯಿ ಪಟೇಲ್ ಇವರಿಬ್ಬರಲ್ಲಿ ಯಾರು ಮುಖ್ಯರು ಎನ್ನುವುದು ಈಗ ಆರಂಭಗೊಂಡಿರುವ ಚರ್ಚೆಯಾಗಿದೆ..!

ಹಳೆಯ ಚರ್ಚೆಯೇ

ನಿಜ ಹೇಳಬೇಕೆಂದರೆ ಇದೊಂದು ಹಳೆಯ ಚರ್ಚೆಯೇ. ಇಂತಹದೊಂದು ವಿಷಯವನ್ನು ಬಹು ಹಿಂದೆಯೇ ಚರ್ಚೆಗೆ ತಂದಿದ್ದು ಆರ್.ಎಸ್.ಎಸ್.ನ ಅಂದಿನ ರಾಜಕೀಯ ಮುಖವಾಣಿಯಾಗಿದ್ದ ಜನಸಂಘ(ಇಂದಿನ ಬಿಜೆಪಿ). ಈ ವಾದದ ಪ್ರಕಾರ ಒಂದು ವೇಳೆ ದೇಶಕ್ಕೆ ಸ್ವಾತಂತ್ರ್ಯ ದೊ–ರೆತಾಗ ನೆಹರು ಬದಲಿಗೆ ಸರ್ದಾರ ವಲ್ಲಭಭಾಯಿ ಪಟೇಲ್ ದೇಶದ ಪ್ರಧಾನಿಯಾಗಿದ್ದರೆ ಈಗಿನಂತೆ ಭಾರತವು ಕಾಶ್ಮೀರದ ಯಾವುದೇ ಭೂ ಭಾಗವನ್ನು ಪಾಕಿಸ್ಥಾನಕ್ಕೆ ಬಿಟ್ಟುಕೊಡುತ್ತಿರಲಿಲ್ಲ. ಚೈನಾದಿಂದ ಭಾರತ ಸೋಲುವಂತಹ ಪರಿಸ್ಥಿತಿ ಬರುತ್ತಿರಲಿಲ್ಲ. ಈ ಸೈದ್ಧಾಂತಿಕ ದೃಷ್ಟಿಕೋನ ಹೊಂದಿರುವವರು ಪಟೇಲರು ಪ್ರಧಾನಿಯಾಗಿದ್ದರೆ ಆರ್.ಎಸ್. ಎಸ್. ನ ಕಲ್ಪನೆಯಾದ 'ಅಖಂಡ ಭಾರತ'ವು ಸಾಧ್ಯವಾಗುತ್ತಿತ್ತೆಂದು ನಂಬುತ್ತಾರೆ. ಇದೇ ಅಭಿಪ್ರಾಯವನ್ನೇ ಇತ್ತೀಚಿಗೆ ಪ್ರಧಾನಿ ನರೇಂದ್ರ ಮೋದಿ ಕೂಡ ಹೇಳಿದ್ದಾರೆ. ಅವರು ಈ ರೀತಿ ಹೇಳುವುದಕ್ಕೆ ಇರುವ ಪ್ರಮುಖ ಕಾರಣವೆಂದರೆ, ಪಟೇಲ್ ಸ್ವತಃ ಕಾಂಗ್ರೆಸ್‌ನವರಾಗಿದ್ದರೂ ಅವರು ಹಿಂದೂ ಕೋಮುವಾದದ ಕಡೆಗೆ ಸೆಳೆತ ಹೊಂದಿದವರಾಗಿದ್ದರು. ಆರ್. ಎಸ್.ಎಸ್. ಪರಿವಾರಕ್ಕೆ ಆತ್ಮೀಯರಾಗಿದ್ದರು ಮಾತ್ರವಲ್ಲ, ಸ್ವಲ್ಪ ಮುಸ್ಲಿಂ ವಿರೋಧಿಯಾದ ಭಾವನೆಯನ್ನು ಹೊಂದಿದ್ದರು. ಸಾಲದೆಂಬಂತೆ ಹಲವು ಸಂದರ್ಭಗಳಲ್ಲಿ ಸ್ವತಃ ಪಟೇಲ್ ಅವರು ಕೋಮುವಾದಿ ಸಿದ್ಧಾಂತವನ್ನು ಮತ್ತು ಮುಸ್ಲಿಂ ವಿರೋಧಿ ಭಾವನೆಗಳನ್ನು ಅಭಿವ್ಯಕ್ತಿಗೊಳಿಸಿದ್ದರು. ಈ ಎಲ್ಲದಕ್ಕೂ ದಾಖಲೆಗಳು ಸಿಗುತ್ತವೆ. ಈ ಕಾರಣ–ಕ್ಕಾಗಿಯೇ ಆರ್.ಎಸ್.ಎಸ್.–ಬಿಜೆಪಿಗಳು ನೆಹರು ಅವರನ್ನು ಕೀಳಾಗಿ ಕಾಣುತ್ತಾ ಪಟೇಲ್ ಅವರನ್ನು ಮಹಾನ್ ಎಂಬಂತೆ ಬಿಂಬಿಸುತ್ತಿರುವುದು.

ಚಳುವಳಿಯ ಪರಂಪರೆ ಇಲ್ಲದವರಿಂದ ಪಟೇಲರನ್ನು 'ಎರವಲು' ಪಡೆಯುವ ಯತ್ನ

ಆರ್.ಎಸ್.ಎಸ್. ಪರಿವಾರ ಇಡಿಯಾಗಿ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಬ್ರಿಟಿಷ್ ಆಡಳಿತವನ್ನು ಬೆಂಬಲಿಸಿತ್ತು. ಹಾಗಾಗಿ ಅವರ ಬೆನ್ನಿಗೆ ಯಾವುದೇ ಸ್ವಾತಂತ್ರ್ಯ ಚಳುವಳಿಯ ಪರಂಪರೆಯೆಂಬುದಿಲ್ಲ. ಆದ್ದರಿಂದಾಗಿಯೇ ಅವರು ಕಾಂಗ್ರೆಸ್ ನಾಯಕರ ನಡುವೆ ತಮ್ಮ ಸಿದ್ಧಾಂತಕ್ಕೆ ಹೆಚ್ಚು ಸಮೀಪವಾಗಿದ್ದ ಪಟೇಲ್ ಅವರನ್ನು ಎರವಲಾಗಿ ಪಡೆದಿದ್ದಾರೆ.

ಆರ್.ಎಸ್.ಎಸ್. ಪರಿವಾರದವರು ನೆಹರು ಅವರನ್ನು ಯಾವಾಗಲೂ ದ್ವೇಷಿಸುತ್ತಿದ್ದರು. ಕಾರಣ, ನೆಹರು ಭಾರತವನ್ನು ಧರ್ಮನಿರಪೇಕ್ಷತೆ ಮತ್ತು ಪ್ರಜಾಸತ್ತೆಯ ತಳಹದಿಯ ಮೇಲೆ ಕಟ್ಟುವ ಪ್ರಯತ್ನ ಮಾಡಿದರು. ಅಲ್ಲದೆ ಅವರು ಭಾರತೀಯ ಉದಾರವಾದಿ ಬಂಡವಾಳಿಗರ ಮುಂದಾಳತ್ವ ವಹಿಸಿದ್ದರು. ಅವರೊಬ್ಬ ವೈಜ್ಞಾನಿಕ ಚಿಂತನೆಯಲ್ಲಿ ನಂಬಿಕೆಯುಳ್ಳವರು ಮತ್ತು ಕೋಮುವಾದ ಹಾಗೂ ಧರ್ಮಾಂಧತೆಯನ್ನು ವಿರೋಧಿಸುವವರಾಗಿದ್ದರು. ಅಂತರಾಷ್ಟ್ರೀಯವಾಗಿಯೂ ಅವರು ಫ್ಯಾಸಿಸಂನ್ನು ವಿರೋಧಿಸಿ ಸಮಾಜವಾದವನ್ನು ಬೆಂಬಲಿಸಿದ್ದರು. 1936 ರಲ್ಲಿ ಸ್ಪೈನ್‌ನಲ್ಲಿ 'ಪಾಪುಲರ್ ಫ್ರಂಟ್' ಅಲ್ಲಿನ ಫ್ಯಾಸಿಸ್ಟರ ವಿರುದ್ಧ ನಡೆಸಿದ ವಿರೋಚಿತ ಹೋರಾಟದ ಸಂದರ್ಭದಲ್ಲಿ ಸ್ವತಃ ನೆಹರು ಅಲ್ಲಿಗೆ ಭೇಟಿ ನೀಡಿ ತನ್ನ ಬೆಂಬಲ ವ್ಯಕ್ತಪಡಿಸಿದ್ದರು. ಆ ಕಾರಣದಿಂದಾಗಿಯೇ ನೆಹರು ಜಗತ್ತಿನಲ್ಲೇ ಒಬ್ಬ ಪ್ರಭಾವಿ ನಾಯಕನಾಗಿ ಹಾಗೂ ಮುತ್ಸದ್ದಿಯಾಗಿ ಗುರುತಿಸಲ್ಪಟ್ಟಿದ್ದರು.

ಆದರೆ ಆರ್.ಎಸ್.ಎಸ್.ಗೆ ನೆಹರು ಅವರ ಈ ಯಾವ ಗುಣಗಳು ಇಷ್ಟವಾಗಲಿಲ್ಲ. ಆರ್. ಎಸ್.ಎಸ್.ನ ಗುರು ಗೋಲ್ವಾಲ್ಕರ್ ಹಿಟ್ಲರನನ್ನು ಆರಾಧಿಸುತ್ತಿದ್ದರು. ಮಾತ್ರವಲ್ಲ ಫ್ಯಾಸಿಸಂನ್ನು ಸ್ವಾಗತಿಸುತ್ತಾ ಸಮಾಜವಾದವನ್ನು ಉಗ್ರವಾಗಿ ವಿರೋಧಿಸಿದರು. ಆ ಕಾರಣದಿಂದಾಗಿಯೇ ಆರ್. ಎಸ್.ಎಸ್. ನೆಹರು ಅವರನ್ನು ವಿರೋಧಿಸಿತ್ತು. ಮತ್ತು ಅದು ಈಗಲೂ ವಿರೋಧಿಸುತ್ತಿದೆ. ಮುಂದೆಯೂ ಕೂಡ ವಿರೋಧಿಸುತ್ತದೆ.

ಆ ಪ್ರಕ್ರಿಯೆ ಭಾಗವಾಗಿಯೇ ಇತ್ತೀಚಿಗೆ ಇತಿಹಾಸವನ್ನು ಬುಡಮೇಲು ಮಾಡುವ ಪ್ರಯತ್ನಕ್ಕೆ ಕೈ ಹಾಕಿದೆ. ಸರ್ಧಾರ್ ಪಟೇಲ್ ಅವರನ್ನು ಗಾಂಧೀ ಹಾಗೂ ನೆಹರುಗಿಂತ ಮಹಾನ್ ನಾಯಕರು ಎಂಬಂತೆ ಪ್ರತಿಬಿಂಬಿಸುತ್ತಾ ಅವರಿಗೆ ಎಲ್ಲಿಲ್ಲದೆ ಗೌರವವನ್ನು ದೊರಕಿಸುವ ಪ್ರಯತ್ನ ಮುಂದುವರೆಸಿದೆ. ಅದೀಗ ಗುಜರಾತ್‌ನ ವಡೋದರ ಬಳಿಯ ನರ್ಮದಾ ನದಿ ತೀರದಲ್ಲಿ ಸುಮಾರು 3,000 ಕೋಟಿ ರೂ. ವೆಚ್ಚದಲ್ಲಿ 597 ಅಡಿ ಎತ್ತರದ ಪಟೇಲ್ ಕಂಚಿನ ಪ್ರತಿಮೆ ನಿರ್ಮಾಣ ಮಾಡುವ ಯೋಜನೆಯೊಂದಿಗೆ ಆರಂಭಗೊಂಡಿದೆ. ಅದಕ್ಕಾಗಿ ಈ ಬಜೆಟ್‌ನಲ್ಲಿ 200 ಕೋಟಿ ಹಣ ಕೂಡ ಹಂಚಿಕೆ ಮಾಡಿದೆ. ಅಲ್ಲದೆ ಪಟೇಲ್ ಜನ್ಮ ದಿನವನ್ನು 'ರಾಷ್ಟ್ರೀಯ ಐಕ್ಯತಾ ದಿನ' ವನ್ನಾಗಿ ಪ್ರಕಟಿಸಿದೆ. ಇದು ಪಟೇಲ್ ಅವರನ್ನು ಹೊಗಳುವಷ್ಟಕ್ಕೆ ನಿಲ್ಲುತ್ತಿಲ್ಲ. ನೆಹರು ಮತು ಅವರ ವಾರಸುದಾರರ ಹೆಸರಲ್ಲಿ ಜಾರಿಯಲ್ಲಿರುವ ಸುಮಾರು 650ಕ್ಕಿಂತ ಹೆಚ್ಚಿನ ಈ ಹಿಂದಿನ ಯೋಜನೆಗಳ ಹೆಸರುಗಳನ್ನೇ ಪುನರ್ ನಾಮಕರಣಗೊಳಿಸಲು ಮೋದಿ ಸರ್ಕಾರ ತೀರ್ಮಾನಿಸಿದೆ.

ಆರ್.ಎಸ್.ಎಸ್–ಬಿಜೆಪಿಯ ಈ ಪ್ರಚಾರದಿಂದಾಗಿ ಚಿಂತಾಕ್ರಾಂತವಾಗಿರುವ ಕಾಂಗ್ರೆಸ್ ತಾನು ನೆಹರು ಅವರ ಏಕೈಕ ಉತ್ತರಾಧಿಕಾರಿ ಎಂದು ಸ್ವಯಂ ಘೋಷಿಸಿಕೊಳ್ಳಲಾರಂಭಿಸಿದೆ. ಅದರ ಭಾಗವಾಗಿ ಅದು ಅವರ 125 ನೇ ಜನ್ಮ ದಿನದಂದು ನವದೆಹಲಿಯಲ್ಲಿ ದೊಡ್ಡದಾದ ಕಾರ್ಯಕ್ರಮ ಆಯೋಜಿಸಿ ಅದಕ್ಕೆ ದೇಶ–ವಿದೇಶಗಳ ಹಲವು ಗಣ್ಯರನ್ನು ಆಮಂತ್ರಿಸಿದೆ. ಆದರೆ ಅದು ಪ್ರಧಾನಿ ನರೇಂದ್ರ ಮೋದಿಯನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿರಲಿಲ್ಲ. ಅದಕ್ಕೆ ಕಾಂಗ್ರೆಸ್ ನೀಡಿದ ಕಾರಣವೆಂದರೆ ಮೋದಿ ಒಬ್ಬ ಕಟ್ಟಾ ನೆಹರು ವಿರೋಧಿ. ಕಾಂಗ್ರೆಸ್‌ಗೆ ಮಾತ್ರವೇ ನೆಹರು ಅವರ ಮೇಲೆ ವಾಸುದಾರಿಕೆಯ ಹಕ್ಕು ಇರುವುದು ಎಂದು ಅದು ಹೇಳಿಕೊಳ್ಳುತ್ತಿದೆ.

ಬಿಜೆಪಿಯ ಸರಕಾರದ ನೆಹರು ಜನ್ಮದಿನ ನಿರ್ಲಕ್ಷ್ಯ

ನೆಹರು ದೇಶದ ಪ್ರಥಮ ಪ್ರಧಾನಿಯಾಗಿದ್ದವರು. ಅವರು 1947 ರಿಂದ 1964 ರವರೆಗೆ ಈ ದೇಶದ ಪ್ರಧಾನಿಯಾಗಿ ಆಡಳಿತ ನಡೆಸಿದ್ದವರು. ಹೀಗಿದ್ದೂ ಬಿಜೆಪಿ ಸರ್ಕಾರ ಅವರ 125 ನೇ ಜನ್ಮದಿನವನ್ನು ಆಚರಿಸಲು ಯಾವುದೇ ಕ್ರಮವಹಿಸದೆ ನಿರ್ಲಕ್ಷಿಸಿತು.

ಆದರೆ ಸತ್ಯಸಂಗತಿ ಎಂದರೆ ಪ್ರಯೋಗಿಕವಾಗಿ ಕಾಂಗ್ರೆಸ್–ಬಿಜೆಪಿಗಳೆರಡು ಕ್ರಮವಾಗಿ ನೆಹರು ಹಾಗೂ ಪಟೇಲ್ ಅವರ ಪರಂಪರೆಗಳನ್ನು ಕೈಬಿಟ್ಟಿವೆ. ಕಾಂಗ್ರೆಸ್ ಪಕ್ಷವು 1991 ರ ನಂತರ ದೇಶದಲ್ಲಿ ಜಾರಿಮಾಡಿದ ನವ ಉದಾರೀಕರಣ ನೀತಿಗಳ ಮೂಲಕ ನೆಹರು ಮೇಲಿನ ವಾರಸುದಾರಿಕೆಯ ಹಕ್ಕನ್ನು ಕಳೆದುಕೊಂಡಿತು. ನೆಹರು ಸಾರ್ವಜನಿಕ ಉದ್ಯಮಗಳಿಗೆ ಮಹತ್ವವನ್ನು ನೀಡಿದ್ದರು. ಆದರೆ ಕಾಂಗ್ರೆಸ್ ಅವುಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ದುಗ್ಗಾಣಿ ಬೆಲೆಗೆ ಮಾರಾಟ ಮಾಡಿತು. ನೆಹರು ದೇಶದ ಸ್ವಾವಲಂಬನೆಯನ್ನು ಬಲಪಡಿಸಲು ಅಗತ್ಯವಾದ ನೀತಿಗಳನ್ನು ರೂಪಿಸಿದರು. ಆದರೆ ಕಾಂಗ್ರೆಸ್ ವಿದೇಶಿ ಬಂಡವಾಳಕ್ಕೆ ಮತ್ತು ವಿದೇಶಿ ವಸ್ತುಗಳಿಗೆ ಮುಕ್ತ ಬಾಗಿಲನ್ನು ತೆರೆದಿಟ್ಟಿತು. ನೆಹರು ಅವರು ಅಲಿಪ್ತ ವಿದೇಶಾಂಗ ಧೋರಣೆಗೆ ಭದ್ರವಾದ ತಳಪಾಯ ಹಾಕಿದರು. ಆದರೆ ಕಾಂಗ್ರೆಸ್ ಪಕ್ಷವು ಅಲಿಪ್ತ ವಿದೇಶಾಂಗ ನೀತಿಗೆ ಎಳ್ಳು–ನೀರು ಬಿಟ್ಟು ಭಾರತವನ್ನು ಸಾಮ್ರಾಜ್ಯಶಾಹಿಗಳ ಕಿರಿಯ ಪಾಲುದಾರರನ್ನಾಗಿಸಿತು. ನೆಹರು ಸದಾ ಧರ್ಮನಿರಪೇಕ್ಷತೆ ಮತ್ತು ಪ್ರಜಾಪ್ರಭುತ್ವದಲ್ಲಿ ದೃಢ ವಿಶ್ವಾಸ ಹೊಂದಿದ್ದರೆ, ಕಾಂಗ್ರೆಸ್ ಧರ್ಮನಿರಪೇಕ್ಷತೆ ವಿಷಯದಲ್ಲಿ ಹೊಯ್ದಾಟ ನಡೆಸುತ್ತಿದೆ ಮತ್ತು ಪ್ರಜಾಸತ್ತೆಯ ಮೇಲೆ ತನ್ನ ಆಡಳಿತದ ಅವಧಿಯಲ್ಲಿ ಹಲವು ಧಾಳಿಗಳನ್ನೇ ಹರಿಯಬಿಟ್ಟಿತು. ಆದ್ದರಿಂದ ಕಾಂಗ್ರೆಸ್ ಪಕ್ಷ ನೆಹರು ಅವರ ಉತ್ತಾರಾಧಿಕಾರಿ ಎಂದೆನಿಸಿಕೊಳ್ಳುವ ಯಾವೊಂದು ನೈತಿಕ ಹಕ್ಕನ್ನು ಹೊಂದಿಲ್ಲ. ಅದೀಗ ಕೇವಲ ನೆಹರು ಎಂಬ ಒಳ್ಳೆಯ ಮರವನ್ನು ತೋರಿಸಿ ಕೊಳೆತ ಹಣ್ಣುಗಳ ಮಾರಾಟವನ್ನು ಮಾರಲು ಬಯಸಿದೆ.

**ಮಹಾತ್ಮ ಗಾಂಧಿ ಹತ್ಯೆ–
ಶ್ಯಾಮಪ್ರಸಾದ್ ಮುಖರ್ಜಿಗೆ ಪಟೇಲರ ಪತ್ರ**

ಬಿಜೆಪಿಯು ಸರ್ದಾರ ಪಟೇಲ್ ಅವರ ವಿಚಾರಗಳನ್ನು ಕೈ ಬಿಟ್ಟು ಕೇವಲ ಅವರ ಹೆಸರನ್ನಷ್ಟೇ ಬಳಸಿಕೊಳ್ಳುವ ಪ್ರಯತ್ನ ನಡೆಸಿದೆ. ಪಟೇಲ್ ಅವರು ಸ್ವತಃ ಕೋಮುಸಿದ್ಧಾಂತದ ಪ್ರಭಾವಕ್ಕೆ ಒಳಪಟ್ಟಿದ್ದರೂ ಅವರು ಸಾಮ್ರಾಜ್ಯಶಾಹಿ ವಿರುದ್ಧ ಪ್ರಬಲ ಹೋರಾಟ ನಡೆಸಿದ್ದರು ಮತ್ತು ಅವರು ಸ್ವತಃ ಮಹಾತ್ಮಾಗಾಂಧಿಯ ಅನುಯಾಯಿಯಾಗಿದ್ದರು. ಗಾಂಧಿಯನ್ನು ಸಂಘಪರಿವಾರ ಶಕ್ತಿಗಳು ಕೊಲೆಗೈದಾಗ ಅದನ್ನು ಉಗ್ರವಾಗಿ ಪಟೇಲ್ ಖಂಡಿಸಿದ್ದರು. ಗಾಂಧೀ ಹತ್ಯೆ ಬಳಿಕ ಅಂದರೆ 1948 ಜುಲೈ 10 ರಂದು ಅಂದಿನ ಜನ ಸಂಘದ ನಾಯಕ ಡಾ: ಶ್ಯಾಮಪ್ರಸಾದ್ ಮುಖರ್ಜಿಯವರಿಗೆ ಪತ್ರವೊಂದನ್ನು ಬರೆದು "ಗಾಂಧೀ ಹತ್ಯೆಯಲ್ಲಿ ಆರ್.ಎಸ್.ಎಸ್. ಹಾಗೂ ಹಿಂದೂ ಮಹಾಸಭಾಗಳ ಕೈವಾಡ ಇರುವ ಬಗ್ಗೆ ನಾನು ನ್ಯಾಯಾಂಗ ವಿಚಾರಣೆಯ ಈ ಹಂತದಲ್ಲಿ ಏನನ್ನೂ ಹೇಳುವಂತಿಲ್ಲ. ಆದರೆ ನಮಗೆ ಬಂದಿರುವ ಮಾಹಿತಿಗಳು ಆ ಎರಡೂ ಸಂಘಗಳು ವಹಿಸಿರುವ ಪಾತ್ರಗಳ ಬಗ್ಗೆ ಖಚಿತವಾದ ಮಾಹಿತಿ ನೀಡಿವೆ. ಪ್ರಮುಖವಾಗಿ ಇಡೀ ದೇಶದಾದ್ಯಂತ ಆ ಸಂಘಟನೆಗಳು ಮಾಡಿರುವ ಪ್ರಚಾರದಿಂದಾಗಿ ಇಂತಹದೊಂದು ದುರಂತ ಸಂಭವಿಸಿರುವ ಸಾಧ್ಯತೆಗಳಿವೆ. ಆದರೆ ಈ ಪಿತೂರಿಯಲ್ಲಿ ಹಿಂದೂ ಮಹಾಸಭಾದ ತೀವ್ರಗಾಮಿ ವಿಭಾಗಗಳ ಕೈವಾಡ ಇರುವ ಬಗ್ಗೆ ನನ್ನ ಮನಸ್ಸಿನಲ್ಲಿ ಯಾವುದೇ ಅನುಮಾನಗಳಿಲ್ಲ. ಆರ್‌ಎಸ್‌ಎಸ್‌ನ ಈ ಕೃತ್ಯಗಳು ಬಹಳ ಸ್ಪಷ್ಟವಾಗಿ ಈಗಿರುವ ಸರ್ಕಾರ ಮತ್ತು ಪ್ರಭುತ್ವದ ವಿರುದ್ಧ ನಡೆಸುತ್ತಿರುವ ಸಂಚಾಗಿವೆ." (Sardar Patel's Correspondence, Volume 6, page 323, Navjeevan, 1973). ಎಂದು ನೇರವಾಗಿ ಪಟೇಲ್ ಹೇಳಿದ್ದರು.

ಬಿಜೆಪಿಯಿಂದ ವಿದೇಶಿ ಬಂಡವಾಳಿಗರಿಗೆ ದೇಶ ಒತ್ತೆ

ಅಂದಿನ ದಿನಗಳಲ್ಲಿ ಸರ್ಧಾರ್ ಪಟೇಲ್ ಅವರು ಬ್ರಿಟಿಷ್ ವಸಹಾತುಶಾಹಿಯ ವಿರುದ್ಧ ಹೋರಾಡಿದ್ದರು. ಆದರೀಗ ಬಿಜೆಪಿ ದೇಶವನ್ನೇ

ವಿದೇಶಿ ಬಂಡವಾಳಿಗರಿಗೆ ಒತ್ತೆ ಇಡುತ್ತಿದೆ. ಆ ಮೂಲಕ ನಮ್ಮ ದೇಶದ ಕೋಟ್ಯಾಂತರ ಜನರ ಜೀವಗಳಿಗೆ ಸಂಚಕಾರ ತಂದಿರುವ ಅಮೇರಿಕಾ ಮತ್ತು ಜಪಾನ್ ಮೊದಲಾದ ದೇಶಗಳಿಂದ ಮೆಚ್ಚುಗೆ ಗಳಿಸಲು ಯತ್ನಿಸಿದೆ. ಇದಕ್ಕೆ ಒಂದು ಜೀವಂತ ಉದಾಹರಣೆ ಎಂದ–ರೆ... ಅಮೇರಿಕಾಕ್ಕೆ ಭೇಟಿ ನೀಡುವ ಮೊದಲು ಮೋದಿ ಭಾರತದಲ್ಲಿ ಸುಮಾರು 100 ಜೀವರಕ್ಷಕ ಔಷಧಿಗಳ ಮೇಲಿನ ನಿಯಂತ್ರಣವನ್ನು ತೆಗೆದು ಹಾಕಿ ಒಬಾಮನ ಮನಸಂತೋಷಪಡಿಸಿದರು. ಇದರ ಪರಿಣಾಮವೆಂದರೆ ಅಮೇರಿಕಾದ ಔಷಧಿ ಕಂಪನಿಗಳು ಭಾರೀ ಪ್ರಮಾಣದಲ್ಲಿ ಲಾಭ ಮಾಡಿಕೊಳ್ಳಲಿವೆ. ಮತ್ತೊಂದೆಡೆ ಔಷಧಿ ಬೆಲೆಗಳ ತೀವ್ರ ಏರಿಕೆಯಿಂದ ನಮ್ಮ ಜನ ಸಾಮಾನ್ಯರು ಬಳಲುವಂತಾಗುತ್ತದೆ. ಹಾಗಾಗಿ ಇದು ಕೇವಲ ನೆಹರು ಅಥವಾ ಪಟೇಲ್ ಅವರ ವಾರಸುದಾರಿಕೆ ಪ್ರಶ್ನೆಯಾಗಿ ಮಾತ್ರವೇ ನಾವು ನೋಡಬೇಕಿಲ್ಲ. ದೇಶದ ಸ್ವಾತಂತ್ರ್ಯಕ್ಕಾಗಿ ಅಸಂಖ್ಯಾತ ಜನರು ಮಾಡಿರುವ ಅಪಾರ ಪ್ರಮಾಣದ ತ್ಯಾಗ ಬಲಿದಾನಗಳನ್ನು ಮರೆಮಾಚಿ ಕೇವಲ ವಾರಸುದಾರಿಕೆಗಾಗಿ ಮಾತ್ರ ಹೊಡೆದಾಡುತ್ತಿರುವ ಕಾಂಗ್ರೆಸ್–ಬಿಜೆಪಿಗಳಿಗೆ ಅಂತಹ ಯಾವುದೇ ಹಕ್ಕಿಲ್ಲ.

ಮುಚ್ಚಿಡಲಾಗುತ್ತಿರುವ 'ನಗ್ನಸತ್ಯ'ಗಳು

ಇನ್ನೊಂದೆಡೆ ನೆಹರು ಮತ್ತು ಪಟೇಲರ ಪರಂಪರೆಗಳ ಬಗೆಗೆ ಚರ್ಚೆಯನ್ನು ಸಂಘಟಿಸುತ್ತಿರುವ ನಮ್ಮ ದೇಶದ ಕಾರ್ಪೋರೇಟ್ ಮಾಧ್ಯಮಗಳು ಕೆಲವು ಚಾರಿತ್ರಿಕ ನಗ್ನಸತ್ಯಗಳನ್ನು ಮುಚ್ಚಿಡುತ್ತಿವೆ. ಆ ಸತ್ಯ ಸಂಗತಿಗಳೆಂದರೆ.....

ಆರ್.ಎಸ್.ಎಸ್. ಹಾಗೂ ಹಿಂದೂ ಮಹಾಸಭಾಗಳೆರಡು ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿ ಯಾವತ್ತೂ ಭಾಗವಹಿಸಲೇ ಇಲ್ಲ. ಆರಂಭಿಕ ಘಟ್ಟದಲ್ಲಿ ಹೋರಾಟಗಾರರಾಗಿದ್ದ ಸಾವರ್ಕರ್ ಸ್ವತಃ ತಾವು ಜೈಲಿನಿಂದ ಹೊರಬರಲು ಬ್ರಿಟಿಷ್ ಆಡಳಿತಕ್ಕೆ ಶರಣಾಗತಿ ಅರ್ಜಿ ನೀಡಿರುವ ಬಗ್ಗೆ ಮತ್ತು ಆರ್.ಎಸ್.ಎಸ್. ಮತ್ತವರ ಪರಿವಾರಗಳು ಬ್ರಿಟಿಷ್ ಅಳರಸರಿಗೆ ಸಹಾಯ ಮಾಡಿರುವ ಬಗ್ಗೆ ಸಾಕಷ್ಟು ದಾಖಲಾತಿಗಳಿದ್ದಾಗ್ಯೂ ಈ ಯಾವುದೇ ಸತ್ಯ ವಿಚಾರಗಳ ಬಗ್ಗೆ ನಮ್ಮ ಮಾಧ್ಯಮಗಳು ಯಾವುದೇ ಚರ್ಚೆ ನಡೆಸದೆ ನುಣುಚಿಕೊಳ್ಳುತ್ತಿವೆ.

ಮರೆಮಾಚಲಾಗುತ್ತಿರುವ ಕಮ್ಯೂನಿಸ್ಟರ 'ಕ್ರಾಂತಿಕಾರಿ' ಪಾತ್ರ

ಇಲ್ಲಿ ಇನ್ನೊಂದು ಸತ್ಯವನ್ನು ನಾವು ಗಮನಿಸಬೇಕು. ಅದೇಂದರೆ ಇದೇ ಕಾರ್ಪೋರೇಟ್ ಮಾಧ್ಯಮಗಳು ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಕಮ್ಯೂನಿಸ್ಟರು ವಹಿಸಿದ್ದ ಪಾತ್ರಗಳ ಬಗ್ಗೆ ಅವರು ನಡೆಸಿದ ಬಲಿದಾನಗಳ ಬಗ್ಗೆ ಏನನ್ನೂ ಹೇಳುತ್ತಿಲ್ಲ. ವಾಸ್ತವ ಅಂಶವೆಂದರೆ 1920 ನಂತರ ಕಾಂಗ್ರೆಸ್‌ನಲ್ಲಿ ಕ್ರಾಂತಿಕಾರಿತನವನ್ನು ಪರಿಚಯಿಸಿದ್ದು ಕಮ್ಯೂನಿಸ್ಟರೇ. ಅಂದಿನ ಕಾಲಘಟ್ಟದಲ್ಲಿ ಕಾಂಗ್ರೆಸ್‌ನೊಳಗಿದ್ದುಕೊಂಡೇ ಕೆಲಸ ಮಾಡುತ್ತಿದ್ದ ಕಮ್ಯೂನಿಸ್ಟರು 'ಸಂಪೂರ್ಣ ಸ್ವಾತಂತ್ರ್ಯ'ದ ಬೇಡಿಕೆ ಘೋಷಣೆಯನ್ನು ಮಂಡಿಸಿದ್ದರು. ಮಾತ್ರವಲ್ಲ ಸ್ವಾತಂತ್ರ್ಯ ಹೋರಾಟದಲ್ಲಿ ಊಳಿಗಮಾನ್ಯ ಪದ್ಧತಿ, ಮತ್ತು ಜಾತಿ ದಬ್ಬಾಳಿಕೆಯನ್ನು ಸಂಪೂರ್ಣ ಕಿತ್ತು ಹಾಕುವ ಮೂಲಕ ಸಾಮಾಜಿಕ ಬದಲಾವಣೆ ತರುವ ಅಜೆಂಡಾವನ್ನು ಅಂಗೀಕರಿಸುವಲ್ಲಿ ಕಮ್ಯೂನಿಸ್ಟರೇ ಪ್ರಮುಖ ಪಾತ್ರವಹಿಸಿದ್ದರು. ಇದಲ್ಲದೆ ಈ ದೇಶದ ಹಲವಾರು ಭಾಗಗಳಲ್ಲಿ ಊಳಿಗಮಾನ್ಯ ವ್ಯವಸ್ಥೆಯ ವಿರುದ್ಧ ಮತ್ತು ಭೂ ಸುಧಾರಣೆಗಾಗಿ ಹಲವು ರೈತ ಹೋರಾಟಗಳನ್ನು ನಡೆಸುವುದರ ಮೂಲಕ ಭೂ ಸುಧಾರಣೆ ಹಾಗೂ ಭಾರತದ ಗ್ರಾಮೀಣ ಬಡತನ ನಿರ್ಮೂಲನೆಯ ಪ್ರಶ್ನೆಯನ್ನು ಮುಂಚೂಣಿಗೆ ತಂದರು. ಕಾರ್ಮಿಕರ ಸಂಘಟನೆ ಮತ್ತು ಕಾರ್ಮಿಕ ಚಳುವಳಿಯ ಮೂಲಕ ಅವತ್ತಿನ ಭಾರತದ ಕಾರ್ಮಿಕ ವರ್ಗ ಎದುರಿಸುತ್ತಿದ್ದ ಜ್ವಲಂತ ಸಮಸ್ಯೆಗಳ ಪ್ರಶ್ನೆಯನ್ನು ಸ್ವಾತಂತ್ರ್ಯ ಚಳುವಳಿಯ ಭಾಗವಾಗುವಂತೆ ಪ್ರಯತ್ನಿಸಿದ ಕೀರ್ತಿ ಕಮ್ಯೂನಿಸ್ಟರಿಗೆ ಸಲ್ಲುತ್ತದೆ. ನಂತರ ಫ್ಯಾಸಿಸಂ ವಿರುದ್ಧ ನಡೆದ ಹೋರಾಟದಲ್ಲಿ ಕಮ್ಯೂನಿಸ್ಟರು ದೇಶದಲ್ಲಿ ಒಂದು ಸಾಂಸ್ಕೃತಿಕ ಜನ ಚಳುವಳಿಯನ್ನೇ ಹುಟ್ಟು ಹಾಕಿದ್ದರು.

ಸ್ವಾತಂತ್ರ್ಯ ಚಳುವಳಿಯ ನಿಜವಾದ ವಾರಸುದಾರಿಕೆ ಕಮ್ಯೂನಿಸ್ಟರದ್ದು

ಆದ್ದರಿಂದಲೇ ಸ್ವಾತಂತ್ರ್ಯ ಚಳುವಳಿಯ ನಿಜವಾದ ವಾರಸುದಾರಿಕೆಯನ್ನು ಹೊಂದಿರುವುದು ಮತ್ತು ಆ ಮಹಾನ್ ಪರಂಪರೆಯನ್ನು ದೇಶದಲ್ಲಿ ಈಗಲೂ ಮುಂದುವರೆಸುತ್ತಿರುವುದು ಕಮ್ಯೂನಿಸ್ಟರೇ ಎಂಬುದರಲ್ಲಿ ಯಾವ ಅನುಮಾನವು ಇಲ್ಲ. ಆರ್.ಎಸ್.ಎಸ್. ಹಾಗೂ ಅದರ ಪರಿವಾರದವರು ಯಾವತ್ತೂ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲಿಲ್ಲ. ಬದಲಾಗಿ ಅಂದು ಬ್ರಿಟಿಷ್ ಆಡಳಿತಗಾರರೊಂದಿಗೆ ಶಾಮೀಲಾಗಿದ್ದರು. ಈಗಲೂ ಅವರು ಸಾಮ್ರಾಜ್ಯಶಾಹಿಯ ಮುಂದೆ ಸಣ್ಣಪುಟ್ಟ 'ಕೃಪೆ'ಗಳಿಗಾಗಿ ಬೇಡುತ್ತಿದ್ದಾ–ರೆ. ಮತ್ತೊಂದೆಡೆ ಕಾಂಗ್ರೆಸ್ ಪಕ್ಷವೂ ಸ್ವಾತಂತ್ರ್ಯ ಚಳುವಳಿಯ ಪರಂಪರೆಯನ್ನು ಹರಾಜಿಗಿಟ್ಟಿದೆ. ಹಾಗಾಗಿ ಅದಕ್ಕೆ ಆ ಚಳುವಳಿಯ ವಾರಸುದಾರಿಕೆ ಮೇಲೆ ಇದ್ದ ಹಕ್ಕನ್ನು ಕಳೆದುಕೊಂಡಿದೆ.

ಹೀಗಾಗಿ ಕಾಂಗ್ರೆಸ್–ಬಿಜೆಪಿಗಳೆರಡು ನೆಹರು–ಪಟೇಲ್ ಕುರಿತು ನಡೆಸುತ್ತಿರುವ ಈ ಕಿತ್ತಾಟವು ದೇಶದ ಜನರಿಗೆ ಮಾಡುತ್ತಿರುವ ಮೋಸವೇ ಹೊರತು ಇನ್ನೇನೂ ಅಲ್ಲ.

(ಕೃಪೆ : 'ಪ್ರಜಾಶಕ್ತಿ' ತೆಲುಗು ದೈನಿಕ–(ನವೆಂಬರ್ 15–2014) ಎಸ್. ವೆಂಕಟರಾವ್ ಬರೆದ ಲೇಖನವನ್ನು ಇಂಗ್ಲೀಷ್‌ಗೆ ಅನುವಾದಿಸಿದ್ದವರು–ಪಿ. ಅಶೋಕಬಾಬು– ಕಿರು ಶೀರ್ಷಿಕೆಗಳು 'ಜನಶಕ್ತಿ'ಗಾಗಿ ನೀಡಲಾಗಿರುವುದು.)



ಮತಾಂಧರಿಂದ ಹತ್ಯೆಯಾದ ಮಹಾತ್ಮಗಾಂಧಿ

ಗಾಂಧಿ ಹತ್ಯೆಯ ಪ್ರಕರಣದಲ್ಲಿ ಆರೋಪಿಗಳು ನ್ಯಾಯಾಲಯದ ಕಟಕಟೆಯಲ್ಲಿ.... ನಾಥೂರಾಮ್ ಗೋಡ್ಸೆ, ಆಪ್ಟೆ, ಕರ್ಕರೆ, ಬಡ್ಗೆ, ಮದನ್ ಲಾಲ್, ಗೋಪಾಲ ಗೋಡ್ಸೆ, ಸಾವರ್ಕರ್ (ಹಿಂದಿನ ಸಾಲಿನಲ್ಲಿ ಮಧ್ಯೆ ಟೋಪಿ ಹಾಕಿಕೊಂಡು ನಿಂತಿರುವವರು)



ಅಂಗವಿಕಲರ ಮೀಸಲಾತಿ ಜಾರಿಯಾಗಿಲ್ಲ....

ಪುಟ 6 ರಿಂದ

ಎನ್. ಯಶಸ್ವಿ, ಜಿಲ್ಲಾ ಅಧ್ಯಕ್ಷರಾದ ಶ್ರೀಕುಮಾರ. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಉಪಾಧ್ಯಕ್ಷರಾದ ಕೆ. ಹನುಮೇಗೌಡ, ಅಂಗವಿಕಲರ ತಾಲೂಕು ಮಟ್ಟದ ಎಂ.ಆರ್.ಡಬ್ಲ್ಯು ಆರ್. ಎಸ್. ಮಹದೇವರವರು ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು. ವೇದಿಕೆಯಲ್ಲಿ ದೊಡ್ಡ ಮರೀಗೌಡ, ಶ್ರೀ ರಮೇಶ್ ಉಪಸ್ಥಿತರಿದ್ದರು.

ಸಮಾವೇಶದ ನಂತರ ಪ್ರತಿನಿಧಿ ಅಧಿವೇಶನವನ್ನು ನಡೆಸಲಾಯಿತು. ಅಧಿವೇಶನದಲ್ಲಿ ಎಲ್ಲಾ ಅಂಗವಿಕಲರಿಗೂ 3000 ರೂ. ಮಾಶಾಸನ, ಉಚಿತ ಮನೆ, ನಿವೇಶನ, ಅಂತ್ಯೋದಯ ಕಾರ್ಡ್ ನೀಡಬೇಕು ಎಂದು ನಿರ್ಣಯ ಮಾಡಲಾಯಿತು.

ಅಂಗವಿಕಲರ ಸಂಘಟನೆ ಮಂಡ್ಯ ಜಿಲ್ಲೆಯಲ್ಲಿ 4 ವರ್ಷಗಳಿಂದ ವಿವಿಧ ಹೋರಾಟಗಳನ್ನೂ ನಡೆಸುತ್ತಾ ಕ್ರಿಯಾಶೀಲವಾಗಿದೆ. ಜಿಲ್ಲಾ ಆಡಳಿತದೊಂದಿಗೆ ಮುಖಾಮುಖಿಯಾಗಿ ಹಲವು ಸೌಲಭ್ಯಗಳನ್ನೂ ಅಂಗವಿಕಲರ ನಡುವೆ ಜಾರಿಮಾಡಿಸುವುದರಲ್ಲಿ ಯಶಸ್ವಿಯಾಗಿದೆ. ಜಿಲ್ಲಾ ಸಮಿತಿ, ಮಂಡ್ಯ ತಾಲ್ಲೂಕು ಸಮಿತಿ, ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿವೆ. ಮಳವಳ್ಳಿಯಲ್ಲಿ ಸಂಘಟನಾ ಸಮಿತಿಯೊಂದನ್ನು ರೂಪಿಸಲಾಗಿದ್ದು ಹಲವು ಪಂಚಾಯಿತಿಗಳಲ್ಲಿ ಘಟಕಗಳನ್ನು, ಸಂಘಟನಾ ಸಮಿತಿಗಳನ್ನು ರಚಿಸಿತ್ತು. ಸಂಘಟನಾ ಸಮಿತಿ ತಾಲ್ಲೂಕು ಸಮ್ಮೇಳನವನ್ನೂ ಸಂಘಟಿಸಿತು. ಈ ಸಮ್ಮೇಳನಕ್ಕೆ 10 ಪಂಚಾಯ್ತಿಗಳಿಂದ ನೂರಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು. 22 ಜನ ಪ್ರತಿನಿಧಿಗಳು ತಮ್ಮ ಕುಂದುಕೊರತೆಗಳನ್ನು ವಿವರಿಸಿದರು. ಸರ್ಕಾರದ ಮತ್ತು ತಾಲ್ಲೂಕು ಅಧಿಕಾರಿಗಳ ನಿರ್ಲಕ್ಷ್ಯವನ್ನು ವಿವರಿಸಿದರು. ಈ ಸಮ್ಮೇಳನದಲ್ಲಿ 15 ಜನರ ಕಾರ್ಯಕಾರಿ ಸಮಿತಿ ರಚಿಸಲಾಯಿತು. ದೊಡ್ಡಮರಿಗೌಡರು ಕಾರ್ಯಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ವರದಿ – ಕೆ. ಹನುಮೇಗೌಡ

ನವ–ಉದಾರವಾದದ ಹಳೆಯ ದಾರಿಯಲ್ಲೇ.........

ಪುಟ 7 ರಿಂದ

ಭಾರತಕ್ಕೆ ರಫ್ತು ಮಾಡುವ ನಿರೀಕ್ಷೆ ಇಟ್ಟು–ಕೊಂಡಿದ್ದಾರೆ.

ಅದಾನಿ ಗುಂಪಿನ ಕಂಪನಿಯಾದ ಅದಾನಿ ಮೈನಿಂಗ್ ಈ ಪ್ರಾಜೆಕ್ಟನ್ನು ನಿರ್ವಹಿಸುತ್ತಿದ್ದು ಆ ಕಂಪನಿಗೆ "1ಬಿಲಿಯ ಡಾಲರುಗಳ ಸಾಲ, ಶೇರುದಾರರ ನಿಧಿಗಳು ನಕಾರಾತ್ಮವಾಗಿವೆ, ಸೊನ್ನೆ ಆದಾಯ ಮತ್ತು ವಿಪರೀತ ನಗದು ದಹನ" ಇದೆ ಎಂದು ಸಿಡ್ನಿಯ 'ಮಾರ್ನಿಂಗ್ ಹೆರಾಲ್ಡ್' ಹೇಳುತ್ತದೆ. ಆಸ್ಟ್ರೇಲಿಯಾದ ಕ್ವೀನ್ಸ್‌ಲ್ಯಾಂಡ್ ರಾಜ್ಯ ಎಲ್ಲ ಪರಿಸರ ಮಂಜೂರಾತಿಗಳನ್ನು ನೀಡಿದ್ದರೂ ಈ ಕಂಪನಿ ಈಗಲೂ ಹಸಿರು ಪರಿಸರ ಕಾರ್ಯಕರ್ತರು ಕೋರ್ಟುಗಳಲ್ಲಿ ಹಾಕಿರುವ ಖಟ್ಲೆಗಳೊಂದಿಗೆ ಸೆಣಸುತ್ತಿದೆ. ಈ ಪ್ರಾಜೆಕ್ಟ್‌ನ ಗಣಿಗಾರಿಕೆ ಈ ದ್ವೀಪಖಂಡದ ಸುತ್ತಲಿನ 'ಗ್ರೇಟ್ ಬ್ಯಾರಿಯರ್ ರೀಫ್'(ಮಹಾ ಅಡ್ಡಬಂಡೆ)ಗೆ ಬೆದರಿಕೆ ಒಡ್ಡಿದೆ ಎಂಬುದು ಈ ಪರಿಸರ ಕಾರ್ಯಕರ್ತರ ವಾದ. ಇದು ಈಗಾಗಲೇ ಈ ಕಲ್ಲಿದ್ದಲು ಗಣಿಗಳು 2022ರ ವೇಳೆಗಷ್ಟೇ ಪೂರ್ಣ ಉತ್ಪಾದನೆ ಆರಂಭಿಸಲು ಸಾಧ್ಯ ಎಂಬುದನ್ನು ಇನ್ನಷ್ಟು ತೊಡಕಾಗಿಸಿದೆ. 2017ರ ವೇಳೆಗೆ ಪೂರ್ಣ ಉತ್ಪಾದನೆಯ ಮಟ್ಟವನ್ನು ತಲುಪದಿದ್ದರೆ ಈ ಕಂಪನಿ ಪ್ರತಿವರ್ಷ 1ಬಿಲಿಯ ಡಾಲರುಗಳ ನಷ್ಟ ಅನುಭವಿಸುವ ಅಪಾಯವಿದೆ ಎನ್ನಲಾಗಿದೆ.

ಅಂತಿಮವಾಗಿ, ಸದ್ಯಕ್ಕೆ ಕಲ್ಲಿದ್ದಲು ಬೆಲೆ ಟನ್ನಿಗೆ 70 ಡಾಲರಿಗೆ ಇಳಿದಿದ್ದು, ಇದು ಕಳೆದ ಐದು ವರ್ಷಗಳಲ್ಲೇ ಅತೀ ಕಡಿಮೆ ಮಟ್ಟ ಎನ್ನಲಾಗಿದೆ. ಇದರಿಂದ ಇದರ ಉತ್ಪಾದನಾ ಖರ್ಚು ಸದ್ಯ ಭವಿಷ್ಯದಲ್ಲಿ ದರ ಜಾಗತಿಕ ಬೆಲೆಗಿಂತ ಹೆಚ್ಚಾಗುತ್ತದೆ.

ಇವೆಲ್ಲ ಮಿತಿಗಳು ಗೊತ್ತಿದ್ದರೂ, ಆಸ್ಟ್ರೇಲಿಯಾದ ಇತಿಹಾಸದಲ್ಲೇ ಅತಿ ದೊಡ್ಡದಾದ ಅದಾನಿಯ ತಾಪ ಕಲ್ಲಿದ್ದಲು ಪ್ರಾಜೆಕ್ಟಿಗೆ ಈ ಬೃಹತ್ ಮೊತ್ತದ ಸಾಲವನ್ನು ಮಂಜೂರು ಮಾಡಲಾಗಿದೆ. ಇದರ ಅರ್ಥ ಬೇರೇನಿರಲು ಸಾಧ್ಯ? ಋಣಸಂದಾಯದ ಸಮಯ ಎಂದೇ ತಾನೇ?

ಆರ್ಥಿಕ ಪಾಕಸೂತ್ರ

ಒಂದೆಡೆಯಲ್ಲಿ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ಮತ್ತು ಭಾರತದ ಕಾರ್ಪೊರೇಟ್ ವಲಯಕ್ಕೆ ಅನುಕೂಲ ಕಲ್ಪಿಸುವ ಇಂತಹ ಸುಧಾರಣೆಗಳು, ಮತ್ತೊಂದೆಡೆಯಲ್ಲಿ ಭಾರತದ ಜನತೆಯ ಮೇಲೆ ಹೊರೆಗಳನ್ನು ಹಾಕುವ ಇನ್ನೊಂದು ಸ್ವರೂಪದ ಸುಧಾರಣೆಗಳು–ನರೇಗಕ್ಕೆ ನೀಡಬೇಕಾದ ಮೊತ್ತದಲ್ಲಿ ಕಡಿತ, ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ತೆರಿಗೆಗಳ ಹೆಚ್ಚಳ, ರೈಲ್ವೆ ದರಗಳ ಏರಿಕೆ, ಸಾರ್ವಜನಿಕ ವಲಯದ ಖಾಸಗೀಕರಣ ಇತ್ಯಾದಿ ಇತ್ಯಾದಿ – ಇದೇ ಶ್ರೀಯುತ ಮೋದಿಯವರ ಆರ್ಥಿಕ ಪಾಕಸೂತ್ರ. ಇದಕ್ಕೆ ಸಹಜವಾಗಿಯೇ ಹೆಚ್ಚುತ್ತಿರುವ ಜನತೆಯ ಅಸಂತೃಪ್ತಿ ಅವರ ಸರಕಾರದತ್ತ ಗುರಿಯಿಡದಂತೆ ದಾರಿ ತಪ್ಪಿಸಲು ಆರೆಸ್ಸೆಸ್/ಬಿಜೆಪಿ ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸುತ್ತವೆ. ಈ ಮೂಲಕ ಅವರು ಭಾರತೀಯ ಗಣತಂತ್ರದ ಜಾತ್ಯಾತೀತ ಪ್ರಜಾಸತ್ತಾತ್ಮಕ ಸ್ವರೂಪವನ್ನು ಬುಡಮೇಲು ಮಾಡಿ ಉನ್ಮತ್ತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿ 'ಹಿಂದೂ ರಾಷ್ಟ್ರ'ದ ನಿರ್ಮಾಣಕ್ಕೆ ಅನುಕೂಲ ಮಾಡಿಕೊಳ್ಳುವ ತಮ್ಮ ಗುರಿಸಾಧನೆಗೆ ಪ್ರಯತ್ನಿಸುತ್ತಾರೆ.

ಇಂಡಿಯಾ, ಅಂದರೆ ಭಾರತಕ್ಕಾಗಿ, ಈ ದುಷ್ಟ ಕಾರ್ಯತಂತ್ರವನ್ನು ಬಯಲಿಗೆಳೆಯಬೇಕು, ಜನಗಳನ್ನು ದೊಡ್ಡ ಪ್ರಮಾಣದಲ್ಲಿ ಅಣಿನೆರೆಸುವ ಮೂಲಕ ಅದನ್ನು ಸೋಲಿಸಬೇಕು.

'ದೇಶದ ಒಟ್ಟು ಆಸ್ತಿಯ 47 ಶೇ. 5 ಜನರ ಕೈಯಲ್ಲಿ– 127 ಕೋಟಿ ಜನರ ಕೈಯಲ್ಲಿ ಕೇವಲ ಶೇ.53% ಮಾತ್ರ.'

ಹಾಸನ ಸ್ಥಳೀಯ ಸಮ್ಮೇಳನದಲ್ಲಿ ಎಸ್. ವರಲಕ್ಷ್ಮಿ

'ದೇಶದ ಅಭಿವೃದ್ಧಿಯಲ್ಲಿ ಕೇಂದ್ರದ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಬಡ ಕಾರ್ಮಿಕರನ್ನು, ದಲಿತರನ್ನು, ರೈತರನ್ನು ಹಾಗೂ ಮಹಿಳೆಯರನ್ನು ಕಡೆಗಣಿಸುತ್ತಿರುವುದು ದೇಶದ ದುಡಿಯುವ ವರ್ಗಕ್ಕೆ ಮಾಡುತ್ತಿರುವ ದೊಡ್ಡ ಮೋಸವಾಗಿದೆ." ಎಂದು ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವರಲಕ್ಷ್ಮಿಯವರು ವಿಷಾದ ವ್ಯಕ್ತಪಡಿಸಿದರು.


ಎಚ್. ಆರ್. ನವೀನ್ ಕುಮಾರ್

ನವೆಂಬರ್ 9, 2014 ರಂದು ಸಿಪಿಐ(ಎಂ)ನ 2ನೇ ಹಾಸನ ಸ್ಥಳೀಯ ಸಮಿತಿಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು ದೇಶದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಪಕ್ಷವು ದೊಡ್ಡ ದೊಡ್ಡ ಬಂಡವಾಳಗಾರರ ಪರವಾದ ನೀತಿಗಳನ್ನು ರೂಪಿಸುತ್ತಿದೆ. ಇಡೀ ದೇಶದ ಒಟ್ಟು ಆಸ್ತಿಯ ಶೇ 47% ಆಸ್ತಿ ಕೇವಲ 5 ಜನರ ಕೈಯಲ್ಲಿದೆ. ಇನ್ನುಳಿದ 127 ಕೋಟಿಯಷ್ಟು ಜನರು ಉಳಿದ ಶೇ.53% ರಷ್ಟು ಆಸ್ತಿಯಲ್ಲಿ ಬದುಕುತ್ತಿದ್ದಾರೆ ಎಂದರು. ಮೋದಿಯವರು ಕಪ್ಪು ಹಣವನ್ನು ಮರಳಿ ತರುತ್ತೇವೆ ಎಂಬ ಹೇಳಿಕೆ ಕೊಡುತ್ತಿದ್ದಾರೆ. ಆದರೆ ಪಟ್ಟಿಯಲ್ಲಿರುವ 674 ಜನರ ಹೆಸರನ್ನು ಬಹಿರಂಗಪಡಿಸದೆ, ಮರೆಮಾಚುತ್ತಿರುವುದು ಹಲವು ಅನುಮಾನಗಳನ್ನು ಹುಟ್ಟಿಸುತ್ತಿದೆ. ಸುಪ್ರೀಂ ಕೋರ್ಟ್‌ಗೆ ನೇರವಾಗಿ ವಕಾಲತ್ತು ವಹಿಸುವ ಕೆಲಸಕ್ಕೆ ಬಿಜೆಪಿ ಮುಂದಾಗಿದೆ. ಸ್ವಚ್ಛ ಭಾರತ ಅಭಿಯಾನ ಮಾಡುತ್ತಿರುವ ಮೋದಿಯವರು ಅವರ ಪಕ್ಷವನ್ನು ಸ್ವಚ್ಛಗೊಳಿಸಿದರೆ ಶೇ.50% ರಷ್ಟು ದೇಶದ ಅಭಿವೃದ್ಧಿಯಾಗುತ್ತಿತ್ತು. ಇದೀಗ ಖಾಸಗಿ ವ್ಯಕ್ತಿಗಳಿಗೆ, ಕಂಪನಿಗಳಿಗೆ ಮಣೆ ಹಾಕಲಾಗುತ್ತಿದೆ. ಹೊಸ ಉದ್ಯೋಗಗಳನ್ನು ಸೃಷ್ಟಿಸುವ ಬದಲು ಇರುವ ಉದ್ಯೋಗಗಳನ್ನು ಖಾಸಗೀಕರಣಗಳಿಸಲಾಗುತ್ತಿದೆ. ಹಾಗೆಯೆ ರೈಲ್ವೆ, ಎಲ್.ಐ.ಸಿ. ಹಾಗೂ ಸರ್ಕಾರದ ಕೆಲವು ಇಲಾಖೆಗಳನ್ನೂ ಕೂಡ ಖಾಸಗೀಕರಣ ಮಾಡಲು ಹೊರಟಿದ್ದಾರೆ. ಇದರಿಂದಾಗಿ ಉದ್ಯೋಗ ಕಡಿತವಾಗಲಿವೆ ಎಂದರು. ಹಿಂದಿನ ಕಾಂಗ್ರೆಸ್ ಪಕ್ಷ ಆಡಳಿತ ನಡೆಸಿದ ಸಂದರ್ಭದಲ್ಲಿ ರೂಪಿಸಿದ್ದ ಜನವಿರೋಧಿ ನೀತಿಗಳನ್ನು ಬಿಜೆಪಿ ಮುಂದುವರೆಸುತ್ತಿದೆ.

ರಾಜ್ಯದಲ್ಲಿ ಸರ್ಕಾರದ ಆಡಳಿತ ವ್ಯವಸ್ಥೆ ಕುಸಿಯುತ್ತಿದೆ. ಖಾಸಗೀ ಶಾಲೆಗಳಲ್ಲಿ ಪುಟ್ಟಮಕ್ಕಳ ಮೇಲೆ ನಡೆಯುತ್ತಿರುವ ಸರಣಿ ಅತ್ಯಾಚಾರಗಳು ಮತ್ತು ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯಗಳಿಂದ ಪೋಷಕರು ಮತ್ತು ಸಾರ್ವಜನಿಕರು ಹೆಚ್ಚು ಆತಂಕಕ್ಕೆ ಒಳಗಾಗಿದ್ದಾರೆ. ಸರ್ಕಾರ ರಾಜ್ಯದ ಜನತೆಯನ್ನು ರಕ್ಷಿಸುವ ಬದಲು ರಾಜಕೀಯದ ಕೆಸರೆರಚಾಟದಲ್ಲಿ ಮುಳುಗಿದೆ. ನಂದಿತಾಳ ನಿಗೂಢ ಸಾವನ್ನು ರಾಜ್ಯದ ಬಿಜೆಪಿ ಮುಖಂಡರು ತಮ್ಮ ರಾಜಕೀಯ ಸ್ವಾರ್ಥ–ಕ್ಕೆ ಬಳಸಿಕೊಂಡು ಕೀಳು ಮಟ್ಟದ ಹೇಳಿಕೆ ಕೊಡುತ್ತಿರುವುದು ನಾಚಿಕೆಗೇಡಿನ ವಿಷಯ. ಉಜಿರೆಯ ಸೌಜನ್ಯ ಪ್ರಕರಣದಲ್ಲಿ ಬಾಯಿ ಬಿಡದ ಇವರು ನಂದಿತಾ ಪ್ರಕರಣವನ್ನು ರಾಜಕೀಯವಾಗಿ ಬಳಸಿಕೊಳ್ಳುತ್ತಿದ್ದಾರೆ ಎಂದು ಟೀಕಿಸಿದರು.

ದೇಶದ ಅಭಿವೃದ್ಧಿಯಲ್ಲಿ ಕಮ್ಯುನಿಸ್ಟ್ ಪಕ್ಷಗಳು ತಮ್ಮದೇ ಆದ ಉತ್ತಮ ಸರಕಾರದ ಮಾದರಿಯನ್ನು ನೀಡಿವೆ. ನೀಡುತ್ತಿವೆ. ಕೇರಳ, ಪಶ್ಚಿಮ ಬಂಗಾಳ ಮತ್ತು ತ್ರಿಪುರಾದಂತಹ ರಾಜ್ಯಗಳಲ್ಲಿ ಉತ್ತಮ ಆಡಳಿತ ವ್ಯವಸ್ಥೆ ನಿರ್ಮಾಣ ಮಾಡಿವೆ. 1964 ರಲ್ಲಿ ಹುಟ್ಟಿದ ಸಿಪಿಐ(ಎಂ) ಪಕ್ಷವು ಜಾತಿ ತಾರತಮ್ಯದ ವಿರುದ್ಧ, ರೈತ ಪರವಾದ, ಕೃಷಿ ಕೂಲಿಕಾರರ, ಕಾರ್ಮಿಕರ ಪರವಾದ ಗಟ್ಟಿಯಾದ ಹೋರಾಟ ನಡೆಸುತ್ತಲೇ ಬಂದಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯ ಅಡಿಗಲ್ಲಾಗಿ ಕಮ್ಯುನಿಸ್ಟ್ ಪಕ್ಷಗಳು ನಿಂತಿವೆ. ಈ ನಿಟ್ಟಿನಲ್ಲಿ ಈ ಸಮ್ಮೇಳನದಲ್ಲಿ ಚರ್ಚಿಸಿ ಜನಪರವಾದ ಹೋರಾಟಕ್ಕೆ ಮುಂದಾಗಬೇಕಿದೆ ಎಂದರು.

ಮುಖ್ಯ ಅತಿಥಿಗಳಾಗಿ ಮಾತನಾಡಿದ ಜಿಲ್ಲಾ ಮುಖಂಡ ಧರ್ಮೇಶ್‌ರವರು ಪಾಲ್ಗೊಂಡಿದ್ದರು. ಸಮ್ಮೇಳನದ ಆರಂಭಕ್ಕೂ ಮುನ್ನ ಪಕ್ಷದ ಹಿರಿಯ ಸದಸ್ಯರಾದ ಕಾಂ. ಜಿ.ಪಿ.ಸತ್ಯನಾರಾಯಣರವರು ಪಕ್ಷದ ಧ್ವಜಾರೋಹಣ ಮಾಡಿದರು. ಸಿಪಿಐ(ಎಂ)ನ ಜಿಲ್ಲಾ ಸಂಘಟನಾ ಸಮಿತಿಯ ಸದಸ್ಯರಾದ ಎಚ್.ಆರ್. ನವೀನ್ ಕುಮಾರ್, ಸ್ಥಳೀಯ ಸಮಿತಿ ಸದಸ್ಯರಾದ ಪುಷ್ಪ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು, ಜಿ.ಪಿ ಸತ್ಯನಾರಾಯಣ ಅಧ್ಯಕ್ಷತೆ ವಹಿಸಿದ್ದರು. ಸ್ಥಳೀಯ ಸಮಿತಿ ಸದಸ್ಯ ಪೃಥ್ವಿ ಎಂ.ಜಿ. ಸ್ವಾಗತಿಸಿ ನಿರೂಪಿಸಿದರು. ಶಾವಲ್ ಹಮೀದ್ ವಂದನಾರ್ಪಣೆ ಮಾಡಿದರು.

ನಂತರ ನಡೆದ ಪ್ರತಿನಿಧಿ ಅಧಿವೇಶನದಲ್ಲಿ ನೂತನ ಸ್ಥಳೀಯ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಎಚ್. ಆರ್. ನವೀನ್ ಕುಮಾರ್ ಕಾರ್ಯದರ್ಶಿಯಾಗಿ ಆಯ್ಕೆಯಾದರು. •



ಸಕಲೇಶ್ವರ ಸಿಪಿಐ(ಎಂ) ಸಮ್ಮೇಳನ

ಸಕಲೇಶಪುರ ಭಾಗದ ಕಾಫಿ ಉತ್ಪನ್ನದ ಶೇ. 80 ರಷ್ಟನ್ನು ರಫ್ತು ಮಾಡುವ ಮೂಲಕ ದೇಶದ ಅಭಿವೃದ್ಧಿಗೆ ಸಾಕಷ್ಟು ಕೊಡುಗೆ ನೀಡುತ್ತಿದ್ದರೂ ಸಹ ಈ ಉತ್ಪಾದನೆಗೆ ಗಣನೀಯ ಕೊಡುಗೆ ಕೊಟ್ಟಿರುವ ಸಹಸ್ರಾರು ಸಂಖ್ಯೆಯ ತೋಟ ಕಾರ್ಮಿಕರ ಜೀವನ ಮಟ್ಟದಲ್ಲಿ ಯಾವುದೇ ರೀತಿಯ ಬದಲಾವಣೆಗಳಾಗಲಿಲ್ಲ. ಇದ–ಕ್ಕೆ ಆಳುವ ಸರ್ಕಾರಗಳ ಕಾರ್ಮಿಕ ವಿರೋಧಿ ನೀತಿಗಳೇ ಕಾರಣ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವರಲಕ್ಷ್ಮಿಯವರು ದೂರಿದರು. ಸಕಲೇಶಪುರದಲ್ಲಿ ನಡೆದ ಸಿಪಿಐ(ಎಂ)ನ ಸಕಲೇಶಪುರ ಸ್ಥಳೀಯ ಸಮಿತಿಯ ಪ್ರಥಮ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಕೇಂದ್ರದಲ್ಲಿ ಅಧಿಕಾರವನ್ನು ನಡೆಸುತ್ತಿರುವ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಕಾರ್ಮಿಕರ ಕಾನೂನುಗಳಿಗೆ ತಿದ್ದುಪಡಿ ಮಾಡಲು ಹೊರಟಿದ್ದು ಈ ತಿದ್ದುಪಡಿ ಯಥಾವತ್ತಾಗಿ ಜಾರಿಯಾದರೆ ಹಲವು ವರ್ಷಗಳ ಹೋರಾಟದ ಫಲವಾಗಿ ಗಳಿಸಿರುವ ಹಕ್ಕುಗಳನ್ನು ಕಾರ್ಮಿಕರು ಕಳೆದುಕೊಳ್ಳಬೇಕಾಗುತ್ತದೆ. ಜೊತೆಗೆ ಈ ಎಲ್ಲಾ ನೀತಿಗಳು ಮಾಲೀಕರು ಮತ್ತು ಕಾರ್ಪೋರೇಟ್ ಉದ್ಯಮಿಗಳ ಪರವಾಗಿ ಬದಲಾಗುತ್ತಿದ್ದು, ಇದು ಅತ್ಯಂತ ಕಾರ್ಮಿಕ ವಿರೋಧಿಯಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಬಹುಸಂಖ್ಯಾತ ದುಡಿಯುವ ವರ್ಗದ ಜೀವನಸ್ಥಿತಿ ದಿನೇದಿನೇ ದುರ್ಭರವಾಗುತ್ತಿದ್ದು ಒಂದು ಕಡೆ ಬಡವರ ಸಂಖ್ಯೆ ಹೆಚ್ಚಾಗುತ್ತಿದ್ದು ಜನರು ಹಸಿವಿನಿಂದ ಸಾವನ್ನಪ್ಪುವ ಸ್ಥಿತಿ ನಿರ್ಮಾಣವಾಗಿದೆ. ಮತ್ತೊಂದೆಡೆ ಬೆರಳೆಣಿಕೆಯ ಜನ ದೇಶದ ಸಂಪತ್ತನ್ನೆಲ್ಲ ಕೇಂದ್ರೀಕರಿಸಿ ಜಗತ್ತಿನ ಶ್ರೀಮಂತರ ಪಟ್ಟಿಗೆ ಸೇರ್ಪಡೆಯಾಗುತ್ತಿದ್ದಾರೆ. ಇದು ದೇಶದ ನೈಜ ಅಭಿವೃದ್ಧಿಯಾಗದೆ ಕೇವಲ ಕೆಲವು ಬಂಡವಾಳಿಗರ ಅಭಿವೃದ್ಧಿ ಮಾತ್ರ. ಸಕಲೇಶಪುರದಲ್ಲಿ ದೊಡ್ಡಸಂಖ್ಯೆಯಲ್ಲಿ ಸರ್ಕಾರಿ ಭೂಮಿಯನ್ನು ಉಳುಮೆ ಮಾಡಿರುವ ಬಗರ್‌ಹುಕುಂ ಸಾಗುವಳಿದಾರರಿದ್ದಾರೆ. ಇವರು ಹತ್ತಾರು ವರ್ಷಗಳಿಂದ ಸಾಗುವಳಿ ಮಾಡಿ ದೇಶದ ಅಭಿವೃದ್ಧಿಗೆ ಕೊಡುಗೆ ನೀಡುತ್ತಿರುವ ಅನ್ನದಾತರಿಗೆ ಭೂಮಿಯನ್ನು ನೀಡಬೇಕಾದ ರಾಜ್ಯ ಸರ್ಕಾರ ರೈತರನ್ನು ಭೂಮಿಯಿಂದ ಒಕ್ಕಲೆಬ್ಬಿಸಲು ಹೊರಟಿದೆ. ಇದರಿಂದ ರೈತರು ಬೀದಿಪಾಲಾಗುವ ಸ್ಥಿತಿ ನಿರ್ಮಾಣವಾಗಿದೆ. ರಾಜ್ಯ ಸರ್ಕಾರ ಈ ನೀತಿ ಕೈಬಿಟ್ಟು ರೈತರಿಗೆ ಭೂಮಿ ನೀಡುವ ಕೆಲಸಕ್ಕೆ ಮುಂದಾಗಬೇಕೆಂದು ಅವರು ಆಗ್ರಹಿಸಿದರು.


ಎ. ಹರೀಶ್


ಬಹು ಸಂಸ್ಕೃತಿಯ ದೇಶವಾದ ಭಾರತದಲ್ಲಿ ಎಲ್ಲ ಜಾತಿ ಮತ್ತು ಧರ್ಮದ ಜನರನ್ನು ಸಮಾನವಾಗಿ ಕಾಣಬೇಕಾದ ಸರ್ಕಾರಗಳು ಒಂದು ಧರ್ಮದ ಪರವಾದ ನಿಲುವುಗಳನ್ನು ವ್ಯಕ್ತಪಡಿಸುತ್ತಿವೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮುಖಂಡರು 'ಹಿಂದುಗಳೆಲ್ಲ ಒಂದೇ' ಎಂದು ಮಾತನಾಡುತ್ತಾರೆ. ಆದರೆ ಇವರು ಅದೇ ಹಿಂದುಗಳಾದ ದುಡಿಯುವ ವರ್ಗದ ಜನರ ಸಮಸ್ಯೆಗಳ ಕುರಿತು ಏಕೆ ಮಾತನಾಡುವುದಿಲ್ಲ ಎಂದು ಅವರು ಸವಾಲು ಹಾಕಿದರು. ಅಂತಿಮವಾಗಿ ದೇಶದ ಎಲ್ಲ ದುಡಿಯುವ ವರ್ಗದ ಜನರನ್ನು ಸಂಘಟಿಸಿ ಅವರ ಜೀವನದ ಪ್ರಶ್ನೆಗಳ ಆಧಾರದ ಮೇಲೆ ಚಳುವಳಿ ಮಾಡುವ ಮೂಲಕವೇ ಒಂದು ಪರ್ಯಾಯ ರಾಜಕೀಯವನ್ನು ದೇಶದಾದ್ಯಂತ ನಡೆಸಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ನಿರಂತರವಾಗಿ ಶ್ರಮಿಸುತ್ತಿದೆ ಎಂದರು.

ಸಮ್ಮೇಳನದಲ್ಲಿ ಮುಖ್ಯ ಅತಿಥಿಗಳಾಗಿ ಸಿಪಿಐ(ಎಂ)ನ ಜಿಲ್ಲಾ ಸಂಘಟನಾ ಸಮಿತಿ ಸದಸ್ಯರಾದ ಧರ್ಮೇಶ್ ಪಾಲ್ಗೊಂಡು ಮಾತನಾಡಿ ಎಲ್ಲಾ ಅಸಂಘಟಿತ ಕಾರ್ಮಿಕರಿಗೂ ಕನಿಷ್ಟ ಕೂಲಿ 15 ಸಾವಿರ ರೂ.ಗಳನ್ನು ಕೊಡಲು ಸಾಧ್ಯವಾದರೆ ಖಂಡಿತವಾಗಿಯೂ ಜನರ ಜೀವನ ಸ್ಥಿತಿ ಉತ್ತಮವಾಗುತ್ತದೆ. ಇಲ್ಲದಿದ್ದರೆ ನಿಜವಾದ ಅರ್ಥದಲ್ಲಿ ದೇಶ ಅಭಿವೃದ್ಧಿಯಾಗಲು ಸಾಧ್ಯವಿಲ್ಲ. ಅಭಿವೃದ್ಧಿ ಮೇಲ್‌ಮಟ್ಟದಲ್ಲಿ ಮಾತ್ರ ಕಾಣಿಸುತ್ತಿದ್ದು ಬದುಕಿನ ಮೂಲಭೂತ ಅಗತ್ಯತೆಗಳಲ್ಲಿ ಯಾವುದೇ ಬದಲಾವಣೆಗಳಾಗುತ್ತಿಲ್ಲ. ಇದರಿಂದ ದೇಶವನ್ನು ಮುನ್ನಡೆಸಲು ಸಾಧ್ಯವಿಲ್ಲ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಸಿಪಿಐ(ಎಂ)ನ ಜಿಲ್ಲಾ ಕಾರ್ಯದರ್ಶಿ ವಿ.ಸುಕುಮಾರ್ ವಹಿಸಿದ್ದರು. ಅತಿಥಿಗಳಾಗಿ ರೈತ ಮುಖಂಡರಾದ ಎಚ್.ಆರ್.ನವೀನ್‌ಕುಮಾರ್, ರಾಘುಶೆಟ್ಟಿ ಭಾಗವಹಿಸಿದ್ದರು, ಪ್ರಾಸ್ತಾವಿಕವಾಗಿ ಪಕ್ಷದ ಸಕಲೇಶಪುರ ಮುಖಂಡರಾದ ಹರೀಶ್ ಮಾತನಾಡಿದರು, ಸ್ವಾಗತವನ್ನು ಸೌಮ್ಯ ವಂದನಾರ್ಪಣೆಯನ್ನು ಮಹೇಶ್ ನೆರವೇರಿಸಿದರು.

ನೂತನ ಸ್ಥಳೀಯ ಸಮಿತಿ ಆಯ್ಕೆ

ಸಿಪಿಐ(ಎಂ)ನ ಸಕಲೇಶಪುರ ಸ್ಥಳೀಯ ಸಮಿತಿಗೆ 9 ಜನರನ್ನೊಳಗೊಂಡ ನೂತನ ಸಮಿತಿಯನ್ನು ಆಯ್ಕೆ ಮಾಡಲಾಗಿದ್ದು ಇದರ ಕಾರ್ಯದರ್ಶಿಯಾಗಿ ಎ. ಹರೀಶ್ ಅಯ್ಕೆಯಾಗಿದ್ದಾರೆ. •



ಬಹುಪಕ್ಷೀಯ ಡಬ್ಲ್ಯುಟಿಒ ಆಹಾರ ಸಬ್ಸಿಡಿ ಮಿತಿ ವಿವಾದ: ಅಮೆರಿಕಾದ ಒತ್ತಡಕ್ಕೆ ಶರಣಾಗಿ 'ದ್ವಿಪಕ್ಷೀಯ' ಒಪ್ಪಂದ!

ವಿಶ್ವ ವ್ಯಾಪಾರ ಸಂಸ್ಥೆ(ಡಬ್ಲ್ಯುಟಿಒ)ಯ 'ವ್ಯಾಪಾರ ಅನುಕೂಲತೆಯ ಒಪ್ಪಂದ'(ಟಿಎಫ್ಎ)ಕ್ಕೆ ಸಹಿ ಹಾಕಬೇಕಾದರೆ ಆ ಸಂಸ್ಥೆಯ 'ಕೃಷಿ ಕುರಿತ (ಎಒಎ)ಒಪ್ಪಂದ ಅಭಿವೃದ್ಧಿಶೀಲ ದೇಶಗಳು ಎತ್ತಿದ ಪ್ರಶ್ನೆಗೆ ಶಾಶ್ವತ ಪರಿಹಾರ ಒದಗಿಸಬೇಕು ಎಂದು ಈ ಹಿಂದೆ ಪಟ್ಟು ಹಿಡಿದಿತ್ತು. ಇದು ದೇಶದ ಸಾರ್ವಭೌಮತೆಯ ದೃಷ್ಟಿಯಿಂದ ಸರಿಯಾದ ನಿಲುವೇ ಆಗಿತ್ತು. ಅಂತರ್‍ರಾಷ್ಟ್ರೀಯ ವ್ಯವಹಾರಗಳಲ್ಲಿ ದೇಶದ ಹಿತಾಸಕ್ತಿಗಳನ್ನು ಎತ್ತಿ ಹಿಡಿಯುವ ತನ್ನ ಸಾಮರ್ಥ್ಯಕ್ಕೆ ಸಾಕ್ಷಿ ಎಂದು ಮೋದಿ ಸರಕಾರದ ವಕ್ತಾರರು ಹೇಳುತ್ತಲೇ ಇದ್ದರು.

ಆದರೆ ಇದು ಅಮೆರಿಕಾದಂತಹ ಸಾಮ್ರಾಜ್ಯಶಾಹಿ ದೇಶಗಳಿಗೆ ಮಾತ್ರವಲ್ಲ, ಅವರ ಕಾರ್ಪೊರೇಟ್ ಬೆಂಬಲಿಗರಿಗೆ ಪಥ್ಯವಾಗಿರಲಿಲ್ಲ. ಬಹುಶಃ ಅದರಿಂದಾಗಿಯೇ ಕೆಲವು ದಿನಗಳ ಹಿಂದೆ ಬಿಜೆಪಿ ವಕ್ತಾರರು ಈ 'ಟಿಎಫ್ಎ'ಗೆ ತಮ್ಮ 'ಸೈದ್ಧಾಂತಿಕ' ವಿರೋಧವೇನೂ ಇಲ್ಲ ಎಂದು ಅವರಿಗೆ ಸಮಜಾಯಿಷಿ ನೀಡಿದ್ದರು. ಈಗ ಈ ಬಹುಪಕ್ಷೀಯ ಪ್ರಶ್ನೆಯ ಬಗ್ಗೆ ಅಮೆರಿಕಾದೊಂದಿಗೆ 'ದ್ವಿಪಕ್ಷೀಯ' ಒಪ್ಪಂದಕ್ಕೆ ಬರಲಾಗಿದೆ, ಈ ಹಿನ್ನೆಲೆಯಲ್ಲಿ ಟಿಎಫ್ಎ ಗೆ ಸಹಿ ಹಾಕಲು ಮೋದಿ ಸರಕಾರ ಸಿದ್ಧವಾಗಿದೆ ಎಂದು ತಿಳಿಸಲಾಗಿದೆ.

ವಾಸ್ತವವಾಗಿ ಈಗ ಮೋದಿ ಸರಕಾರ ಅಮೆರಿಕಾದ ಮತ್ತು ಇತರ ಪಾಶ್ಚಿಮಾತ್ಯ ದೇಶಗಳ ಒತ್ತಡಕ್ಕೆ ಶರಣಾಗಿದೆ, ಅಮೆರಿಕ, ಯುರೋಪಿಯನ್ ಒಕ್ಕೂಟವನ್ನು, ಮತ್ತು ಕೃಷಿ ವ್ಯಾಪಾರಸ್ಥರು ಹಾಗೂ ಭಾರತದ ಕಾರ್ಪೊರೇಟ್ ವಲಯವನ್ನು ಸುಪ್ರೀತಗೊಳಿಸಲು ಭಾರತದ ಜನಗಳ ಮತ್ತು ಹಸಿದಿರುವ ಕೋಟ್ಯಂತರ ಜನಗಳ ಹಿತಗಳನ್ನು ಸದ್ದಿಲ್ಲದೆ ಬಲಿಗೊಟ್ಟಿದೆ ಎಂದು ಅಖಿಲ ಭಾರತ ಕಿಸಾನ್ ಸಭಾ ಇದನ್ನು ಖಂಡಿಸಿದೆ.

ಈ ಹಿಂದೆ ಈ ಅಂಕಣದಲ್ಲಿ ಗಮನಿಸಿರುವಂತೆ ಡಬ್ಲ್ಯುಟಿಒ ದ ಕೃಷಿ ಕುರಿತ ಒಪ್ಪಂದ ಅಭಿವೃದ್ಧಿಶೀಲ ದೇಶಗಳ ಸರಕಾರಗಳು ತಮ್ಮ ಜನಗಳಿಗೆ ಆಹಾರ ಭದ್ರತೆ ಒದಗಿಸುವಲ್ಲಿ ಅಡ್ಡಿಯಾಗಿದೆ. ಅದು ಕೃಷಿಗೆ ಸಬ್ಸಿಡಿ ಎನ್ನುವುದನ್ನು ಮುಂದುವರೆದ ದೇಶಗಳ ಹಿತದೃಷ್ಟಿಯಿಂದ ನಿರೂಪಿಸಿ, 1986–88ರ ಬೆಲೆಗಳಿಗೆ ಲಗತ್ತಿಸಿ, ಮಿತಿ ಹಾಕಿದೆ, ಅದನ್ನು ಮೀರಿದರೆ ಶಿಕ್ಷಾಕ್ರಮಗಳನ್ನೂ ವಿಧಿಸಿದೆ. ಈ ಬಗ್ಗೆ ವಿವಾದ ಪರಿಹಾರಕ್ಕೆ 'ಶಾಂತಿ ಕಲಮು' ಎಂಬುದನ್ನು ಸೇರಿಸಿದ್ದರೂ, ಇದು ತಾತ್ಕಾಲಿಕ ಪರಿಹಾರ, ಅಂತಿಮವಾಗಿ ಮುಂದುವರೆದ ಬಂಡವಾಳಶಾಹಿ ದೇಶಗಳ ಅಭಿಪ್ರಾಯದ್ದೇ ಕೈಮೇಲಾಗುತ್ತದೆ. ಈ ಕಾರಣಕ್ಕಾಗಿ ಮುವತ್ತಕ್ಕೂ ಹೆಚ್ಚು ಅಭಿವೃದ್ಧಿಶೀಲ ದೇಶಗಳು ಇದನ್ನು ವಿರೋಧಿಸುತ್ತಿವೆ. ಭಾರತ ಅವುಗಳಲ್ಲಿ ಒಂದು ಪ್ರಮುಖ ದೇಶವಾಗಿದೆ.

ಈಗ ಮೋದಿ ಸರಕಾರ ಅಮೆರಿಕಾದೊಂದಿಗೆ ಮಾಡಿಕೊಂಡ ಒಪ್ಪಂದದಲ್ಲಿ ಈ 'ಎಒಎ' ಅಂದರೆ ಡಬ್ಲ್ಯುಟಿಒ ದ ಕೃಷಿ ಕುರಿತ ಒಪ್ಪಂದವನ್ನು ಸುಧಾರಿಸುವ ಕ್ರಮವೇನೂ ಇಲ್ಲ. 'ಶಾಂತಿ ಕಲಮ'ನ್ನು ಅನಿರ್ದಿಷ್ಟವಾಗಿ ಮುಂದುವರೆಸುವ ಮಾತು ಮಾತ್ರ ಇದೆ. ಅದ–ಕ್ಕೆ ಪ್ರತಿಯಾಗಿ ಟಿಎಫ್ಎ ಗೆ ದಾರಿ ಮಾಡಿಕೊಟ್ಟು ಅಮೆರಿಕಾ ಮತ್ತು ಮುಂದುವರೆದ ಬಂಡವಾಳಶಾಹಿ ದೇಶಗಳಿಗೆ ಬಹುದೊಡ್ಡ ರಿಯಾಯ್ತಿ ನೀಡಲಾಗಿದೆ. ಏಕೆಂದರೆ ಈ ಟಿಎಫ್ಎ ಒಟ್ಟಾರೆಯಾಗಿ ನಿವ್ವಳ ರಫ್ತುಗಳ, ಅಂದರೆ ಆಮದುಗಳಿಗಿಂತ ರಫ್ತುಗಳೇ ಹೆಚ್ಚಿರುವ ದೇಶಗಳಿಗೆ ಪ್ರಯೋಜನಕಾರಿ, ಭಾರತದಂತಹ ರಫ್ತುಗಳಿಗಿಂತ ಆಮದುಗಳೇ ಹೆಚ್ಚಿರುವ ದೇಶಗಳಿಗಲ್ಲ ಎಂದು ವಿಶ್ಲೇಷಕರು ಅಭಿಪ್ರಾಯ ಪಡುತ್ತಿದ್ದಾರೆ.

ಅಲ್ಲದೆ ಮೋದಿ ಸರಕಾರ ಅಮೆರಿಕಾದೊಂದಿಗೆ ಮಾಡಿಕೊಂಡಿರುವ ಈ ಒಪ್ಪಂದ ಹಲವು ಪ್ರಶ್ನೆಗಳನ್ನು ಎತ್ತಿದೆ.

ಮೊದಲನೆಯದಾಗಿ, ಈ ಒಪ್ಪಂದ ಪಾರದರ್ಶಕವಾಗಿ ನಡೆದಿಲ್ಲ. ಭಾರತದ ಸಂಸತ್ತಿನಲ್ಲಿ ಈಬಗ್ಗೆ ಚರ್ಚೆ ನಡೆಸದೆ, ಅಥವ ಈ ವಿಷಯ ಬಹಳವಾಗಿ ತಟ್ಟುವ ರಾಜ್ಯ ಸರಕಾರಗಳೊಂದಿಗೆ ಸಮಾಲೋಚಿಸದೆ ನಡೆದಿದೆ.

ಎರಡನೆಯದಾಗಿ, ಎಒಎದಲ್ಲಿನ ಅಮಾನತೆಯನ್ನು ಅಭಿವೃದ್ಧಿಶೀಲ ದೇಶಗಳು ಒಟ್ಟಾಗಿ ಪ್ರಶ್ನಿಸುತ್ತಿವೆ. ಭಾರತ ಹೀಗೆ ಪ್ರತ್ಯೇಕವಾಗಿ ಅಮೆರಿಕಾದೊಂದಿಗೆ ಒಪ್ಪಂದ ಮಾಡಿಕೊಂಡು ಈ ಸೌಹಾರ್ದತೆಗೆ, ಅಭಿವೃದ್ಧಿಶೀಲ ದೇಶಗಳ ಆಶಯಗಳ ದನಿ ಎಂಬ ಹೆಸರಿಗೆ ಧಕ್ಕೆ ತಂದಿದೆ.

ಮೂರನೆಯದಾಗಿ, 'ಶಾಂತಿ ಕಲಮು' ಕೂಡ ಶರತ್ತುಗಳನ್ನು ವಿಧಿಸುತ್ತದೆ. ಇದರ ಪ್ರಕಾರ ಈ ಕಲಮನ್ನು ಬಳಸುವ ದೇಶ ತನ್ನ ಆಹಾರ ಭದ್ರತೆಯ ಪ್ರಕ್ರಿಯೆಯ ಕುರಿತು, ತನ್ನ ರೈತರಿಗೆ ನೀಡುವ ಕನಿಷ್ಟ ಬೆಂಬಲ ಬೆಲೆಗಳನ್ನು ಕುರಿತು ಮಾಹಿತಿಗಳನ್ನೆಲ್ಲ ನೀಡುತ್ತಿರಬೇಕು. ಒಂದು ದೇಶ ತನ್ನ ಬಡವರ ಹಸಿವು ಹಿಂಗಿಸುವ ಸಾರ್ವಭೌಮ ಹಕ್ಕನ್ನು ಪ್ರಶ್ನಿಸುವ ಹಕ್ಕು ಡಬ್ಲ್ಯುಟಿಒ ಗೆ ಕೊಡಬೇಕೆ ಎಂಬುದು.

ನಾಲ್ಕನೆಯದಾಗಿ, ಅಭಿವೃದ್ಧಿಶೀಲ ದೇಶಗಳು ಕೇಳುತ್ತಿರುವ ಶಾಶ್ವತ ಪರಿಹಾರ ಎಂದರೆ ಸಬ್ಸಿಡಿ ಲೆಕ್ಕ ಹಾಕುವಲ್ಲಿನ ಅಸಮಂಜಸತೆಯನ್ನು ಹೋಗಲಾಡಿಸುವುದು, ಆದರೆ ಈ ಕಲಮಿನ ಅವಧಿಯನ್ನು ಅಮೆರಿಕಾದೊಂದಿಗೆ ಮಾಡಿಕೊಂಡಿರುವ ಒಪ್ಪಂದದ ಪ್ರಕಾರ ಈ ಅಸಮಂಜಸತೆಯನ್ನು ಹೋಗಲಾಡಿಸುವ ಕ್ರಿಯೆಯೂ ಅನಿರ್ದಿಷ್ಟವಾಗಿ ಮುಂದೂಡಲ್ಪಡುವುದೇ?

ಈ 'ದ್ವಿಪಕ್ಷೀಯ' ಒಪ್ಪಂದ ಡಬ್ಲ್ಯುಟಿಒದ ಬಹುಪಕ್ಷೀಯ ಸ್ವರೂಪವನ್ನು ಧಿಕ್ಕರಿಸಿ ಈ ಸಂಸ್ಥೆಯ ಮೂಲಕ ಸವಾರಿ ಮಾಡುತ್ತಿರುವುದು ಅಮೆರಿಕಾ ಮತ್ತು ಇತರ ಸಾಮ್ರಾಜ್ಯಶಾಹಿ ದೇಶಗಳೇ ಎಂಬುದನ್ನು ದೃಢಪಡಿಸಿದೆ ಎನ್ನುತ್ತಾರೆ ಪರಿಣಿತರು.

ಈ ರೀತಿ ದೇಶದ ರೈತಾಪಿ ಜನಗಳಿಗೆ ಮತ್ತು ಬಡಜನಗಳಿಗೆ ವಿಶ್ವಾಸಘಾತ ಮಾಡಿರುವ ಈ ಒಪ್ಪಂದವನ್ನು ತಿರಸ್ಕರಿಸಬೇಕು, ಇದರ ವಿರುದ್ಧ ಹೋರಾಟ ನಡೆಸಬೇಕು ಎಂದು ಅಖಿಲ ಭಾರತ ಕಿಸಾನ್ ಸಭಾ ಕರೆ ನೀಡಿದೆ.

ಟಾಟಾ ಪವರ್‌ಗೆ ಅಚ್ಛೇ ದಿನ್ ಉಡುಗೊರೆ: ಖಾಸಗಿ ಹಿತಕ್ಕಾಗಿ ಸಾರ್ವಜನಿಕ ಹಣ

ದಾಮೋದರ ವ್ಯಾಲಿ ಕಾರ್ಪೊರೇಶನ್(ಡಿವಿಸಿ) ಎಂಬುದು ಒಂದು ಕೇಂದ್ರ ಸರಕಾರದ ಒಡೆತನದ ಒಂದು ಉದ್ಯಮ. ಪಶ್ಚಿಮ ಬಂಗಾಲದ ಪುರುಲಿಯಾ ಜಿಲ್ಲೆಯ ರಘುನಾಥಪುರದಲ್ಲಿ ಇದು ಒಂದು ತಾಪ ವಿದ್ಯುತ್ ಉತ್ಪಾದನ ಸ್ಥಾವರವನ್ನು ರಚಿಸಿದೆ. ಇದರ ಮೊದಲ ಹಂತ ಈಗಾಗಲೇ 600 ಮೆಗಾವಾಟ್ ವಿದ್ಯುತ್ ಉತ್ಪಾದಿಸುತ್ತಿದೆ. ಎರಡನೇ ಹಂತ ನಿರ್ಮಾಣದಲ್ಲಿದೆ. ಇದು 1200 ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯ ಹೊಂದಿರುತ್ತದೆ.

ಡಿವಿಸಿಯ ಈ ಸ್ಥಾವರಕ್ಕೆ ಈಗಾಗಲೇ ಸರಕಾರ 900 ಎಕ್ರೆ ಜಮೀನನ್ನು ಸ್ವಾಧೀನ ಪಡಿಸಿಕೊಂಡಿದೆ. ಅಲ್ಲದೆ ಈಗಾಗಲೇ ಮೊದಲ ಹಂತಕ್ಕೆ ರೂ. 6000ಕೋಟಿ ಖರ್ಚು ಮಾಡಲಾಗಿದೆ. ಈಗ ಈ ರಘುನಾಥಪುರ ತಾಪ ವಿದ್ಯುತ್ ಸ್ಥಾವರವನ್ನು ಖಾಸಗೀ ವಲಯದ ಟಾಟಾ ಪವರ್ ಕಂಪನಿಗೆ ವಹಸಿಕೊಡಲು ಡಿವಿಸಿ ಆಡಳಿತ ಮಂಡಳಿ ನಿರ್ಧರಿಸಿದೆ ಎಂದು ವರದಿಯಾಗಿದೆ. ಇದು ಕೇಂದ್ರ ಸರಕಾರದ ನಿರ್ದೇಶನದ ಪ್ರಕಾರ ಕೈಗೊಂಡ ನಿರ್ಧಾರವಂತೆ.

ಇದು ಖಾಸಗಿ ಹಿತಕ್ಕಾಗಿ ಸಾರ್ವಜನಿಕ ಹಣವನ್ನು ಪೋಲು. ಹೊಸದಾಗಿ ನಿರ್ಮಿಸಿದ ಸಾರ್ವಜನಿಕ ವಲಯದ ವಿದ್ಯುತ್ ಸ್ಥಾವರವನ್ನು ಖಾಸಗಿ ವಲಯಕ್ಕೆ ಉಡುಗೊರೆ ಕ್ರಮವಲ್ಲದೆ ಬೇರೇನೂ ಅಲ್ಲ ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ತೀವ್ರವಾಗಿ ಖಂಡಿಸಿದ್ದಾರೆ. ಇಲ್ಲಿ 900 ಎಕ್ರೆ ಜಮೀನು ಸ್ವಾಧೀನ ಪಡಿಸಿಕೊಂಡದ್ದು ಒಂದು ಸಾರ್ವಜನಿಕ ಕೆಲಸಕ್ಕಾಗಿ. ಟಾಟಾಗಳಿಗೆ ಉಡುಗೊರೆ ಕೊಡಲಿಕ್ಕಲ್ಲ. ಈ ಸ್ಥಾವರವನ್ನು ನಡೆಸುವ ಸಾಮರ್ಥ್ಯ ಮತ್ತು ಸಾಧನಗಳು ಸಾರ್ವಜನಿಕ ವಲಯದ ಡಿವಿಸಿ ಬಳಿಯಿರುವಾಗ ಇದನ್ನು ಖಾಸಗಿಯವರಿಗೆ ವಹಿಸುವ ಅಗತ್ಯವಾದರೂ ಏನು ಎಂದು ಅವರು ಪ್ರಶ್ನಿಸಿದ್ದಾರೆ. ಸಾರ್ವಜನಿಕ ಹಣದಿಂದ ಖಾಸಗಿ ವಲಯದ ಲಾಭ ಹೆಚ್ಚಿಸುವುದು ಈ ಸರಕಾರದ ಧೋರಣೆಯಾಗಿರುವಂತೆ ಕಾಣುತ್ತದೆ, ಇದನ್ನು ತಕ್ಷಣವೇ ಕೈಬಿಡಬೇಕು ಎಂದು ಸಿಐಟಿಯು ಆಗ್ರಹಿಸಿದೆ.

ಹರ್ಯಾಣ: ಸರಕಾರ ರಚಿಸುತ್ತಿದ್ದಂತೆಯೇ ಕೋಮುಗಲಭೆ, ವರದಿ ಕೇಳಿದ ಕೇಂದ್ರ ಗ್ರಹಮಂತ್ರಿಗಳು

ಹಿಂದೆ ಬಿಜೆಪಿ ಅಧ್ಯಕ್ಷರಾಗಿದ್ದ ಈಗಿನ ಕೇಂದ್ರ ಗ್ರಹ ಮಂತ್ರಿಗಳು ತನ್ನ ಪಕ್ಷದ ಸರಕಾರ ಹರ್ಯಾಣದಲ್ಲಿ ಮೊತ್ತ ಮೊದಲ ಬಾರಿಗೆ ಸರಕಾರ ರಚಿಸುತ್ತಿದ್ದಂತೆಯೇ ಕೋಮು ಗಲಭೆಯ ಕುರಿತು ವರದಿ ಕೇಳುವ 'ಒಳ್ಳೆಯ ದಿನಗಳು' ಬಂದಿವೆ.

ರಾಜ್ಯದ ಪಲ್ವಾಲ್ ಜಿಲ್ಲೆಯ ಹಥಿನ್ ಪಟ್ಟಣದಲ್ಲಿ ಕಳೆದ ವಾರ ಅನಿರ್ದಿಷ್ಟ ಕಾಲದ ಕರ್ಫ್ಯೂ ಹಾಕಲಾಗಿದೆ. ಅದಕ್ಕೆ ಮೊದಲು ಜಿಲ್ಲಾಕಮಿಶನರ್ ಅವರ ಅಧಿಕೃತ ವಾಹನಕ್ಕೆ, ಒಂದು ಮೋಟಾರ್ ಸೈಕಲ್ ಶೋರೂಂಗೆ ಮತ್ತು ಒಂದು ಮೆಡಿಕಲ್ ಸ್ಟೋರ್‌ಗೆ ಬೆಂಕಿ ಹಚ್ಚಲಾಗಿತ್ತು.



ಅದನ್ನು 'ಪರಂಪರೆ ಪ್ರವಾಸೋದ್ಯಮ' ಮಾಡಿ. ಅದೇನೂ ಕುರುಕ್ಷೇತ್ರದಿಂದ ಬಹಳವೇನೂ ದೂರದಲ್ಲಿಲ್ಲ.

ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಇ.ಪಿ.ಉನ್ನಿ

ನವಂಬರ್ 11ರ ರಾತ್ರಿ ಒಂದು ಮಸೀದಿಯಲ್ಲಿ ಮುಸ್ಲಿಮರು ನಮಾಜು ಮಾಡುತ್ತಿರುವಾಗ ಅದನ್ನು ಆಕ್ಷೇಪಿಸಿ ಈ ಗಲಭೆ ಆರಂಭವಾಯಿತು ಎನ್ನಲಾಗಿದೆ. ಅಲ್ಲಿನ ರಾಮಸೇನಾ ಸಂಘಟನ್ ಪ್ರಕಾರ ಆ ಮಸೀದಿ 'ವಿವಾದಿತ' ಸ್ಥಳ. ಈ ಸಂಘಟನೆಯ ಮಂದಿ ಮುಸ್ಲಿಮರಿಗೆ ಸೇರಿದ ಕೆಲವು ಪೆಟ್ಟಿ ಅಂಗಡಿಗಳಿಗೆ, ಗೊಬ್ಬರದ ಮತ್ತು ಮರಮಟ್ಟುಗಳ ರಾಶಿಗೆ ಬೆಂಕಿ ಹಾಕಿದರು ಎಂಬುದು ಕೇಂದ್ರ ಬೇಹುಗಾರಿಕೆ ಸಂಸ್ಥೆ ನೀಡಿರುವ ಪ್ರಾಥಮಿಕ ವರದಿ ಎಂದು ಇಕನಾಮಿಕ್ ಟೈಮ್ಸ್ ಬ್ಯುರೊ(ನವಂಬರ್12) ಹೇಳಿದೆ. ಇದಕ್ಕೆ ಪ್ರತಿಯಾಗಿ ಜಿಲ್ಲಾ ಕಮಿಶನರ್ ಅವರ ವಾಹನಕ್ಕೆ ಬೆಂಕಿ, ಮತ್ತಿತರ ಘಟನೆಗಳು ನಡೆದವಂತೆ. ಕೇಂದ್ರ ಸರಕಾರ ಈ ಘಟನೆಯ ಬಗ್ಗೆ ಬಹಳ ಆತಂಕ ವ್ಯಕ್ತಪಡಿಸಿದ್ದು ಹೊಸದಾಗಿ ರಚನೆಗೊಂಡಿರುವ ಬಿಜೆಪಿ ರಾಜ್ಯ ಸರಕಾರದಿಂದ ವಿವರವಾದ ವರದಿ ಕೇಳಿದೆಯೆಂದು ವರದಿಯಾಗಿದೆ.

ಅಡ್ವಾಣಿ ನೇತೃತ್ವದ ಅಯೋಧ್ಯಾ ಚಳುವಳಿಯ ನಂತರ ದೇಶದಲ್ಲಿ ಸಾವಿರಾರು 'ವಿವಾದಿತ' ಸ್ಥಳಗಳು ಹುಟ್ಟಿಕೊಂಡಿವೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ನಂತರ ಅದೇ ರಾಜ್ಯದ ಹಿಸಾರ್ ಬಳಿ ಒಬ್ಬ ಬಾಬಾ, ಸ್ವಘೋಷಿತ ದೇವಮಾನವ ರಾಮಪಾಲ್‌ನನ್ನು ಬಂಧಿಸಲಾಗದೆ ಅದೇ ಸರಕಾರದ ಪೋಲೀಸರು ತನ್ನ ಅಮರ್ಥತೆಯನ್ನು ಪ್ರಕಟಿಸಬಾರದೆಂದು ಪತ್ರಕರ್ತರ ಮೇಲೆಯೇ ಪ್ರಹಾರ ಮಾಡಿ ಕುರುಕ್ಷೇತ್ರ ಸೃಷ್ಟಿಸಿ ಫಜೀತಿಗೊಳಗಾಗಿದೆ. ಪೊಲೀಸರ ಸಶಸ್ತ್ರ ಕಾರ್ಯಾಚರಣೆಯ ನಂತರ ಆತನನ್ನು ಬಂಧಿಸಲಾಗಿದೆ.

ಚಾಲಾಕಿತನದ ದಿನಗಳಿವು!

ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಅಬಕಾರಿ ಸುಂಕವನ್ನು ಲೀಟರಿಗೆ 1.50ರೂ.ನಂತೆ ಹೆಚ್ಚಿಸಲಾಗಿದೆ. ಈಗಾಗಲೇ ಇವೆರಡೂ ಭಾರೀ ತೆರಿಗೆಗೊಳಗಾಗುವ ಸರಕುಗಳು. ಈಗ ಅದನ್ನು ಮತ್ತಷ್ಟು ಹೆಚ್ಚಿಸುವ ಅಗತ್ಯವೇನೂ ಇರಲಿಲ್ಲ. ಇದರಿಂದ ಹೆಚ್ಚುವರಿ 6000 ಕೋಟಿ ರೂ.ಗಳು ಸರಕಾರದ ಬೊಕ್ಕಸಕ್ಕೆ ಬರುತ್ತದಂತೆ. ಆದರೂ ಇದರಿಂದ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳಲ್ಲಿ ಏರಿಕೆಯೇನೂ ಆಗುವುದಿಲ್ಲ ಎಂದು ಸರಕಾರ ಹೇಳಿದೆ.

ಇಲ್ಲೇ ಅಡಗಿರುವುದು ಚಾಲಾಕಿತನ. ಸದ್ಯಕ್ಕೆ ಅಂತರ್‍ರಾಷ್ಟ್ರೀಯ ಮಾರುಕಟೆಯಲ್ಲಿ ಕಚ್ಚಾ ತೈಲ ದರ ಇಳಿಯುತ್ತಿದೆ. ಇದರಿಂದಾಗಿ ಈಗ ದೇಶದಲ್ಲೂ ಪೆಟ್ರೋಲ್, ಡೀಸೆಲ್ ಬೆಲೆಗಳು ಬಹಳಷ್ಟು ಇಳಿಯಬೇಕು. ಆದರೆ ಇದೇ ಸದವಕಾಶ ಎಂದು ಸರಕಾರ ತೆ–ರಿಗೆ ಏರಿಸಿ ಜನರಿಗೆ ಅದರ ಭಾರ ತಿಳಿಯದಂತೆ ಮಾಡಲು ಮುಂದಾಗಿದೆ. ಡೀಸೆಲ್ ಬೆಲೆಗಳ ಮೇಲೆ ನಿಯಂತ್ರಣ ತೆಗೆಯಲು, ಅಡುಗೆ ಅನಿಲದ ಮೇಲೆ ಸಬ್ಸಿಡಿಯ ಮೇಲೆ ಮಿತಿ ಹಾಕಲು ಇದನ್ನು ಬಳಸಿಕೊಂಡಿರುವ ಸರಕಾರ ಈಗ ಅಬಕಾರಿ ಸುಂಕವನ್ನು ಹೆಚ್ಚಿಸಲು ಕೂಡ ಬಳಸಿಕೊಂಡಿದೆ.

ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಮೌಲ್ಯಾಧಾರಿತ ತೆರಿಗೆ ಪದ್ಧತಿ ಒಂದು ವಿಷಮ ಪದ್ಧತಿ, ಅದರ ಬದಲು ಒಂದು ತರ್ಕಬದ್ಧ ತೆರಿಗೆ ವ್ಯವಸ್ಥೆಯನ್ನು ರೂಪಿಸಬೇಕಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಮೋದಿ ಸರಕಾರದ ಈ ಕ್ರಮವನ್ನು ಬಲವಾಗಿ ವಿರೋಧಿಸಿದೆ.



ಪಶ್ಚಿಮ ಬಂಗಾಳ: ಕೆಲವು ವಿದ್ಯಮಾನಗಳು

ವಚನ ಭ್ರಷ್ಟ ಸರ್ಕಾರದ ವರಸೆ - ಸೆಣಬು ರೈತರು ಕಂಗಾಲು

ಕೆ.ಎಂ. ನಾಗರಾಜ್

ಸೆಣಬು ಅಥವಾ ಗೋಣಿನಾರು ಉತ್ಪಾದನೆಯಲ್ಲಿ ಪ್ರಪಂಚದಲ್ಲೇ ಪ್ರಥಮ ಸ್ಥಾನ ಪಡೆದು ಹೆಮ್ಮೆ ಪಡಬೇಕಾದ ಬಂಗಾಳದ ರೈತರ ಪಾಡು ಈಗ ನಾಯಿ ಪಾಡು. ಈ ವರ್ಷ 144 ಲಕ್ಷ ಕ್ವಿಂಟಾಲ್ ಗೋಣಿನಾರು ಉತ್ಪಾದನೆಯಾಗಿದೆ. ಜ್ಯೂಟ್ ಕಾರ್ಪೊರೇಷನ್ ಆಫ್ ಇಂಡಿಯಾಗೆ ಉತ್ಪಾದನೆಯ ಕಾಲು ಭಾಗದಷ್ಟಾದರೂ ಕೊಳ್ಳುವಂತೆ ಬಂಗಾಳ ಸರ್ಕಾರವು ಆದೇಶ ಮಾಡಿಲ್ಲವಾದುದರಿಂದ ರೈತರು ಬಾಯಿ ಬಾಯಿ ಬಡಿದುಕೊಳ್ಳುವಂತಾಗಿದೆ. ಬೋನಸ್‌ದರದಲ್ಲಿ ಗೋಣಿನಾರು ಕೊಳ್ಳುವುದಾಗಿ ರೈತರಿಗೆ ವಚನ ಕೊಟ್ಟಿದ್ದ ಸರ್ಕಾರವು ಈವರೆಗೆ ಒಟ್ಟು ಉತ್ಪಾದನೆಯ ಕೇವಲ 0.17% ಕೊಂಡಿದೆ.

ರಿಯಾಯ್ತಿ ದರದಲ್ಲಿ ಒಳ್ಳೆಯ ಗುಣಮಟ್ಟದ ಆಲೂಗಡ್ಡೆ ಬೀಜ ಒದಗಿಸುತ್ತೇವೆಂದು ಭರವಸೆ ಕೊಟ್ಟಿದ್ದ ಸರ್ಕಾರವು ತನಗೆ ಏನೂ ಗೊತ್ತಿಲ್ಲ ಎಂಬಂತೆ ಮುಖ ತಿರುವಿಸಿಕೊಂಡಿರುವುದರಿಂದ ರೈತರು ಪಕ್ಕದ ರಾಜ್ಯಗಳಿಂದ ಚೀಲಕ್ಕೆ 3,500ರೂ ಕೊಟ್ಟು ಕೊಂಡುಕೊಳ್ಳುತ್ತಿದ್ದಾರೆ. ಅಲ್ಲದೆ, ಬೀಜ ಮಾರಾಟದಲ್ಲಿ ಕಾಳದಂಧೆ ಬಿರುಸಾಗಿ ನಡೆಯುತ್ತಿದೆ.

ಬೀದಿಗಿಳಿದ ಬೀದಿಬದಿ ಮಾರಾಟಗಾರರು

ಕೇಂದ್ರ ಸಕಾರ ನಿಗದಿಪಡಿಸಿರುವಂತೆ ತಮಗೆ ಸರ್ಕಾರ ಗುರುತಿನ ಚೀಟಿ ಮತ್ತು ಪರವಾನಗಿ ಕೊಡಬೇಕೆಂದು ಬೀದಿಬದಿ ಮಾರಾಟಗಾರರು ರಾಜ್ಯವ್ಯಾಪಿ ಚಳುವಳಿ ನಡೆಸುತ್ತಿದ್ದಾರೆ. ಪೋಲೀಸರು ತಮ್ಮಿಂದ ಹಣ ಕೀಳುತ್ತಿರುವುದನ್ನು ತಡೆಗಟ್ಟುವಂತೆ ಹಾಗೂ ತಮ್ಮ ತಾತ್ಕಾಲಿಕ ಮಳಿಗೆಗಳನ್ನು ಧ್ವಂಸಮಾಡದಂತೆ ಆದೇಶ ಮಾಡುವಂತೆ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಕೋಮುವಾದದ ವಿರುದ್ಧ ತೃಣಮೂಲದ ಹೋರಾಟಕ್ಕೆ ವಿಶ್ವಾಸಾರ್ಹತೆ ಇಲ್ಲ – ಯೆಚೂರಿ

ತೃಣಮೂಲ ಪಕ್ಷ ಜನ–ವಿರೋಧಿಯಷ್ಟೇ ಅಲ್ಲ; ಅದು ಕೋಮುವಾದದ ಬೆಂಬಲವನ್ನೂ ಬಳಕೆ ಮಾಡಿಕೊಳ್ಳುತ್ತಿದೆ. ರತ್ನಗಂಬಳಿ ಹಾಸಿ ಬಿಜೆಪಿಯನ್ನು ಬಂಗಾಳಕ್ಕೆ ಬರಮಾಡಿಕೊಂಡಿದ್ದ ಪಕ್ಷ ಅದು. ಈಗ ಬಂಗಾಳದ ಮುಖ್ಯಮಂತ್ರಿಯಾಗಿರುವ ಮಮತಾ ಬ್ಯಾನರ್ಜಿ ಬಿಜೆಪಿಯ ಕೇಂದ್ರ ಸರ್ಕಾರದಲ್ಲಿ ಎರಡು ಬಾರಿ ಮಂತ್ರಿಯಾಗಿದ್ದರು. ಆ ಪಕ್ಷವು ಅಲ್ಪಸಂಖ್ಯಾತ ಮೂಲಭೂತವಾದಕ್ಕೆ ಸದ್ದಿಲ್ಲದೆ ಕೊಡುತ್ತಿರುವ ಬೆಂಬಲ ಬಹುಸಂಖ್ಯಾತ ಕೋಮುವಾದವನ್ನು ಬಲಗೊಳಿಸಿದೆ. ಅಂತಹ ಪಕ್ಷ ಕೋಮುವಾದದ ವಿರುದ್ಧ ಹೋರಾಡುತ್ತದೆ ಎನ್ನುವ ಕಲ್ಪನೆಯೂ ಅಪಾಯಕಾರಿ ಎಂಬುದಾಗಿ ಸೀತಾರಾಂ ಯೆಚೂರಿಯವರು ಹೇಳಿದ್ದಾರೆ.

ಸಿಪಿಐ ನಾಯಕರಾಗಿದ್ದ ಭೂಪೇಶ್ ಗುಪ್ತಾರವರ ಜನ್ಮಶತಾಬ್ದಿಯ ಅಂಗವಾಗಿ "ಭಾರತದಲ್ಲಿ ಪ್ರಜಾಪ್ರಭುತ್ವ ಎತ್ತ ಸಾಗುತ್ತಿದೆ" ಎಂಬ ವಿಷಯವಾಗಿ ನವೆಂಬರ್ 18ರಂದು ಕೊಲ್ಕತಾದಲ್ಲಿ ಕಾಂ. ಯೆಚೂರಿರಯವರು ಮಾತನಾಡುತ್ತಾ, ಮೂಲಭೂತವಾದ ಮತ್ತು ಕೋಮುವಾದದ ವಿರುದ್ಧ ನಡೆಸುವ ಹೋರಾಟದಲ್ಲಿ ತೃಣಮೂಲ ಪಕ್ಷದ ಜೊತೆ ಕೈಜೋಡಿಸುವ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟಪಡಿಸಿದರು. ಜನ–ವಿರೋಧಿ ನೀತಿ ಮತ್ತು ಕೋಮು ಮನೋಭಾವಗಳಿಗೆ ರಕ್ತ ಸಂಬಂಧ ಇದೆ. ಅದನ್ನು ಮೈಗೂಡಿಸಿಕೊಂಡಿರುವ ಬಿಜೆಪಿ ಕೇಂದ್ರ ಸರ್ಕಾರದ ವಿರುದ್ಧ ಸದ್ಯದಲ್ಲೇ ಹೋರಾಟ ಆರಂಭಿಸಲಾಗುವುದು ಎಂದು ತಿಳಿಸಿದರು. ಕೋಮುವಾದದ ವಿರುದ್ಧ ನಡೆಸುವ ಹೋರಾಟವು ಸೈದ್ಧಾಂತಿಕ, ರಾಜಕೀಯ ಮತ್ತು ಸಂಘಟನಾ ನೆಲೆಯಲ್ಲಿ ಇರಬೇಕಾಗುತ್ತದೆ. ಅದಕ್ಕಾಗಿ ವರ್ಗ ಮತ್ತು ಜನಚಳುವಳಿಗಳು ಹರಿತಗೊಳ್ಳಬೇಕು. ಪಾರ್ಲಿಮೆಂಟಿನ ಒಳಗೂ ಮತ್ತು ಅದರ ಹೊರಗೂ ಈ ಹೋರಾಟಗಳು ನಡೆಯಬೇಕಾಗುತ್ತದೆ ಎಂದರು.

ಹಳ್ಳಿಗಳು ಮತ್ತು ನಗರ ಪ್ರದೇಶಗಳಲ್ಲಿ ಎಡಪಕ್ಷಗಳು ನಡೆಸುತ್ತಿರುವ ಜನ–ಪರ ಹೋರಾಟಗಳನ್ನು ಗಮನಿಸದ, ಅಪ್ಪಿ ತಪ್ಪಿಯೂ ವರದಿಮಾಡದ ಕಾರ್ಪೊರೇಟ್ ಮಾಧ್ಯಮದ ಕೆಲವು ವಿಭಾಗಗಳು ಕೇಂದ್ರ ಸರ್ಕಾರದ ಪರವಾಗಿ ನಾಚಿಕೆ ಇಲ್ಲದ ವಕಾಲತ್ತು ವಹಿಸುತ್ತಿರುವುದನ್ನು ಯೆಚೂರಿಯವರು ಟೀಕಿಸಿದರು. ಕಾರ್ಪೊರೇಟ್ ಕುಳಗಳು ಮೋದಿಯವರನ್ನು ಅಧಿಕಾರಕ್ಕೆ ತರಲು ಖರ್ಚು ಮಾಡಿದ ಸುಮಾರು 15,500 ಕೋಟಿ ರೂಪಾಯಿಗಳಲ್ಲಿ ಹೆಚ್ಚಿನ ಪಾಲು ಮಾಧ್ಯಮಗಳಿಗೆ ಹೋಗಿದೆ. ಸಿಪಿಐ(ಎಂ) ಮತ್ತು ತೃಣಮೂಲ ಪಕ್ಷಗಳು ಕೋಮುವಾದದ ವಿರುದ್ಧದ ಹೋರಾಟದಲ್ಲಿ ಜೊತೆಯಾಗಲಿವೆ ಎಂಬುದು ಮಾಧ್ಯಮಗಳ ಸುಳ್ಳು ಪ್ರಚಾರ ಎಂದರು.



ಟಿಎಂಸಿ ಮಾಜಿ ಸಂಸದನ ಆತ್ಮಹತ್ಯಾ ಯತ್ನದ ಸುತ್ತ – ಹಲವು ಅನುಮಾನಗಳ ಹುತ್ತ

ಶಾರದಾ ಚಿಟ್‌ಫಂಡ್ ಹಗರಣದಲ್ಲಿ ಶಾಮೀಲಾಗಿದ್ದ ಮಾಜಿ ಸಂಸದ ಕುನಾಲ್ ಘೋಷ್ ಸುಮಾರು ಒಂದೂವರೆ ವರ್ಷದಿಂದ ಜೈಲಿನಲ್ಲಿದ್ದಾನೆ. ಆತ ಶಾರದಾ ಚಿಟ್‌ಫಂಡ್ ಸಮೂಹ ಮತ್ತು ತೃಣಮೂಲ ಪಕ್ಷದ ನಡುವಿನ ಕೊಂಡಿಯಾಗಿದ್ದ. ಹಗರಣದಲ್ಲಿರುವ ಪ್ರಭಾವಶಾಲಿ ವ್ಯಕ್ತಿಗಳಲ್ಲಿ ಯಾರನ್ನೂ ಬಂದಿಸಿಲ್ಲ; ತನ್ನೊಬ್ಬನನ್ನೇ ಬಲಿಪಶುಮಾಡಲಾಗಿದೆ ಎಂದು ಆತ ಅನೇಕ ಬಾರಿ ಹೇಳಿದ್ದಾನೆ. ಜೈಲು ಪಾಲಾದ ನಂತರ ಆತ ಹಿಂದೆ ಯಾರನ್ನು ಜೋರಾಗಿ ಸಮರ್ಥಿಸುತ್ತಿದ್ದನೋ ಅವರ ವಿರುದ್ಧವೇ ಈಗ ತಿರುಗಿ ಬಿದ್ದಿದ್ದಾನೆ. ತನ್ನ ಮಾತುಗಳನ್ನು ಗಂಭೀರವಾಗಿ ಪರಿಗಣಿಸದಿದ್ದರೆ ಮತ್ತು ಹಗರಣದಲ್ಲಿ ಶಾಮೀಲಾಗಿರುವ ಪ್ರಭಾವಶಾಲಿ ವ್ಯಕ್ತಿಗಳನ್ನು ಬಂಧಿಸದಿದ್ದರೆ ನವೆಂಬರ್ 14ರಂದು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಇತ್ತೀಚೆಗೆ ಆತ ಬೆದರಿಕೆ ಒಡ್ಡಿದ್ದ. ತಾನೇ ನಿಗದಿಪಡಿಸಿದ ದಿನದಂದು ಆತ ಮೂವತ್ತು ನಿದ್ರೆ ಮಾತ್ರೆ ನುಂಗಿ ನಂತರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಈಗ ಅಪಾಯದಿಂದ ಪಾರಾಗಿದ್ದಾನೆ. ತೃಣಮೂಲದ ಅಧಿನಾಯಕಿ ಮತ್ತು ಹಲವು ಪ್ರಮುಖ ನಾಯಕರು ಹಗರಣದಲ್ಲಿ ಶಾಮೀಲಾಗಿದ್ದಾರೆಂಬ ಆತನ ಆಪಾದನೆಯನ್ನು ಗಂಭೀರವಾಗಿ ಪರಿಗಣಿಸದಿದ್ದರೂ ಸಹ ಈ ಘಟನೆ ಅನೇಕ ಆತಂಕದ ಪ್ರಶ್ನೆಗಳನ್ನು ಎತ್ತುತ್ತದೆ.

–ಒಬ್ಬ ವಿಚಾರಣಾಧೀನ ಕೈದಿಗೆ ಅಷ್ಟು ಪ್ರಮಾಣದ ನಿದ್ದೆ ಮಾತ್ರೆಗಳು ದೊರಕಿದ್ದಾದರೂ ಹೇಗೆ? ಅದೂ ಕೂಡ ತಾನು ಇಂಥ ದಿನ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಘೋಷಿಸಿ ಬೆದರಿಕೆ ಹಾಕಿರುವಾಗ !! ಹೆಂಡ, ನೋಟಿನ ಕಂತೆಗಳು, ಮೊಬೈಲ್ ಸಿಮ್‌ಗಳು, ಮದ್ದು ಗುಂಡುಗಳು ಜೈಲಿಗೆ ಸರಬರಾಜಾಗುತ್ತಿದ್ದದ್ದು ಎಲ್ಲರಿಗೂ ತಿಳಿದ ವಿಷಯ. ನಿದ್ದೆ ಮಾತ್ರೆಗಳು ಹೊಸ ಸೇರ್ಪಡೆಯಾಗಿರುವುದು ಆಶ್ಚರ್ಯ ಮೂಡಿಸಿದೆ.

–ಶಾರದಾ ಚಿಟ್‌ಫಂಡ್ ಸಮೂಹದ ಮುಖ್ಯಸ್ಥ(ಸುದೀಪ್ತೊ ಸೆನ್)ನ ಬಂದೀಕೋಣೆ ಶೋಧಿಸಿದಾಗ ಮಾತ್ರೆಗಳ ಒಂದು ದೊಡ್ಡ ರಾಶಿಯೇ ಪತ್ತೆಯಾಗಿದೆ. ರಾಜ್ಯ ಸರ್ಕಾರ ಇದನ್ನು ಗಮನಿಸುತ್ತಿದೆಯೇ?

–ಆತ್ಮಹತ್ಯಾ ಪ್ರಯತ್ನವನ್ನು ಮುಖ್ಯಮಂತ್ರಿ ಗೇಲಿ ಮಾಡಿದ್ದಾರೆ. ಕಿಂಚಿತ್ತಾದರೂ ವಿವೇಕವಿಲ್ಲದ ಕ್ರೂರ ತಮಾಷೆ ನಡೆಯುತ್ತಿದೆಯೇ ಬಂಗಾಳದಲ್ಲಿ?

ನಿಶ್ಚಿತವಾಗಿ, ಕಾಲವೇ ಇದಕ್ಕೆಲ್ಲಾ ಉತ್ತರ–ಕೊಡುತ್ತದೆ.

ಮುಂದುವರಿಯುತ್ತಿರುವ ತೃಣಮೂಲ–ಪೋಲೀಸ್ ಹಿಂಸಾಕಾಂಡ

ಪಶ್ಚಿಮ ಬಂಗಾಳದ ಬೀರ್‌ಭೂಮ್ ಜಿಲ್ಲೆಯ ಪರುಯಿ ಸುತ್ತಮುತ್ತಲ ಗ್ರಾಮಗಳಲ್ಲಿ ಪೋಲೀಸ್–ತೃಣಮೂಲ ಗೂಂಡಾ ಪಡೆಗಳ ಜಂಟಿ ಹಿಂಸಾಕೃತ್ಯಗಳು ಅವ್ಯಾಹತವಾಗಿ ನಡೆದೇ ಇವೆ.

ನವೆಂಬರ್ 16 ರಂದು ಬೆಳಗಿನ ಐದು ಗಂಟೆ ಸಮಯದಲ್ಲಿ ಇನ್ನೂ ಮಂಜು ಮುಸುಕಿದ, ಕತ್ತಲು ಹರಿಯುವ ಮುನ್ನವೇ ತೃಣಮೂಲ ಗೂಂಡಾ ಪಡೆಗಳು ಪರುಯಿ ಸುತ್ತಮುತ್ತಲ ಮೂರು ಗ್ರಾಮಗಳಿಗೆ ನುಗ್ಗಿ, ತಮ್ಮ ಹೊಲಗಳಲ್ಲಿ ಕೊಯ್ದ ಪೈರು ಕಟ್ಟಿಡುತ್ತಿದ್ದ ರೈತರ ಮೇಲೆ(ಇವರೆಲ್ಲರೂ ಬಿಜೆಪಿ ಬೆಂಬಲಿಗರು) ದಾಳಿ ಮಾಡಿದ್ದಾರೆ. ಸಿಡಿಮದ್ದುಗಳ ಸದ್ದಿಗೆ ಬೆದರಿ ಭಯಭೀತರಾದ ಹೆಂಗಸರು ಮತ್ತು ಮಕ್ಕಳು ಚೆಲ್ಲಾ ಪಿಲ್ಲಿಯಾಗಿ ಓಡಿದ್ದಾರೆ. ಈಗಾಗಲೇ ದಾಳಿಗೊಳಗಾಗಿ ತಮ್ಮ ಸರ್ವಸ್ವವನ್ನೂ ಕಳೆದುಕೊಂಡಿದ್ದವರು ಬಿಟ್ಟು ಹೋಗಿದ್ದ ವಸ್ತುಗಳನ್ನೂ ದಾಳಿಕೋರರು ಬಾಚಿ–ಕೊಂಡು ಹೋಗಿದ್ದಾರೆ. ಬಿಜೆಪಿಯವರೇನು ಶಾಂತ ಮೂರ್ತಿಗಳೇ? ಈ ಸುದ್ದಿ ಅವರ 'ದಂಡು'ನಾಯಕರಿಗೆ ತಲುಪಿದ್ದೇ ತಡ, ಅವಸರದಲ್ಲಿ ತಮ್ಮ ದಂಡು ಕಟ್ಟಿಕೊಂಡು ಸ್ಥಳಕ್ಕೆ ಧಾವಿಸಿ ಸುರಿಸಿದ ಗುಂಡಿನ ಸುರಿಮಳೆಯಲ್ಲಿ ಇಬ್ಬರು ತೃಣಮೂಲ ಗೂಂಡಾಗಳು ಮತ್ತು ಅವರ ಜೊತೆಗೆ ಇತ್ತೀಚೆಗೆ ತೃಣಮೂಲದಿಂದ ಬಿಜೆಪಿಗೆ ನಿಷ್ಠೆ ಬದಲಿಸಿಕೊಂಡಿದ್ದ ಏಳು ಮಂದಿ ರೈತರು ತೀವ್ರವಾಗಿ ಗಾಯಗೊಂಡರು.

ಪೋಲೀಸರು ಗೂಸಾ ತಿಂದರು!

ಪಶ್ಚಿಮ ಬಂಗಾಳದ ಜನಸಾಮಾನ್ಯರು ರಕ್ಷಣೆ ಕೋರಿ ಪೋಲೀಸರ ಬಳಿ ಹೋದರೆ ಅಲ್ಲಿ ಅವರಿಗೆ ಎದುರಾಗುವ ಪರಿಸ್ಥಿತಿಯು ಹನುಮಂತನೇ ಹಗ್ಗ ತಿನ್ನುತ್ತಿರುವಾಗ ಪೂಜಾರಿ ಶಾವಿಗೆ ಕೇಳಿದಂತಾಗಿದೆ. ಇದೇನೂ ಉತ್ಪ್ರೇಕ್ಷೆಯಲ್ಲ. ನವೆಂಬರ್ 14ರಂದು ಕೊಲ್ಕತಾದ ಪ್ರತಿಷ್ಠಿತ ಅಲೀಪುರ್ ಪೋಲೀಸ್ ಠಾಣೆಯಲ್ಲಿ ನಡೆದ ಘಟನೆ ಅಲ್ಲಿನ ಪೋಲೀಸರ ಪರಿಸ್ಥಿತಿಯ ಬಗ್ಗೆ ಆಶ್ಚರ್ಯ, ಅನುಕಂಪ, ಅಸಹ್ಯ, ಹತಾಶೆ ಮತ್ತು ಪೋಲೀಸರ ಅಸಹಾಯಕತೆ ಎಲ್ಲವೂ ಒಟ್ಟಿಗೆ ಕಾಡುವಂತೆ ಮಾಡಿದೆ. ತಮ್ಮ ತಾಖತ್ತು ಏನು ಎಂಬುದನ್ನು ಪೋಲೀಸರಿಗೆ ತೋರಿಸಲು ತೃಣಮೂಲ ಗೂಂಡಾ ಪಡೆ ಲೋಕೋಪಯೋಗಿ ಇಲಾಖೆಯ ಕಟ್ಟಡದ ಕಾಂಪೌಂಡ್ ನಿರ್ಮಾಣದ ಸಮಯದಲ್ಲಿ ಮೊದಲು ಇಲಾಖಾ ನೌಕರರ ಮೇಲೆ ಹಲ್ಲೆ ಮಾಡಿ ಅವರ ರಕ್ಷಣೆ ಬಂದ ಪಕ್ಕದ ಅಲಿಪೂರ್ ಠಾಣೆಯ ಪೋಲೀಸರನ್ನು ಹಿಗ್ಗಾ ಮುಗ್ಗಾ ಥಳಿಸಿ, ಠಾಣೆಯೊಳಗೆ ಅಟ್ಟಿಸಿಕೊಂಡುಹೋಗಿ ಅಲ್ಲಿಯೂ ಅವರ ಬೆತ್ತ ಕಸಿದುಕೊಂಡು ಅದರ ರುಚಿಯನ್ನು ಅವರಿಗೇ ತೋರಿಸಿದ್ದಾರೆ. ಹೊಡೆತಗಳಿಂದ ತಪ್ಪಿಸಿಕೊಳ್ಳಲು ಅವರು ಟೇಬಲ್ ಕೆಳಗೆ, ಸಂದಿ ಮೂಲೆಗಳಲ್ಲಿ ಅವಿತುಕೊಂಡರೂ ಬಿಡದೆ ಇಟ್ಟಾಡಿಸಿದ್ದಾರೆ. ಕೈಗೆ ಸಿಕ್ಕಿದ ವಸ್ತುಗಳನ್ನು ಧ್ವಂಸ ಮಾಡಿದ್ದಾರೆ. ಪರಿಸ್ಥಿತಿ ಸ್ವಲ್ಪ ತಿಳಿಗೊಂಡ ನಂತರ ಗೂಸಾ ಕೊಟ್ಟವರಿಗೆ ಕೂರಲು ಕುರ್ಚಿ, ತಿನ್ನಲು ಬಿಸ್ಕತ್, ಕುಡಿಯಲು ಟೀ ಕೊಟ್ಟು ಉಪಚರಿಸಿ, ಸಲಾಮು ಹೊಡೆದು ಅವರನ್ನು ಬೀಳ್ಕೊಟ್ಟಿದ್ದಾರೆ. ಇಡೀ ಘಟನಾವಳಿಗಳನ್ನು ಮೊಬೈಲ್‌ನಲ್ಲಿ ದಾಖಲಿಸಿಕೊಂಡದ್ದು ಮಾಧ್ಯಮಗಳಿಗೆ ದೊರೆತು ಅದನ್ನು ಬಿತ್ತರಿಸಿದಾಗ ಪೋಲೀಸರು ಕಕ್ಕಾಬಿಕ್ಕಿಯಾಗಿದ್ದಾರೆ. ಕಸಿವಿಸಿಗೊಂಡ ತೃಣಮೂಲ ಮುಖ್ಯ ಕಛೇರಿಯು ಪೋಲೀಸ್ ವರಿಷ್ಠರಿಗೆ ಕರೆ ಮಾಡಿದೆ. ನಂತರ, ಸಮವಸ್ತ್ರ, ಟೋಪಿ ಸರಿಪಡಿಸಿಕೊಂಡು ಠಾಕು ಠೀಕಾಗಿ ಹೊರ ಬಂದು ಹತ್ತಿರದ ಫುಟ್‌ಪಾತಿನಲ್ಲಿ ವಾಸಮಾಡುತ್ತಿದ್ದ

→

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಮ್ಮೇಳನ ಚರ್ಚಿಸಿದ ಜಿಲ್ಲೆಯ ಕೆಲವು ಸಾಮಾಜಿಕ-ರಾಜಕೀಯ ಪರಿಸ್ಥಿತಿಯ ಅಂಶಗಳು

ಪುಟ 5 ರಿಂದ

ಧಾರವಾಡ ಪ್ರದೇಶದ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳಲ್ಲಿ ಬದಲಾವಣೆಗಳಾಗಿವೆ. ಇದು ಸರಕಾರಗಳು ಅನುಸರಿಸಿಕೊಂಡು ಬಂದ ನವ ಉದಾರ ಆರ್ಥಿಕ ನೀತಿಗಳ ಪರಿಣಾಮ ಹುಬ್ಬಳ್ಳಿ-ಧಾರವಾಡ ನಗರಗಳಲ್ಲಿ ಬೆಳೆದು ಮಂದಿದ್ದ ಬೃಹತ್ ಕೈಗಾರಿಕೆಗಳು ಈಗ ಇಲ್ಲ. ಗದಗ ಹಾವೇರಿ ಜಿಲ್ಲೆಗಳಲ್ಲಿ ಸಹಕಾರಿ ರಂಗದಲ್ಲಿ ಸ್ಥಾಪಿಸಲಾಗಿದ್ದ ಹತ್ತಿ ನೂಲಿನ ಗಿರಣಿಗಳು ಈಗ ಮುಚ್ಚಿವೆ. ಇವುಗಳ ಒಟ್ಟು ಪರಿಣಾಮ ಕಾರ್ಮಿಕರು ಬೀದಿಪಾಗಿದ್ದಾರೆ. ಈಗ ಏನಿದ್ದರೂ ಚಿಕ್ಕ ಚಿಕ್ಕ ಕೈಗಾರಿಕಾ ಘಟಕಗಳು ಮಾತ್ರ. ಇಲ್ಲಿ ಸಂಘಟನೆ ಕಟ್ಟಲು ಅವಕಾಶವೇ ಇಲ್ಲದಂತಾಗಿದೆ. ಇನ್ನೂ ಉದ್ಯೋಗಗಳು ಗುತ್ತಿಗೆ, ಹೊರಗುತ್ತಿಗೆ, ಹಂಗಾಮಿ, ದಿನಗೂಲಿ, ಗೌರವಧನ ಆಧಾರಿತದಲ್ಲಿ ಕೆಲಸ ಮಾಡುವ ಅನಿವಾರ್ಯತೆ ಕಾರ್ಮಿಕರದ್ದು. ಕೆಲಸದ ಭದ್ರತೆ, ನಿಶ್ಚಿತ ಕೂಲಿ ಇಲ್ಲದ ಈ ರೀತಿಯ ಸಾವಿರಾರು ಕಾರ್ಮಿಕರ ಕುಟುಂಬಗಳು ಸಂಕಷ್ಟದಲ್ಲಿವೆ. ಈ ಬಿಕ್ಕಟ್ಟು ವರ್ಷದಿಂದ ವರ್ಷಕ್ಕೆ ಉಲ್ಬಣಗೊಳ್ಳುತ್ತಿದೆ. ದೇಶದಲ್ಲಿ 1996ರಿಂದ ಇಲ್ಲಿಯವರೆಗೆ 3 ಲಕ್ಷದಷ್ಟು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಧಾರವಾಡ-ಗದಗ್-ಹಾವೇರಿಗಳಲ್ಲಿಯೂ ರೈತರ ಆತ್ಮಹತ್ಯೆಗಳು ನಡೆಯುತ್ತಲೇ ಇವೆ. ಆದರೆ ಸರಕಾರಗಳು ಈ ಬಗ್ಗೆ ಗಂಭೀರ ಚಿಂತನೆ ನಡೆಸುತ್ತಿಲ್ಲ. ಅದರ ಬದಲು ಕೃಷಿ ಭೂಮಿಯನ್ನು ಬಹುರಾಷ್ಟ್ರೀಯ ಕಂಪನಿಗಳ ಹಿಡಿತಕ್ಕೆ ಕೊಡಲು ಈ ನೆಲದ ಕಾನೂನುಗಳನ್ನು ತಿದ್ದುಪಡಿ ಮಾಡಲು ಮುಂದಾಗಿವೆ. ಸಮರ್ಪಕ ಭೂ ಸುಧಾರಣಾ ಕಾನೂನುಗಳು ಜಾರಿಯಾಗದ ಕಾರಣ ಬಡ ರೈತರು ಸರಕಾರಿ ಜಮೀನುಗಳಲ್ಲಿ, ಅರಣ್ಯ ಭೂಮಿಯಲ್ಲಿ ಬಗರಹುಕುಂ ಸಾಗುವಳಿ ಮಾಡುವದು ಅನಿವಾರ್ಯವಾಗಿದೆ.

ಯಾವುದೇ ಸರಕಾರಿ ಹುದ್ದೆಗಳನ್ನು ತುಂಬಲು ಸರಕಾರ ಮನಸ್ಸು ಮಾಡುತ್ತಿಲ್ಲ. ಹೀಗಾಗಿ ಕರ್ನಾಟಕದಲ್ಲಿ ಸುಮಾರು 1 ಲಕ್ಷ 80 ಸಾವಿರ ಹುದ್ದೆಗಳು ಖಾಲಿ ಬಿದ್ದಿವೆ ಎಂಬ ಒಂದು ಅಂ-ದಾಜಿದೆ. ಖಾಸಗೀಕರಣ ರಾಮ ಭಾಣ ಎಂದು ಸರಕಾರ ಭಾವಿಸಿದಂತಿದೆ. ಹೀಗಾಗಿ ಮೀಸಲಾತಿಗೆ ಅರ್ಥವೇ ಇಲ್ಲದಂತಾಗಿದೆ. ಅಸಂಘಟಿತ ವಲಯಕ್ಕೆ ಸಾಮಾಜಿಕ ಭದ್ರತೆ ನೀಡುವ ಮಾತುಗಳು ಕೇವಲ ಬೂಟಾಟಿಕೆಯಾಗಿದೆ. ಕಲ್ಯಾಣ ರಾಜ್ಯದ ಪರಿಕಲ್ಪನೆಯಿಂದ ಆಳುವ ಸರಕಾರಗಳು ಹಿಂದೆ ಸರಿಯುತ್ತಿವೆ.

ರಾಜ್ಯದಲ್ಲಿ ರಾಜಕೀಯ ಪರಿಸ್ಥಿತಿ ಬದಲಾಗಿದೆ. ಬಿಜೆಪಿ ನೇತೃತ್ವದ ಸರಕಾರದ ಬದಲಿಗೆ ಕಾಂಗ್ರೇಸ ನೇತೃತ್ವದ ಸರಕಾರ ಅಧಿಕಾರಕ್ಕೆ ಬಂದಿದೆ. ಅಧಿಕಾರಕ್ಕೆ ಬಂದ ಕ್ಷಣದಲ್ಲಿ ಬಡವರಿಗೆ ಚುನಾವಣಾ ಭರವಸೆಯಂತೆ 1 ರೂ ನಂತೆ 30 ಕೆ.ಜಿ ಅಕ್ಕಿ ಕೊಡುವ ಕ್ರಮ ಜಾರಿಗೊಳಿಸುವದರೊಂದಿಗೆ ಬಿಜೆಪಿಗೆ ಭಿನ್ನ ಎಂದು ತೋರಿಸಿಕೊಂಡಿದ್ದರೂ ಆ ಪಕ್ಷದ ಆಂತರಿಕ ಗೊಂದಲಗಳಿಂದ ಮುಖ್ಯಮಂತ್ರಿಗೆ ಲಗಾಮು ಹಾಕುವ, ಅವರನ್ನು ನಿಯಂತ್ರಿಸುವ ಕ್ರಮಗಳ ಭಾಗವಾಗಿ ಕೋರ ಕಮಿಟಿ ರಚಿಸಲಾಗಿದೆ. ಆದರೂ ಗೊಂದಲಗಳು ಮುಂದುವರಿದ ಪರಿಣಾಮ ಸರಕಾರ ಕೆಲಸ ಮಾಡುತ್ತದೆ ಅನ್ನುವ ಭಾವನೆ ಕರಗಿದೆ. ವಿರೋಧ ಪಕ್ಷದವರು ಕೂಡಾ ರಾಜಕೀಯ ಕಾರಣ-ಕ್ಕೆ ಒಂದಿಷ್ಟು ವಿರೋಧಿಸುತ್ತಾರೆ. ವಿನಃ ಮತ್ತೇನೂ ಇಲ್ಲ. ಹೀಗಾಗಿ ಆಳುವ ಮತ್ತು ವಿರೋಧಿ ಪಕ್ಷಗಳ ನಡುವೆ ಒಂದು ಒಪ್ಪಂದ ಆಗಿದೆ ಎನ್ನೋ ಎಂಬಂತೆ ವರ್ತನೆಗಳು ಇವೆ. ಎರಡೂ ಪಕ್ಷಗಳ ಸರಕಾರಗಳ ವರ್ಗಗುಣ ಒಂದೇ ಎನ್ನುವುದಕ್ಕೆ ಒಂದು ಉದಾಹರಣೆ ಸಾಕು. ಬಿಜೆಪಿ ಸರಕಾರ ವಿದೇಶಿ ಬಂಡವಾಳ ಆಕರ್ಷಿಸಲು ಹೂಡಿಕೆದಾರರ ಸಮಾವೇಶ ಮಾಡಿದಂತೆ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ ಸರಕಾರವೂ ಹೂಡಿಕೆದಾರರ ಸಮಾವೇಶ ಮಾಡಲು ಹೊರಟಿದೆ.

ಅವಿಭಜಿತ ಧಾರವಾಡ ಜಿಲ್ಲಾ ಸಂಘಟನಾ ಸಮಿತಿಯ ವ್ಯಾಪ್ತಿಯಲ್ಲಿ ಬರುವ ಮೂರು ಜಿಲ್ಲೆಗಳಲ್ಲಿ ರಾಜಕೀಯ ಪರಿಸ್ಥಿತಿ ಹೀಗಿದೆ. ಧಾರವಾಡ ಜಿಲ್ಲೆಯ 7 ವಿಧಾನ ಸಭಾ ಕ್ಷೇತ್ರಗಳಲ್ಲಿ 4-ಕಾಂಗ್ರೆಸ, 2 -ಬಿಜೆಪಿ, 1 -ಜೆಡಿಎಸ್ ಪಾಲಾಗಿದೆ. ಗದಗ ಜಿಲ್ಲೆಯ 4 ವಿಧಾನ ಸಭಾ ಕ್ಷೇತ್ರಗಳನ್ನು ಕಾಂಗ್ರೆಸ ಪಡೆದುಕೊಂಡಿದೆ. ಹಿಂದಿನ ಅವಧಿಯಲ್ಲಿ 4 ಕ್ಷೇತ್ರಗಳು ಬಿಜೆಪಿ ಪಾಲಾಗಿದ್ದವು. ಹಾವೇರಿ ಜಿಲ್ಲೆಯ 6 ವಿಧಾನ ಸಭಾ ಕೇತ್ರಗಳಲ್ಲಿ 2 ಬಿಜೆಪಿ, 4 ಕಾಂಗ್ರೆಸ ಪಾಲಾಗಿವೆ. ಲೋಕ ಸಭಾ ಎರಡೂ ಕ್ಷೇತ್ರಗಳು ಧಾರವಾಡ ಮತ್ತು ಹಾವೇರಿ ಬಿಜೆಪಿ ಪಾಲಾಗಿವೆ. ಕಾಂಗ್ರೆಸ ಬಿಜೆಪಿಗೆ ಪರ್ಯಾಯವಾಗಿ ಜೆಡಿಎಸ್ ಹೊರಹೊಮ್ಮಲು ಪ್ರಯತ್ನಿಸಿ ಸೋತಿ-ದೆ.

ಕಳೆದ ವರ್ಷ ಫೆಬ್ರುವರಿ ತಿಂಗಳಲ್ಲಿ ಸ್ಥಳಿಯ ಸಂಸ್ಥೆಗಳಿಗೆ ಚುನಾವಣೆ ನಡೆದವು. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಚುನಾವಣೆಗೆ ಸಿಪಿಐ(ಎಂ) ತನ್ನ ಒಬ್ಬ ಅಭ್ಯರ್ಥಿಯನ್ನು 25ನೇ ವಾರ್ಡ್‌ನಲ್ಲಿನಿಲ್ಲಿಸಿತ್ತು.ಪ್ರಚಾರಗಮನಾರ್ಹವಾಗಿತ್ತು. ಆದರೆ ಗೆಲವು ಸಾಧ್ಯವಾಗಲಿಲ್ಲ. ಬಂದ ಮತಗಳು ನಿರೀಕ್ಷೆಗಿಂತ ಕಡಿಮೆ. ರೋಣ ತಾಲೂಕಿನ ಗಜೇಂದ್ರಗಡ ಪುರಸಭಾ ಚುನಾವಣೆಗೆ 8 ಅಭ್ಯರ್ಥಿಗಳನ್ನು ನಿಲ್ಲಿಸುವ ಮೂಲಕ ಸಿಪಿಐ(ಎಂ) ಗಮನ ಸೆಳೆಯಿತು. ಕಾಂಗ್ರೆಸ ಬಿಜೆಪಿ ಪಕ್ಷಗಳಿಗೆ ಪರ್ಯಾಯವಾಗಿ 3 ನೇ ಶಕ್ತಿ ಎನ್ನುವಂತೆ ಬಿಂಬಿತವಾಗಿತ್ತು. ಗೆಲವು ಸಾಧ್ಯವಾಗಿದ್ದು 1 ವಾರ್ಡಿನಲ್ಲಿ ಮಾತ್ರ. ಪಕ್ಷದ ಸದಸ್ಯ ಕಾಂ. ಎಂ.ಎಸ್.ಹಡಪದ ಗಮನ ಸೆಳೆಯುವ ಹಾಗೆ ಅಲ್ಲಿ ಕೆಲಸ ಮಾಡಲು ಸಾಧ್ಯವಾಗಿದೆ. ಅಲ್ಲದೆ ಹೊರಗೆ ನಡೆಯುವ ಹೋರಾಟಗಳು ಅವರ ಕೆಲಸವನ್ನು ಸತ್ವಯುತಗೊಳಿಸಿವೆ.

ಕಳೆದ ಗ್ರಾಮ ಪಂಚಾಯತ ಚುನಾವಣೆಯಲ್ಲಿ (2010) ಬೆಳವಣಕಿ ಗ್ರಾಮ ಪಂಚಾಯತದಲ್ಲಿ ಸಿಪಿಐ(ಎಂ) ಪಕ್ಷದ 7 ಸದಸ್ಯರು ಗೆಲುವು ಸಾಧಿಸಿದರು. ಒಬ್ಬ ಅಭ್ಯರ್ಥಿ ನಮ್ಮೊಂದಿಗೆ ಮೊದಲ ಗುರುತಿಸಿಕೊಂಡಿದ್ದು, ಕೌಜಗೇರಿ ಗ್ರಾಮದ ಮೂವರು ಸದಸ್ಯರು ನಮಗೆ ಬೆಂಬಲ ನೀಡಿದ್ದರಿಂದ 30 ತಿಂಗಳು ನಾವು ಅಲ್ಲಿ ಆಡಳಿತ ನಡೆಸಲು ಶಕ್ಯವಾಯಿತು. ಭ್ರಷ್ಟಾಚಾರ ರಹಿತ ಆಡಳಿತ, ಸಾಕಷ್ಟು ಅಭಿವೃದ್ಧಿ ಕೆಲಸಗಳು ನಮ್ಮ ವಿರೋಧಿಗಳನ್ನು ಕಂಗೆಡಿಸಿತು. ಪ್ರತಿ ಹಂತದಲ್ಲೂ ಮಂತ್ರಿ, ಶಾಸಕರ ಸಹಾಯ ಪಡೆದು ಎದುರು ಪಕ್ಷದವರು ಕಿರಿಕಿರಿ ಉಂಟು ಮಾಡಿದರು. ಮನೆ ನಿವೇಶನಕ್ಕಾಗಿ 8 ಎಕರೆ ಜಮೀನು ಖರೀದಿಸಿದ್ದು ದೊಡ್ಡ ಸಾಧನೆ ಸರಿ. ಆದರೆ ಫಲಾನುಭವಿಗಳಿಗೆ ನಿವೇಶನಗಳನ್ನು ಬಿಜೆಪಿ, ಕಾಂಗ್ರೆಸ ಒಟ್ಟಾಗಿ ಜಿಲ್ಲಾ ಪಂಚಾಯತ್ ತಾಲೂಕಾ ಪಂಚಾತಯಗಳ ಮೇಲೆ ಒತ್ತಡ ಹೇರಿ ಹಂಚಿಕೆ ಮಾಡಲು ಬಿಡಲಿಲ್ಲ. ಬಿಜೆಪಿ ಶಾಸಕ ಸೋತು ಕಾಂಗ್ರೆಸ ಶಾಸಕ ಆಯ್ಕೆಯಾಗಿ ಬಂದರೂ ಇದು ಸಾಧ್ಯವಾಗಲಿಲ್ಲ. ಇಬ್ಬರು ಗ್ರಾಮ ಪಂಚಾಯತ ಸದಸ್ಯರು ನಿಷ್ಠೆ ಬದಲಿಸಿದ್ದರಿಂದ ಇದು ಸಾಧ್ಯವಾಗಲಿಲ್ಲ. ಇನ್ನೊಂದು ಅವಧಿಗೆ ಮುಂದುವರೆಯಲು ಸಾಧ್ಯವಾಗುತ್ತಿತ್ತು. ಆದರೆ ನಮ್ಮ ಸದಸ್ಯರಲ್ಲಿ ಒಂದು ಸ್ಪಷ್ಟ ಏಕಾಭಿಪ್ರಾಯ ಒಡಮೂಡಿದ್ದರೆ ಇನ್ನು ಹೆಚ್ಚಿನ ಮಟ್ಟದಲ್ಲಿ ಕಾರ್ಯಮಾಡುವದು ಸಾಧ್ಯವಾಗುತ್ತಿತ್ತು. ■

→ ಕೆಲವು ಮಂದಿಯನ್ನು ವಶಕ್ಕೆ ತೆಗೆದುಕೊಂಡು "ದಾಳಿಕೋರರನ್ನು ಬಂಧಿಸಲಾಗಿದೆ" ಎಂದು ಮಾಧ್ಯಮಗಳಿಗೆ ತೋರಿಸಿದ್ದಾರೆ. ಹೇಗಿದೆ? ಇದು ಅಲ್ಲಿನ ಪೋಲೀಸರ ಕಾರ್ಯವೈಖರಿ!

ತೃಣಮೂಲ ಪಕ್ಷವು 2009ರಲ್ಲಿ ಇದೇ ಠಾಣೆ-ಯ ಮೇಲೆ ಹಲ್ಲೆ ನಡೆಸಿ ಅದನ್ನು ದಕ್ಕಿಸಿಕೊಂಡಿತ್ತು. ಮಮತಾ ಬ್ಯಾನರ್ಜಿ ಅಧಿಕಾರಕ್ಕೆ ಬಂದ ನಂತರ ಪೋಲೀಸ್ ಠಾಣೆಯ ಒಳಗೂ ಮತ್ತು ಹೊರಗೂ ಪೋಲೀಸರ ಮೇಲೆರಗುವುದು ಸಾಧಾರಣವಾಗಿದೆ. ಅಲಿಪೂರ್ ಠಾಣೆಯ ಮೇಲೆ ದಾಳಿ ಮಾಡಿದ ದಿನವೇ ಗರ್ಫಾ ಠಾಣೆಯಲ್ಲಿ ಒಬ್ಬ ಪೋಲೀಸ್ ಅಧಿಕಾರಿಯನ್ನು ತೃಣಮೂಲ 'ಸಾಹಸಿ' ಹಲ್ಲೆ ಮಾಡಿದ ಘಟನೆಯೂ ವರದಿಯಾಗಿದೆ. ಮಮತಾ ಬ್ಯಾನರ್ಜಿ ಮುಖ್ಯಮಂತ್ರಿಯಾಗುವುದಕ್ಕೂ ಮುನ್ನ ಒಬ್ಬ ಐಪಿಎಸ್ ಅಧಿಕಾರಿಯ ಮುಖಕ್ಕೆ ಮಸಿ ಬಳಿದಿದ್ದರು. ಇನ್ನೊಮ್ಮೆ, ಪೋಲೀಸ್ ಅಧಿಕಾರಿಯ ಕುರ್ಚಿಯ ಮೇಲೆ ಕುಳಿತು ಅವನನ್ನು ಅವಮಾನಿಸಿದ್ದರು. ಮುಖ್ಯಮಂತ್ರಿಯಾದ ಮೇಲೆ ಒಬ್ಬ ಹಿರಿಯ ಭದ್ರತಾ ರಕ್ಷಣಾಧಿಕಾರಿಯನ್ನು ಬಟ್ಟೆ ಬಿಚ್ಚಿ ಚಾಟಿಯಲ್ಲಿ ಹೊಡೆಯುವುದಾಗಿ ಬೆದರಿಸಿದ್ದರು. ನಂತರ, ತಾವು ಒಬ್ಬ ಮುಖ್ಯಮಂತ್ರಿ ಎಂಬುದನ್ನೂ ಮರೆತು ಭವಾನಿಪುರ ಠಾಣೆಗೆ ಧಾವಿಸಿ ಅಲ್ಲಿ ಬಂಧನಕ್ಕೊಳಗಾಗಿದ್ದ ತಮ್ಮ ಚೇಲಾಗಳನ್ನು ತಕ್ಷಣವೇ ಬಿಡುಗಡೆ ಮಾಡಿಸಿದ್ದರು. ಅರಾಜಕತೆಯನ್ನೇ ಬಂಡವಾಳ ಮಾಡಿಕೊಂಡು ಅದನ್ನೇ ಬಿತ್ತಿ ಬೆಳೆಸಿದ್ದಾರೆ. ಅದರ ಪರಿಣಾಮವನ್ನು ಜನರು ಈಗ ಕಾಣುವಂತಾಗಿದೆ. ಪೋಲೀಸರು ಆಳುವವರ ಬಾಡಿಗೆ ಬಂಟರಂತಾಗಿದ್ದಾ-ರೆ. ಒಂದೊಮ್ಮೆ ಈ ಅರಾಜಕತೆ ಭುಗಿಲೆದ್ದರೆ ಅಥವಾ ಬೇಸತ್ತ ಪೋಲೀಸರು ದಂಗೆ ಎದ್ದ-ರೆ ಏನಾಗಬಹುದೆಂದು ಊಹಿಸುವುದು ಕಷ್ಟ ಎನ್ನುವಂತಿದೆ ಪರಿಸ್ಥಿತಿ. ●

ಬೆಂಗಳೂರು ವಿಚಾರ ಸಂಕಿರಣ.....

ಪುಟ 8 ರಿಂದ

ಆಗ ಸ್ಥಳೀಯ ಸಂಸ್ಥೆಗಳು, ವಿಧಾನ ಸಭೆಗಳು, ಸಂಸತ್ತು ಎಲ್ಲದಕ್ಕೂ ಒಂದೇ ಸಾರಿಗೆ ಮತ ಹಾಕುವಂತಾಗಬೇಕು. ಅನಿವಾರ್ಯ ಉಪ ಚುನಾವಣೆಗಳು ಹೊರತುಪಡಿಸಿ ಮತ್ತೆ ಚುನಾವಣೆಗಳು 5 ವರ್ಷ ಬರಬಾರದು ಎಂದು ಅವರು ಪ್ರತಿಪಾದಿಸಿದರು.

'ಅನುಪಾತ ಪ್ರಾತಿನಿಧ್ಯ'ದ ಪರಿಕಲ್ಪನೆ ಮೊದಲು ಪ್ರತಿಪಾದಿಸಿದ್ದು ಡಾ.ಅಂಬೇಡ್ಕರ್ – ಮಹೇಶ್

ಬಹುಜನ ಸಮಾಜ ಪಕ್ಷ- ಬಿಎಸ್ಪಿಯ ರಾಜ್ಯಾಧ್ಯಕ್ಷ ಮಹೇಶ್ ಅವರು ಮಾತನಾಡಿ ಅನುಪಾತ ಆಧಾರಿತ ಪ್ರಾತಿನಿಧ್ಯದ ಪರಿಕಲ್ಪನೆಯನ್ನು ಮೊದಲು ಪ್ರತಿಪಾದಿಸಿದ್ದು ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು. ಅದಕ್ಕೆ ಮೊದಲು ಜಮೀನ್ದಾರರು ಮತ್ತು ಪದವೀಧರರಿಗೆ ಮಾತ್ರ ಮತದಾನದ ಹಕ್ಕು ಎಂದಿತ್ತು. 1918 ರಲ್ಲಿ ಸೌತ್‌ಬರೋ ಆಯೋಗದ ಮುಂದೆ ಅಂಬೇಡ್ಕರರು ದಲಿತರಿಗೆ ಅವರ ಪ್ರಮಾಣಕ್ಕನುಗುಣವಾದ ಪ್ರಾತಿನಿಧ್ಯ ಸಿಗಬೇಕೆಂಬ ಅನುಪಾತದ ಆ ಧಾರದ ಪ್ರಾತಿನಿಧ್ಯದ ಬಗೆಗೆ ಬೇಡಿಕೆ ಇಟ್ಟರು. ಪಟ್ಟಭದ್ರರು ಅದನ್ನು ವಿರೋಧಿಸಿದರು. ಸೈಮನ್ ಆಯೋಗದ ಮುಂದೆ ವಯಸ್ಕ ಮತದಾನ ಮತ್ತು ದಲಿತರಿಗೆ ಅವರ ಪ್ರಮಾಣಕ್ಕನುಗುಣವಾದ ಪ್ರ ತ್ಯೇಕ ಪ್ರಾತಿನಿಧ್ಯದ ವ್ಯವಸ್ಥೆ ಬಗೆಗೆ ಬೇಡಿಕೆಗಳಿದ್ದವು. ನೆಹರು ಅವರ ನಿಲುವು ಸಾರ್ವತ್ರಿಕ ಮತದಾನ ಪದ್ದತಿ ಇರಲಿ ಎಂಬುದಾಗಿತ್ತು. ಮೊದಲನೇ ದುಂಡು ಮೇಜಿನ ಸಭೆಯಲ್ಲಿ ಅಂಬೇಡ್ಕರರು ಶೋಷಿತ ದಲಿತರಿಗೆ 10 ವರ್ಷಗಳ ಕಾಲ ಪ್ರ ತ್ಯೇಕ ಅನುಪಾತಿಕ ಪ್ರಾತಿನಿಧ್ಯದ ವ್ಯವಸ್ಥೆ ಇರಲಿ ಎಂದು ಪ್ರತಿಪಾದಿಸಿದರು. ಗಾಂಧೀಜಿ ಮತ್ತು ಕಾಂಗ್ರೆಸಿಗರು ಅದನ್ನು ವಿರೋಧಿಸಿದರು. ದಲಿತರಿಗೆ ಎರಡು ಮತದಾನದ ಹಕ್ಕು- ಒಂದು ದಲಿತರನ್ನು ಪ್ರತಿನಿಧಿಸಲು ಮತ್ತೊಂದು ಸಾಮಾನ್ಯ ಪ್ರತಿನಿಧಿಯನ್ನು ಚುನಾಯಿಸಲು- ಇರಬೇಕು ಎಂಬ ಬೇಡಿಕೆ ಇತ್ತು. ಹಿಂದೂಗಳ ಐಕ್ಯತೆ-ಗೆ ಧಕ್ಕೆಯಾಗುತ್ತದೆ ಎಂಬ ಕಾರಣಕ್ಕೆ ಗಾಂಧಿ ಅದನ್ನು ಒಪ್ಪಲಿಲ್ಲ. ಗಾಂಧೀಜಿಯವರು ಉಪವಾಸ ಸತ್ಯಾಗ್ರಹ ನಡೆಸಿದರು. ಈ ಹಿನ್ನೆಲೆಯಲ್ಲೇ ಅಂಬೇಡ್ಕರ್ ಮತ್ತು ಗಾಂಧೀಜಿಯವರ ನಡುವೆ ಪೂನಾ ಒಪ್ಪಂದವಾಯಿತು ಎಂದರು.

ಹೆಚ್ಚು ದಲಿತ ಮತ ಪಡೆದೂ ಸೋಲು ಕೊಳ್ಳೆಗಾಲ 'ಮೀಸಲು' ಕ್ಷೇತ್ರದ ಅನುಭವ

ಕೊಳ್ಳೆಗಾಲ ಮೀಸಲು ವಿಧಾನ ಸಭಾ ಕ್ಷೇತ್ರದ ಚುನಾವಣೆಯ ಅನುಭವ ಹಂಚಿಕೊಂಡ ಅವರು ಪರಿಶಿಷ್ಟ ಜಾತಿಯ ಮೀಸಲು ಕ್ಷೇತ್ರವಾದ ಕೊಳ್ಳೆಗಾಲದಲ್ಲಿ ದಲಿತ ಸಮುದಾಯದ ಹೆಚ್ಚಿನ ಬೆಂಬಲವಿಲ್ಲದ ಅಭ್ಯರ್ಥಿಯು ದಲಿತೇತರ ಸಮುದಾಯಗಳ ಮತಗಳನ್ನು ಪಡೆದು ಗೆದ್ದಿದ್ದು ದಲಿತರ ಹೆಚ್ಚಿನ ಮತಗಳಿಸಿದರೂ ಕೂಡ ತಾವು ಗೆಲ್ಲಲು ಸಾಧ್ಯವಾಗಲಿಲ್ಲ ಎಂದು ಅವರು ವಿವರಿಸಿದರು. ಈ ದೃಷ್ಟಿಯಲ್ಲಿ ದಲಿತ ಮೀಸಲು ಕ್ಷೇತ್ರದಲ್ಲಿ ಸಹ ದಲಿತ ಮತಗಳ ಹೆಚ್ಚಿನ ಪಾಲು ಪಡೆದವರು ಚುನಾವಣೆಯಲ್ಲಿ ಗೆಲ್ಲಲು ಸಾಧ್ಯವಾಗದ ಪರಿಸ್ಥಿತಿಯ ಕುರಿತು ಬೆಳಕು ಚೆಲ್ಲಿದರು.

'ಒಬ್ಬ ವ್ಯಕ್ತಿ-ಒಂದು ಮತ' ತತ್ವದ ಸಂವಿಧಾನ ಅಂಗೀಕಾರದ ಮೂಲಕ ರಾಜಕೀಯ ಸಮಾನತೆ ಸಾಧಿಸಿದ್ದೇವೆ. ಆದರೆ ರಾಜಕೀಯ-ಆರ್ಥಿಕ ಬದುಕಿನಲ್ಲಿ ಅಸಮಾನತೆ ಮುಂದುವರಿಯುತ್ತಿದೆ. ಈ ವೈರುಧ್ಯವನ್ನು ಸಾಧ್ಯವಾದಷ್ಟು ಬೇಗ ಪರಿಹರಿಸದಿದ್ದರೆ ಅದು ಸಂಸದೀಯ ಪ್ರಜಾಪ್ರಜಾಭುತ್ವ ವ್ಯವಸ್ಥೆಯನ್ನೇ ಧ್ವಂಸ ಮಾಡುತ್ತದೆ ಎಂಬ ಅಂಬೇಡ್ಕರರ ಎಚ್ಚರಿಕೆಯನ್ನು ನೆನಪಿಸಿದ ಮಹೇಶ್‌ರವರು ಸಿಪಿಐ(ಎಂ) ಪ್ರತಿಪಾದಿಸುತ್ತಿರುವ ಚುನಾವಣಾ ಸುಧಾರಣೆಗಳಿಗೆ ಬಿಎಸ್‌ಪಿಯ ಬೆಂಬಲವಿದೆ ಎಂದು ತಿಳಿಸಿದರು. ಹಣ, ಮಾಧ್ಯಮ, ಮಾಫಿಯಾಗಳ ಬೆಂಬಲದೊಂದಿಗೆ ಅಧಿಕಾರಕ್ಕೆ ಬಂದಿರುವ ಮೋದಿ ಸರಕಾರವನ್ನು ಕಾರ್ಯಕರ್ತರನ್ನು ಆಧರಿಸಿದ ಪಕ್ಷಗಳಾದ ಎಡಪಕ್ಷಗಳು ಮತ್ತು ಬಿಎಸ್‌ಪಿಯಂತಹ ಪಕ್ಷಗಳು ಸೋಲಿಸಬಹುದು ಎಂದು ಮಹೇಶ್ ಅವರು ಪ್ರತಿಪಾದಿಸಿದರು.

'ಇರುವ ಆಯ್ಕೆಗಳಲ್ಲಿ ಅನುಪಾತ ಪ್ರಾತಿನಿಧ್ಯ ವ್ಯವಸ್ಥೆಯೇ ಅತ್ಯುತ್ತಮ'- ಜಿ.ವಿ. ಶ್ರೀರಾಮರೆಡ್ಡಿ

ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿದ್ದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ. ಶ್ರೀರಾಮ ರೆಡ್ಡಿಯವರು ಅಧ್ಯಕ್ಷೀಯ ನುಡಿಗಳನ್ನಾಡಿ 'ಮನುಷ್ಯ ಹಣವನ್ನು ರೂಪಿಸಿದ. ಆದರೆ ನಂತರ ಹಣವೇ ಮನುಷ್ಯನನ್ನು ನಿಯಂತ್ರಿಸುತ್ತಿದೆ' ಎಂಬ ಮಾತೊಂದಿದೆ. ಎಲ್ಲವೂ ವ್ಯಾಪಾರೀಕರಣಗೊಂಡಿದೆ. ಚುನಾವಣೆಗಳು, ರಾಜಕೀಯ, ಕುಟುಂಬ ಸಂಬಂಧಗಳು, ಎಲ್ಲವನ್ನೂ ಹಣಬಲ ನಿಯಂತ್ರಿಸುತ್ತಿದೆ. ಅನುಪಾತ ಪ್ರಾತಿನಿಧ್ಯ ಚುನಾವಣಾ ಪದ್ಧತಿಯಲ್ಲಿ ದೋಷವಿರುವುದಿಲ್ಲವೆಂದಲ್ಲ. ಅದಕ್ಕಿಂತ ಉತ್ತಮ ವ್ಯವಸ್ಥೆ ಇದ್ದರೆ ಅದನ್ನೇ ಅಳವಡಿಸಿಕೊಳ್ಳಬಹುದು. ಆದರೆ ಸದ್ಯಕ್ಕೆ ಇರುವುದರಲ್ಲಿ ಅನುಪಾತ ಪ್ರಾತಿನಿಧ್ಯ ವ್ಯವಸ್ಥೆ ಉತ್ತಮ ಎಂದರು. ಸಾರ್ವಜನಿಕ ಸಭೆಗಳಿಗೆ, ಜನರೊಂದಿಗೆ ನೇರವಾಗಿ ಮಾತನಾಡುವ ಪ್ರಚಾರ ವ್ಯವಸ್ಥೆಗೆ ಚುನಾವಣಾ ಆಯೋಗವು ನಿರ್ಬಂಧ ಹಾಕಿದರೆ ಇಂತಹ ಕ್ರಮಗಳನ್ನೇ ಆಧರಿಸಿರುವ ಎಡಪಕ್ಷಗಳಂತಹ ಪಕ್ಷಗಳ ಮೇಲೆ ಧಾಳಿ ಮಾಡಿದಂತಾಗುತ್ತದೆ ಎಂದು ಅವರು ಅಭಿಪ್ರಾಯ ಪಟ್ಟರು. ●

JANASHAKTHI KANNADA VARA PATRIKE NOV 30, 2014 Price : Rs. 10/- RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO Licensed to Post without prepayment License No. WPP-283

ಜಗದಗಲ

ಶರತ್‌ಚಂದ್ರ

ಮೆಕ್ಸಿಕೊದಲ್ಲಿ ವ್ಯಾಪಕ ದಂಗೆ





ಕಳೆದ ಹಲವು ವರ್ಷಗಳಿಂದ ಲ್ಯಾಟಿನ್ ಅಮೆರಿಕದಿಂದ ಸಕಾರಾತ್ಮಕ ಒಳ್ಳೆಯ ಸುದ್ದಿಗಳೇ ಬರುತ್ತಿದ್ದರೆ, ಮೆಕ್ಸಿಕೊದಿಂದ ಮಾತ್ರ ತೀರಾ ಕೆಟ್ಟ ಸುದ್ದಿಯೇ ಬರುತ್ತಿದೆ. ಇತ್ತೀಚೆಗೆ 43 ವಿದ್ಯಾರ್ಥಿಗಳು ಕಾಣೆಯಾದ ಸುದ್ದಿ ಮೆಕ್ಸಿಕೊದಾದ್ಯಂತ ಹರಡುತ್ತಿದ್ದಂತೆ ದೇಶ ಮತ್ತು ಪ್ರಾಂತ್ಯಗಳ ರಾಜಧಾನಿಗಳು ಸೇರಿದಂತೆ ನೂರಕ್ಕಿಂತಲೂ ಹೆಚ್ಚು ಪಟ್ಟಣಗಳಲ್ಲಿ ಸಾವಿರಾರು ಜನ ಪ್ರತಿಭಟನಾ ಪ್ರದರ್ಶನ ಮಾಡಿದರು. ವಿದ್ಯಾರ್ಥಿಗಳು, ಶಿಕ್ಷಕರು, ವಿದ್ಯಾರ್ಥಿಗಳ ಪೋಷಕರು ಮತು ನಾಗರಿಕರು ದೊಡ್ಡ ಸಂಖ್ಯೆಯಲ್ಲಿ ಪ್ರದರ್ಶನಗಳಲ್ಲಿ ಭಾಗವಹಿಸುತ್ತಿದ್ದರು. ಮಾತ್ರವಲ್ಲ, ಸರಕಾರದ ಮೇಲೆ ಆಕ್ರೋಶ ಎಷ್ಟು ಜೋರಾಗಿತ್ತೆಂದ–ರೆ, ಅಧ್ಯಕ್ಷೀಯ ಅರಮನೆ ಮತ್ತು ಹಲವು ಸರಕಾರಿ ಕಚೇರಿಗಳ ಮೇಲೆ, ಕೇಂದ್ರ ಮತ್ತು ರಾಜ್ಯಗಳ ಆಳುವ ಪಕ್ಷದ ಕಚೇರಿಗಳ ಮೇಲೆ ದಾಳಿ ಮತ್ತು ಬೆಂಕಿ ಇಡುವುದು ನಡೆಯಿತು. ಅಂತರ್ರಾಷ್ಟ್ರೀಯವಾಗಿಯೂ ಸರಕಾರ ಪ್ರತಿಭಟನಾ ಪ್ರದರ್ಶನ ಮತ್ತು ಕಟು ಟೀಕೆ ಎದುರಿಸಬೇಕಾಯಿತು. ಈ ಆಘಾತಕಾರಿ ದುರಂತಕ್ಕೆ ಕಾರಣರಾದ ಒಂದು ನಗರದ ಮೇಯರ್, ಆತನ ಪತ್ನಿ, ಪೋಲಿಸ್ ಮುಖ್ಯಸ್ಥ, ಬಂಧಿತರಾಗಿದ್ದರೂ, ಆ ನಗರ ಇರುವ ಗವರ್ನರ್ ರಾಜಿನಾಮೆ ಕೊಟ್ಟಿದ್ದರೂ, ಪ್ರತಿಭಟನೆ ನಿಲ್ಲುವ ಲಕ್ಷಣಗಳಿಲ್ಲ. ಈ ಅಭೂತಪೂರ್ವ ವ್ಯಾಪಕ ದಂಗೆ ಮೆಕ್ಸಿಕೊವನ್ನು ಬುಡಸಮೇತ ಅಲ್ಲಾಡಿಸುವಂತೆ ಕಾಣುತ್ತಿದೆ.

ದಂಗೆಗೆ ಕಿಡಿಯಾದ ಘಟನೆ

ಸೆಪ್ಟೆಂಬರ್ 26ರಂದು ಗೆರೆರೊ ಪ್ರಾಂತ್ಯದ ಗ್ರಾಮೀಣ ಶಿಕ್ಷಕ ತರಬೇತಿ ಕಾಲೇಜೊಂದರ 100 ವಿದ್ಯಾರ್ಥಿಗಳು ಇಗುಲಾ ಎಂಬ ಪಟ್ಟಣಕ್ಕೆ ಪ್ರತಿಭಟನಾ ಪ್ರದರ್ಶನವೊಂದಕ್ಕೆ ತೆರಳುತ್ತಿದ್ದರು. ಅವರಿಗೆ ಶಿಕ್ಷಕರ ನೇಮಕಾತಿಯಲ್ಲಿ ಗ್ರಾಮೀಣ ಕಾಲೇಜು ವಿದ್ಯಾರ್ಥಿಗಳ ವಿರುದ್ಧ ತಾರತಮ್ಯದ ನೀತಿ ಪ್ರತಿಭಟಿಸುವ ಇರಾದೆ ಇತ್ತು. ಇಗುಲಾದ ಮೇಯರ್ ಮತ್ತು ಅವರ ಪತ್ನಿ ಭಾಗವಹಿಸುವ ಬಹಿರಂಗ ಸಭೆಯಲ್ಲಿ ಪ್ರತಿಭಟನೆ ಮಾಡಬೇಕೆಂದು ನಿರ್ಧರಿಸಿದ್ದರು. ಎಡ ವಿದ್ಯಾರ್ಥಿ ಚಳುವಳಿ ಬಲವಾಗಿರುವ ಈ ಕಾಲೇಜಿನ ವಿದ್ಯಾರ್ಥಿಗಳ ಪ್ರತಿಭಟನೆ ಹೇಗಾದರೂ ತಡೆಯಬೇಕೆಂದು ಪೋಲಿಸರಿಗೆ ಆಜ್ಞೆ ಇತ್ತು. ಇಗುಲಾಗೆ ಹೋಗಲು ಬಸ್‌ನಲ್ಲಿ ಹೋಗುತ್ತಿರುವಾಗ ಅವರನ್ನು ತಡೆಯುವ ಪ್ರಯತ್ನದಲ್ಲಿ ಪೋಲೀಸರು ಗುಂಡು ಹಾರಿಸಿದ್ದಾರೆ. ಅದರಲ್ಲಿ 6 ವಿದ್ಯಾರ್ಥಿಗಳು ಸತ್ತಿದ್ದಾರೆ. ಉಳಿದ ವಿದ್ಯಾರ್ಥಿಗಳನ್ನು ಬಂಧಿಸಲು ಯತ್ನಿಸಿದಾಗ ಹಲವು ವಿದ್ಯಾರ್ಥಿಗಳು ಹತ್ತಿರದ ಗುಡ್ಡಗಳಿಗೆ ಓಡಿ ಹೋಗಿ ತಪ್ಪಿಸಿಕೊಂಡಿದ್ದಾರೆ. ಅವರೆಲ್ಲರು ಬೇರೆ ಬೇರೆ ದಾರಿಗಳಿಂದ ವಾಪಸಾದಾಗ ತಿಳಿದದ್ದು 43 ವಿದ್ಯಾರ್ಥಿಗಳ ಲೆಕ್ಕ ಸಿಕ್ಕಿಲ್ಲ. ಪೋಲೀಸರು ತಮ್ಮ ವಶದಲ್ಲಿ ಯಾರೂ ಇಲ್ಲ ಎಂದು ಹೇಳಿಕೆ ನೀಡಿದಾಗ ಪ್ರತಿಭಟನಾ ಪ್ರದರ್ಶನಗಳು ಆರಂಭವಾದವು. ಮೊದಮೊದಲಿಗೆ ವಿದ್ಯಾರ್ಥಿಗಳು, ಶಿಕ್ಷಕರು, ಕಾಣೆಯಾದ ವಿದ್ಯಾರ್ಥಿಗಳ ಪೋಷಕರಿಗೆ, ಹಾಗೂ ಗೆರೆರೊ ಪಾಂತ್ಯ, ರಾಜಧಾನಿ ಮೆಕ್ಸಿಕೊ ಸಿಟಿಗೆ ಸೀಮಿತವಾಗಿದ್ದ ಶಾಂತಿಯುತ ಪ್ರತಿಭಟನಾ ಪ್ರದರ್ಶನಗಳು, ದೇಶದಾದ್ಯಂತ ಹಿಂಸಾತ್ಮಕ ಪ್ರದರ್ಶನಗಳು ದಂಗೆಗಳಿಗೆ ಎಡೆ ಮಾಡಿಕೊಟ್ಟವು.

ಇದಕ್ಕೆ ಮುಖ್ಯ ಕಾರಣ ಎಲ್ಲಾ ಹಂತದ ಸರಕಾರಗಳು ಕಾಣೆ ಪ್ರಕರಣದಲ್ಲಿ ಶಾಮೀಲಾಗಿವೆ ಎಂದು ಕೇಂದ್ರ ಸರಕಾರ ನಡಸಿದ ತನಿಖೆಗಳಿಂದಲೇ ಬಹಿರಂಗವಾಗುತ್ತಾ ಹೋಯಿತು. ತನಿಖೆ ಮುಂದೆ ಸಾಗಿದಂತೆ ಜನತೆಯ ಆಕೋಶ ಹೆಚ್ಚುತ್ತಾ ಹೋಯಿತು. ತನಿಖೆಗಳ ಪ್ರಕಾರ ಇಗುಲಾ ಮೇಯರ್ ಆಜ್ಞೆಯ ಮೇರೆಗೆ ವಿದ್ಯಾರ್ಥಿಗಳ ಬಸ್ ತಡೆ, ಗೋಳೀಬಾರು ಮತ್ತು ಬಂದನ ನಡೆದಿತ್ತು. ಆದರೆ ಬಂಧನದ ನಂತರದ ಘಟನಾವಳಿ ಇಡೀ ದೇಶ ಯಾಕೆ ಜಗತ್ತನ್ನೇ ದಂಗು ಬಡಿಸಿತು. ಪೋಲಿಸರು ಬಂಧಿಸಿದ ವಿದ್ಯಾರ್ಥಿಗಳನ್ನು 'ಗೆರೆರೊಸ್ ಯುನಿಡೊ' ಎಂಬ ಕ್ರೈಂ ಸಿಂಡಿಕೇಟ್‌ನ ಸಶಸ್ತ್ರ ಪಡೆಗೆ ಒಪ್ಪಿಸಲಾಯಿತು. ಅವರು ಈ ವಿದ್ಯಾರ್ಥಿಗಳಿಗೆ ಚಿತ್ರಹಿಂಸೆ ಕೊಟ್ಟು ಕೊಂದರು. ಅವರ ಬಟ್ಟೆಗಳನ್ನು ಮತ್ತು ದೇಹಗಳನ್ನು ಪ್ರತ್ಯೇಕವಾಗಿ ಡಿಸೆಲ್, ಗ್ಯಾಸೊಲಿನ್, ಟೈರ್, ಮರ, ಪ್ಲಾಸ್ಟಿಕ್ ಜತೆ ಯಾವುದೇ ಸುಳಿವು ಸಿಗದಂತೆ ಸುಡಲಾಯಿತು. ಅದನ್ನು ನೀರಿಗೆ ಎಸೆಯಲಾಯಿತು.

ವ್ಯಾಪಕ ದಂಗೆಗಳಿಗೆ ಕಾರಣಗಳೇನು?

ತನಿಖೆ ಮುಂದುವರೆಯತ್ತಿದ್ದಂತೆ ಇಗುಲಾದ 22 ಪೋಲೀಸ್ ಅಧಿಕಾರಿಗಳನ್ನು ಬಂಧಿಸಲಾಯಿತು. ಅವರ ಹೇಳಿಕೆಯ ಆಧಾರದ ಮೇಲೆ ಬಂಧಿತರಾದ 'ಗೆರೆರೊಸ್ ಯುನಿಡೊ' ಗ್ಯಾಂಗಿನ ಸದಸ್ಯರು ತೋರಿಸಿದ ಜಾಗದಲ್ಲಿ ಅನಾಮಧೇಯ ದೇಹಗಳ ಸುಟ್ಟ ಭಾಗಗಳು ಸಿಕ್ಕಿದವು. ದೇಹಗಳ ಸುಟ್ಟ ಭಾಗಗಳು ಎಂತಹ ಸ್ಥಿತಿಯಲ್ಲಿ ಇದ್ದವೆಂದರೆ, ದೇಹಗಳ ಗುರುತು ಹಿಡಿಯಲು ಸಾಮಾನ್ಯ ಡಿಎನ್‌ಎ ಪರೀಕ್ಷಣೆ–ಯೂ ಸಾಧ್ಯವಿರಲಿಲ್ಲವಂತೆ. ಮಾತ್ರವಲ್ಲ, ಈ ಹುಡುಕಾಟದಲ್ಲಿ ಇಂತಹ ನೂರಾರು ಸುಟ್ಟ ದೇಹಗಳ ಭಾಗಗಳು ಸಿಕ್ಕಿ ಇಡೀ ದೇಶವನ್ನು ಬೆಚ್ಚಿ ಬೀಳಿಸಿತು.

ತನಿಖೆ ನಡೆಯುತ್ತಿದ್ದಂತೆ ಇಗುಲಾ ಮೇಯರ್, ಆತನ ಪತ್ನಿ ಕಾಣೆಯಾದರು. ಹಲವು ದಿನಗಳ ನಂತರ ಅವರನ್ನು ಮತ್ತು ಪೋಲಿಸ್ ಮುಖ್ಯಸ್ಥನನ್ನು ಬಂಧಿಸಲಾಯಿತು. ಅಷ್ಟು ಹೊತ್ತಿಗೆ ಮೇಯರ್ ಆಣತಿ ಮತ್ತು ಪೋಲಿಸ್ ಮುಖ್ಯಸ್ಥನ ಆಜ್ಞೆ ಮೇರೆಗೆ ವಿದ್ಯಾರ್ಥಿಗಳನ್ನು 'ಯುನಿಡೊ' ಗ್ಯಾಂಗಿಗೆ ಕೊಡಲಾಗಿತ್ತು ಎಂಬುದು ಸ್ಪಷ್ಟ ವಾಗಿತ್ತು. ದೇಶದ ಅಟಾರ್ನಿ ಜನರಲ್ ವಿದ್ಯಾರ್ಥಿಗಳ ಪೋಷಕರ ಜತೆ ಒಂದು ಸಭೆ ನಡೆಸಿ ವಿದ್ಯಾರ್ಥಿಗಳ ದೇಹಗಳ ಭಾಗಗಳ ಡಿಎನ್‌ಎ ಪರೀಕ್ಷಣೆಯೂ ಸಾಧ್ಯವಿಲ್ಲವೆಂದರು. ಹೆಚ್ಚಿನ ಪರೀಕ್ಷಣೆಗೆ ಅದನ್ನು ಆಸ್ಟ್ರಿಯಕ್ಕೆ ಕಳಿಸಲಾಗುವುದು ಎಂದರು. ವಿದ್ಯಾರ್ಥಿಗಳ ಪೋಷಕರು ಅದನ್ನು ನಂಬದೆ ತಮ್ಮ ಮಕ್ಕಳು ಪೋಲೀಸರ ವಶದಲ್ಲಿ ಜೀವಂತವಿದ್ದಾರೆ. ಸ್ವತಂತ್ರ ತನಿಖೆ ಮೂಲಕ ಪುರಾವೆ ಸಹಿತ ಸಿದ್ಧವಾಗುವವರೆಗೆ ನಾವು ಸರಕಾರದ ಹೇಳಿಕೆಯನ್ನು ನಂಬುವುದಿಲ್ಲ ಎಂದೂ ವಿದ್ಯಾರ್ಥಿಗಳು ಕಾಣೆಯಾದ ಪ್ರಕರಣವನ್ನು ಮುಚ್ಚಲು ಬಿಡುವುದಿಲ್ಲವೆಂದು ಹೇಳಿದ್ದಾರೆ. ಇದನ್ನು ಸರಕಾರಕ್ಕೆ ಒಪ್ಪದೆ ವಿಧಿಯಿಲ್ಲ.

ಮೆಕ್ಸಿಕೊದಲ್ಲಿ ಮಾದಕ ದ್ರವ್ಯಗಳ ಸಾಗಾಣಿ–ಕೆ, ಮಾರಾಟವನ್ನು ತಮ್ಮ ಮುಖ್ಯ ವಹಿವಾಟು ಮಾಡಿಕೊಂಡಿರುವ ಕ್ರೈಂ ಸಿಂಡಿಕೇಟ್‌ಗಳು ಎಲ್ಲಾ ಹಂತಗಳ ಸರಕಾರ ಮತ್ತು ಪೋಲಿಸ್ ವ್ಯವಸ್ಥೆ ಜತೆ ನಿಕಟ ಸಂಬಂಧ ಇರುವುದು ಗುಟ್ಟೇನಲ್ಲ. ಈ ಕ್ರೈಂ ಸಿಂಡಿಕೇಟ್‌ಗಳ ನಡುವೆ ಸಶಸ್ತ್ರ ಕಾದಾಟ, ಅವುಗಳಿಗೆ ಪ್ರಮುಖ ರಾಜಕೀಯ ಪಕ್ಷಗಳ ವ್ಯಕ್ತಿಗಳ, ಚುನಾಯಿತ ಪ್ರತಿನಿಧಿಗಳ ಬೆಂಬಲ, ಜನರ ಪ್ರತಿಭಟನೆ ಚಳುವಳಿಗಳ ದಮನಕ್ಕೆ ಕ್ರೈಂ ಸಿಂಡಿಕೇಟ್‌ಗಳ ಬಳಕೆ ಸಹ ಎಲ್ಲರಿಗೂ ಗೊತ್ತಿರುವ ವಿಷಯ. ಮೆಕ್ಸಿಕೊದ್ದು ಮಾದಕ ದ್ರವ್ಯ–ಪ್ರಭುತ್ವ (ನಾರ್ಕೊ–ಸ್ಟೇಟ್) ಎಂದು ಹಲವು ಎಡ ಶಕ್ತಿಗಳು ಬಣ್ಣಿಸಿವೆ. 43 ವಿದ್ಯಾರ್ಥಿಗಳು ಕಾಣೆಯಾದ ಘಟನಾವಳಿ ನಾರ್ಕೊ–ಸ್ಟೇಟ್‌ನ ಭೀಭತ್ಸ ವಾಸ್ತವವನ್ನು ಮೆಕ್ಸಿಕೊದ ಎಲ್ಲಾ ಜನವಿಭಾಗಗಳಿಗೂ ಕಣ್ಣಿಗೆ ರಾಚುವಂತೆ ಮಾಡಿದೆ. ಕೇಂದ್ರ ಮತ್ತು ಎಲ್ಲಾ ಹಂತದ ಸರಕಾರಗಳು ಎಲ್ಲಾ ವಿಶ್ವಾಸಾರ್ಹತೆಯನ್ನು ಕಳೆದುಕೊಳ್ಳುತ್ತಿವೆ. ಆದ್ದರಿಂದಲೇ ಇಗುಲಾದ ಮೇಯರ್, ಆತನ ಪತ್ನಿ, ಪೋಲಿಸ್ ಮುಖ್ಯಸ್ಥ, ಬಂಧಿತರಾಗಿದ್ದರೂ, ಗೆರೆರೊ ಪ್ರಾಂತ್ಯದ ಗವರ್ನರ್ ರಾಜಿನಾಮೆ ಕೊಟ್ಟಿದ್ದರೂ ದಂಗೆಗಳು ನಿಂತಿಲ್ಲ. ಇದು ಬರಿಯ ಒಂದು ನಗರದ, ಪ್ರಾಂತ್ಯದ ಸರಕಾರ–ಪೋಲಿಸ್–ಕ್ರೈಂ ಸಿಂಡಿಕೇಟ್ ಶಾಮಿಲಾಗಿರುವ ಪ್ರಕರಣ ಅಲ್ಲ. ಇದು ವ್ಯವಸ್ಥೆಯಲ್ಲಿ ಕೆಲವು 'ಕೆಟ್ಟ' ವ್ಯಕ್ತಿಗಳು ಸೇರಿಕೊಂಡಿರುವ ಅಪವಾದವೂ ಅಲ್ಲ. ಇಡೀ ವ್ಯವಸ್ಥೆಯೇ ಹೀಗಿದೆ ಎಂದು ಮೆಕ್ಸಿಕೊದ ಹೆಚ್ಚಿನ ಜನವಿಭಾಗಗಳಿಗೆ ಅನಿಸಿರುವುದು ಈ ಆಕ್ರೋಶಕ್ಕೆ ಕಾರಣ. ಆದ್ದರಿಂದಲೇ ಲಕ್ಷದಷ್ಟು ಜನ ಸೇರಿದ್ದ ಮೆಕ್ಸಿಕೊ ನಗರದ ದೊಡ್ಡ ಪ್ರತಿಭಟನಾ ಪ್ರದರ್ಶನದಲ್ಲಿ ಹಲವು ಪ್ರಸಿದ್ಧ ಕವಿಗಳು, ಸಾಹಿತಿಗಳು, ಕಲಾವಿದರು ಭಾಗವಹಿಸಿದ್ದರು.

ದಂಗೆಗಳ ಪರಿಣಾಮಗಳೇನು ?

ವಿದ್ಯಾರ್ಥಿಗಳು ನಿಜವಾಗಿಯೂ ಕೊಲೆಯಾಗಿದ್ದಾರೆ ಎಂದು ಸ್ವತಂತ್ರ ತನಿಖೆಯಲ್ಲಿ ಪುರಾವೆ ಸಹಿತ ಸಿದ್ಧ ಪಡಿಸುವವರೆಗೆ, ಅವರ ಕೊಲೆಯಲ್ಲಿ ಶಾಮೀಲಾದ ಎಲ್ಲಾರಿಗೂ ಶಿಕ್ಷೆ ಆಗುವವರೆಗೆ ಜನರ ಆಕ್ರೋಶ ಕಡಿಮೆ ಆಗುವ ಸಂಭವ ಕಡಿಮೆ. ಲ್ಯಾಟಿನ್ ಅಮೆರಿಕದಲ್ಲಿ ಉತ್ತರದ ಹಿರಿಯಣ್ಣನಿಗೆ ವಿಧೇಯನಾಗಿ ನವ–ಉದಾರವಾದಿ ನೀತಿಗಳನ್ನು ಪ್ರತಿಭಟಿಸುವ ಜನತೆಯ ಮೇಲೆ ಕ್ರೈಂ ಸಿಂಡಿಕೇಟುಗಳನ್ನು ಬಳಸಲು ಹೇಸದ ಮೆಕ್ಸಿಕೊ ಪ್ರಭುತ್ವ ತೀವ್ರ ರಾಜಕೀಯ ಬಿಕ್ಕಟ್ಟನ್ನು ಎದುರಿಸುವುದು ಖಚಿತ. ಈ ಪ್ರಭುತ್ವದ ವಿರುದ್ಧ ಮೂರು ಪ್ರಮುಖ ಚಳುವಳಿಗಳು ಬೆಸೆದು ಒಂದಾಗಿ ಅದಕ್ಕೆ ಸವಾಲು ಎಸಗಿ ಮೂಲಭೂತ ಬದಲಾವಣೆಗೆ ಪ್ರಯತ್ನಿಸುವ ಸಾಧ್ಯತೆ ಹೆಚ್ಚಿದೆ.

ಹಿಂದಿನಿಂದಲೂ ನಡೆಯತ್ತಿರುವ ಆದರೆ 2006ರಿಂದ ತೀವ್ರವಾಗಿರುವ ಮಾದಕ–ದ್ರವ್ಯ ಕ್ರೈಂ ಸಿಂಡಿಕೇಟುಗಳ ನಡುವೆ ಸಶಸ್ತ್ರ ಕಾದಾಟಕ್ಕೆ ಕಡಿವಾಣ ಹಾಕಬೇಕು. ಕ್ರೈಂ ಸಿಂಡಿಕೇಟುಗಳನ್ನು ಮಟ್ಟ ಹಾಕಬೇಕು ಎಂದು 2011ರಲ್ಲಿ ದೇಶವ್ಯಾಪಿ ಶಾಂತಿ ಚಳುವಳಿ ನಡೆಯಿತು. 2012ರಲ್ಲಿ ಸರ್ಕಾರದ ಸರ್ವಾಧಿಕಾರದ ಧೋರಣೆ–ಯ ವಿರುದ್ಧ ದೊಡ್ಡ ವಿದ್ಯಾರ್ಥಿ ಚಳುವಳಿ ನಡೆಯಿತು. 2013ರಲ್ಲಿ ಸರಕಾರ ತಂದ ಶಿಕ್ಷಣ ಸುಧಾರಣೆಗಳ ಪ್ರಕಾರ ಶಿಕ್ಷಕರಿಗೆ ಅಮೆರಿಕದಲ್ಲಿ ಇದ್ದ ಮಾನದಂಡಗಳ ಪ್ರಕಾರ ಪರೀಕ್ಷೆ ನಡೆಸಲಾಗುವುದು. ಇದರಲ್ಲಿ ಪಾಸಾಗದ ಶಿಕ್ಷಕರು ಕೆಲಸ ಕಳೆದುಕೊಳುತ್ತಾರೆ. ಗ್ರಾಮೀಣ ಕಾಲೇಜುಗಳ ವಿದ್ಯಾರ್ಥಿಗಳ ಪಾಲಿಗೆ ಇದು ಉದ್ಯೋಗದ ಬಾಗಿಲು ಮುಚ್ಚಿದಂತೆ. ಈ ನೀತಿಯ ವಿರುದ್ಧ ಶಿಕ್ಷಕರ ಯೂನಿಯನಗಳು ವ್ಯಾಪಕ ಪ್ರತಿಭಟನೆ ಹಮ್ಮಿಕೊಂಡಿವೆ. ಇದರ ಭಾಗವಾಗಿಯೇ ಇಗುಲಾ ಪ್ರತಿಭಟನೆಯನ್ನು ಹಮ್ಮಿಕೊಂಡದ್ದು. ಈ ಮೂರು – ಅಂದರೆ ಮಾದಕ–ದ್ರವ್ಯ ಕ್ರೈಂ ಸಿಂಡಿಕೇಟುಗಳ, ಸರ್ವಾಧಿಕಾರದ ಧೋರಣೆಯ ಮತ್ತು ನವ–ಉದಾರವಾದಿ ನೀತಿಗಳ ವಿರುದ್ಧ – ಚಳುವಳಿಗಳು ಬೆಸೆದು ಪ್ರಬಲ ಐಕ್ಯ ಚಳುವಳಿಯೊಂದು ಮೂಡಿಬರಬಹುದು ಎಂದು ನಿರೀಕ್ಷಿಸೋಣ. ಮೆಕ್ಸಿಕೊ ಇತರ ಲ್ಯಾಟಿನ್ ಅಮೆರಿಕದ ದೇಶಗಳ ಪ್ರಗತಿಪರ ರಾಜಕೀಯದತ್ತ ಹೊರಳುವುದು ಎಂದು ಆಶಿಸೋಣ.

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**